# ಕರ್ನಾಟಕದಲ್ಲಿ 2009–10 ರಿಂದ 2013–14ರ ಅವಧಿಯಲ್ಲಿ ಪರಿಶಿಷ್ಠ ಪಂಗಡದ ಭೂ ರಹಿತ ಮಹಿಳೆಯರಿಗೆ ಭೂಮಿ ಖರೀದಿ ಮತ್ತು ಭೂ ಹಂಚಿಕೆ ಯೋಜನೆಯ ಮೌಲ್ಯಮಾಪನ.

ಕರಡು ಪ್ರತಿ



**ಸಲ್ಲಿಸಲಾಗಿದೆ.**

**ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ.**

**ಮತ್ತು**

**ಮಹರ್ಷಿ ವಾಲ್ಮೀಕಿ ಪರಿಶಿಷ್ಠ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತ**

**(ಕರ್ನಾಟಕ ರಾಜ್ಯ ಸರ್ಕಾರದ**

**ಇಂಡಿಯನ್ ರಿಸೋರ್ಸ್‌ಸ್ ಇನ್ಫರ್ಮೇಷನ್ ಅಂಡ್ ಮ್ಯಾನೇಜ್‌ಮೆಂಟ್ ಟೆಕ್ನಾಲಜೀಸ್ ಲಿ. (IN-RIMT),**
**593, 9 ನೇ 'ಏ' ಮುಖ್ಯ ರಸ್ತೆ, 14 ನೇ ಅಡ್ಡ ರಸ್ತೆ, ಇಸ್ರೋ ಬಡಾವಣೆ, ಬೆಂಗಳೂರು 560 111.**

**ಏಪ್ರಿಲ್. 2017**

ಕರಡು ಪ್ರತಿ

# ಕರ್ನಾಟಕದಲ್ಲಿ 2009–10 ರಿಂದ 2013–14ರ ಅವಧಿಯಲ್ಲಿ ಪರಿಶಿಷ್ಠ ಪಂಗಡದ ಭೂ ರಹಿತ ಮಹಿಳೆಯರಿಗೆ ಭೂಮಿ ಖರೀದಿ ಮತ್ತು ಭೂ ಹಂಚಿಕೆ ಯೋಜನೆಯ ಮೌಲ್ಯಮಾಪನ.

**ಸಲ್ಲಿಸಲಾಗಿದೆ.**

**ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ.**

**ಮತ್ತು**

**ಮಹರ್ಷಿ ವಾಲ್ಮೀಕಿ ಪರಿಶಿಷ್ಠ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತ**

**(ಕರ್ನಾಟಕ ರಾಜ್ಯ ಸರ್ಕಾರದ**


**ಇಂಡಿಯನ್ ರಿಸೋರ್ಸ್‌ಸ್ ಇನ್ಫರ್ಮೇಷನ್ ಅಂಡ್ ಮ್ಯಾನೇಜ್‌ಮೆಂಟ್ ಟೆಕ್ನಾಲಜೀಸ್ ಲಿ. (IN-RIMT),**

**593, 9 ನೇ 'ಏ' ಮುಖ್ಯ ರಸ್ತೆ, 14 ನೇ ಅಡ್ಡ ರಸ್ತೆ, ಇಸ್ರೋ ಬಡಾವಣೆ, ಬೆಂಗಳೂರು 560 111.**


**ಏಪ್ರಿಲ್. 2017**

**ವಿಷಯ ಸೂಚಿ.**


| | ಪುಟ ಸಂಖ್ಯೆ. |
|---|---|
| ತಾತ್ಪರ್ಯ | i - viii |
| 1. ಅಧ್ಯಾಯ–1. | 1 – 4 |
| 1.1 ಹಿನ್ನೆಲೆ | 1 |
| 1.2 **ಪರಿಶಿಷ್ಟ ಪಂಗಡದ** ಆರ್ಥಿಕತೆ ಮತ್ತು ಸಂಸ್ಕೃತಿ | 2 |
| 2. ಅಧ್ಯಾಯ–2 | 5 – 6 |
| 2. ಮಧ್ಯ ಪ್ರವೇಶದ ಅಗತ್ಯ | 5 |
| 3. ಅಧ್ಯಾಯ–3 | 7 – 9 |
| 3. ಭೂಮಿ ಖರೀದಿ ಮತ್ತು ಹಂಚಿಕೆ ಯೋಜನೆ – ಮರು ಪರಿಶೀಲನೆ | 7 |
| 3.1. ಯೋಜನೆಯ ಸ್ಥಾನಮಾನ | 7 |
| 3.2. ಲೋಪ ದೋಷಗಳು | 8 |
| 4. ಅಧ್ಯಾಯ–4 | 10 – 12 |
| 4. ವ್ಯಾಪ್ತಿ, ಗುರಿ ಮತ್ತು ಅಧ್ಯಯನದ ರೂಪರೇಶೆ | 10 |
| 4.1. ಅಧ್ಯಯನದ ವ್ಯಾಪ್ತಿ | 10 |
| 4.2. ಧ್ಯೇಯಗಳು | 11 |
| 4.3. ಅಧ್ಯಯನದ ರೂಪರೇಶೆ | 12 |
| 5. ಅಧ್ಯಾಯ–5 | 13 – 15 |
| 5. ವಿಧಾನ | 13 |
| 5.1. ಮಾಹಿತಿ ಸಂಗ್ರಹ. | 13 |
| 5.2.ಗುಂಪಾಗಿ ಕೇಂದ್ರೀಕೃತ ಚರ್ಚೆ | 14 |
| 5.3.ಮಾಹಿತಿಯ ವಿಶ್ಲೇಷಣೆ. | 15 |
| 5.4.ಅಧ್ಯಯನದ ಮಿತಿಗಳು | 15 |
| 6. ಅಧ್ಯಾಯ–6 | 16 – 43 |
| 6. ಅಧ್ಯಯನದಿಂದ ಕಂಡುಬಂದಿದ್ದು | 16 |
| 6.1. ಭೂ ಮಾಲೀಕ ಮಾರಾಟಗಾರರನ್ನು ಗುರುತಿಸುವುದು. | 16 |
| 6.2. ಭೂ ಮಾರಾಟಗಾರರ ಆರ್ಥಿಕ ಸ್ಥಾನ | 17 |
| 6.3. **ಜಮೀನಿಗೆ ತಲುಪುವುದು, ಸೂಕ್ತತೆ, ಮತ್ತು ಮಣ್ಣಿನ ಗುಣ** | 18 |
| 6.4.ಫಲಾನುಭವಿಗಳನ್ನು ಗುರುತಿಸುವುದು | 18 |
| 6.5.ಗ್ರಾಮ ಪಂಚಾಯತಿಗಳ ಪಾತ್ರ | 19 |

| | |
|---|---|
| 6.6.ಜನ ಪ್ರತಿನಿಧಿಗಳ ಪಾತ್ರ | 19 |
| 6.7.ನಿಯಮಗಳು ಮತ್ತು ಕಾರ್ಯವಿಧಾನಗಳು. | 19 |
| 6.8. ಕಾಲಮಿತಿ | 21 |
| 6.9. ಪ್ರಮುಖ ವಿಷಯಗಳು | 22 |
| 6.10. ಪರಿಶಿಷ್ಟ ಪಂಗಡದ ಉಪ ಜಾತಿ/ಗುಂಪುಗಳು | 23 |
| 6.11. ವಯಸ್ಸಿನ ಪ್ರಕಾರ ಜನರ ಹಂಚಿಕೆ | 24 |
| 6.12. ವೈವಾಹಿಕ ಸ್ಥಿತಿ | 25 |
| 6.13. ವೃತ್ತಿ | 25 |
| 6.14. ವಿಧ್ಯಾಭ್ಯಾಸ | 26 |
| 6.15. ಫಲಾನುಭವಿಗಳ ಸಂಬಂಧ | 27 |
| 6.16. ಕುಟುಂಬದ ಆದಾಯ. | 27 |
| 6.17. ಭೂಮಿ ಹಂಚಿಕೆಗೆ ಮೊದಲು ಭೂಮಿಯ ಒಡೆತನ | 27 |
| 6.18 ಭೂಮಿಯ ವಿಧ ಮತ್ತು ಬೆಲೆಯ ಆಧಾರದ ಮೇಲೆ ಭೂ ಹಂಚಿಕೆ | 27 |
| 6.19. ಭೂಮಿಯ ಚಕ್ಕುಬಂದಿ ಗುರುತು. | 31 |
| 6.20. ಕೊರೆಸಿದ ಕೊಳವೆ ಭಾವಿಗಳು. | 32 |
| 6.21. ಫಸಲು ವಿಮೆ | 33 |
| 6.22. ಸಾಲ ಮರುಪಾವತಿ | 34 |
| 6.23. ಹಂಚಿಕೆಯಾದ ಭೂಮಿಯನ್ನು ಗುತ್ತಿಗೆಗೆ ನೀಡುವುದು | 36 |
| 6.24. ಜಮೀನಿನ ಭೌತಿಕ ಒಡೆತನ | 36 |
| 6.25. ಯೋಜನೆ ನಂತರದ ಮಹತ್ತರ ಪರಿಣಾಮಗಳು | 37 |
| ಅಧ್ಯಾಯ–7. | 44–47 |
| ಅಂತಿಮ ತೀರ್ಮಾನಗಳು. | 44 |
| ಅಧ್ಯಾಯ–8 | 48–49 |
| ಶಿಫಾರಸ್ಸುಗಳು. | 48 |

**ಕೋಷ್ಟಕಗಳು.** **ಪುಟ ಸಂಖ್ಯೆ**


| | |
|---|---|
| **ಕೋಷ್ಟಕ**–೧. ಜಿಲ್ಲಾವಾರು ಜನಸಂಖ್ಯೆ ಅದರಲ್ಲಿ ಪರಿಶಿಷ್ಠ ಪಂಗಡದ ಸಂಖ್ಯೆ | 3 |
| **ಕೋಷ್ಟಕ**–2 ಯೋಜನೆಯ ಪ್ರಗತಿ. | 8 |
| **ಕೋಷ್ಟಕ**–3 ಕ್ಷೇತ್ರ ಭೇಟಿ ವಿವರಗಳು ಮತ್ತು ವಿಷಯ ಕೇಂದ್ರಿತ ಗುಂಪು ಚರ್ಚೆ ಪ್ರತಿಕ್ರಿಯೆಗಳು | 14 |
| **ಕೋಷ್ಟಕ**–4 ಭೂಮಿಯನ್ನು ಗುರುತಿಸುವವರು. | 17 |
| **ಕೋಷ್ಟಕ**–5 ಭೂ ಮಾರಾಟಗಾರರ ಹೊರ ಚಿತ್ರಣ | 17 |
| **ಕೋಷ್ಟಕ**–6 ಜಮೀನಿಗೆ ತಲುಪಲು ಮತ್ತು ಕೃಷಿಗೆ ಜಮೀನಿನ ಸೂಕ್ತತೆ. | 18 |
| **ಕೋಷ್ಟಕ**–7 ಅನುಮೋದನೆಗೆ ಕಾರ್ಯವಿಧಾನ. | 21 |
| **ಕೋಷ್ಟಕ**–8 ಕಾರ್ಯವಿಧಾನವನ್ನು ಪೂರ್ಣಗೊಳಿಸಲು ತೆಗೆದುಕೊಂಡ **ಕಾ**ಲ. | 22 |
| **ಕೋಷ್ಟಕ**–9 ಆಯ್ದ ಫಲಾನುಭವಿಗಳ ವಿವರಗಳು. | 23 |
| **ಕೋಷ್ಟಕ**–10 ವಿವಿಧ ವಯಸ್ಸಿನ ಗುಂಪುಗಳು | 24 |
| **ಕೋಷ್ಟಕ**–11 ವೈವಾಹಿಕ ಸ್ಥಿತಿ. | 25 |
| **ಕೋಷ್ಟಕ**–12 ಫಲಾನುಭವಿಗಳ ಮತ್ತು ಅವರ ಗಂಡಂದಿರ ವೃತ್ತಿ ವಿವರಗಳು. | 25 |
| **ಕೋಷ್ಟಕ**–13 ಫಲಾನುಭವಿಗಳ ವಿದ್ಯಾಭ್ಯಾಸ ಮಟ್ಟ. | 26 |
| **ಕೋಷ್ಟಕ**–14 ಆದಾಯ ಗುಂಪುಗಳು. | 27 |
| **ಕೋಷ್ಟಕ**–15 ಖರೀದಿಸಿದ ಭೂಮಿಯ ವಿವರಗಳು. | 28 |
| **ಕೋಷ್ಟಕ**–16 ಜಿಲ್ಲಾವಾರು ಹಂಚಿಕೆ ಮಾಡಿದ ಭೂಮಿಯ ತರಹೆ ಮತ್ತು ವಿಸ್ತೀರ್ಣ. | 28 |
| **ಕೋಷ್ಟಕ**–17 ಜಿಲ್ಲೆ, ವರ್ಷಾವಾರು ಹಂಚಿಕೆ ಮಾಡಲಾದ ಜಮೀನಿನ ಬೆಲೆಗಳ ವಿವರಗಳು. | 30–31 |
| **ಕೋಷ್ಟಕ**–18 ಚಕ್ಕುಬಂದಿಗಳನ್ನು ಗುರುತು ಮಾಡಿಲ್ಲದ ಜಮೀನುಗಳ. | 32 |
| **ಕೋಷ್ಟಕ**–19 ಕೊರೆಸಿದ ಕೊಳವೆ ಭಾವಿಗಳ ವಿವರಗಳು. | 33 |
| ಕೋಷ್ಟಕ–20 ಫಲಾನುಭವಿಗಳಿಂದ ಸಾಲ ಮರುಪಾವತಿ ಸ್ಥಿತಿ. | 35–36 |
| ಕೋಷ್ಟಕ–21 ಹಂಚಿಕೆಯಾದ ಜಮೀನುಗಳಲ್ಲಿ ಬೆಳೆಸಿದ ಬೆಳೆಗಳ ವಿವರ. | 37 |
| ಕೋಷ್ಟಕ–22 ಪೂರಕ ವೃತಿಗಳ ವಿವರಗಳು. | 38 |
| ಕೋಷ್ಟಕ–23 ಭೂಮಿ ಹಂಚಿಕೆ ಬಳಿಕ ಬಂದ ಸರಾಸರಿ ಮೇಲಾದಾಯ ವಿವರಗಳು. | 39 |
| ಕೋಷ್ಟಕ–24 ಮೇಲಾದಾಯ. | 39 |
| ಕೋಷ್ಟಕ–25 ವರ್ಗವಾರು ಗುಂಪುಗಳ ಮೇಲಾದಾಯ. | 40 |
| ಕೋಷ್ಟಕ–26. ಜಮೀನು ದೊರೆತ ಬಳಿಕ ಮಹಿಳೆಯರ ಸ್ಥಾನ ಮಾನ ಮತ್ತು ಅವರ ಪಾತ್ರಗಳಲ್ಲಿ ಆದ ಬದಲಾವಣೆ | 41 |
| ಕೋಷ್ಟಕ–27. ಭೂಮಿ ಹಂಚಿಕೆಯಾದ ಬಳಿಕ ಗಳಿಸಿದ ಆಸ್ತಿಗಳು. | 42 |
| ಕೋಷ್ಟಕ–28. ಕುಟುಂಬದ ಸದಸ್ಯರ ಬದಲಾದ ದೃಷ್ಠಿ ಕೋನ. | 42 |

**ಅನುಬಂಧಗಳು.**

ಅನುಬಂಧ.–1. ಉಲ್ಲೇಖದ ಷರತ್ತುಗಳು.

ಅನುಬಂಧ.–2. ಜಿಲ್ಲಾ ವ್ಯವಸ್ಥಾಪಕರ ಪ್ರಶ್ನಾವಳಿ.

ಅನುಬಂಧ.–3. ಭೂಮಿ ಹಂಚಿಕೆ ಪಡೆದ ಫಲಾನುಭವಿಗಳ ಪ್ರಶ್ನಾವಳಿ.

ಅನುಬಂಧ.–4. ವರ್ಷಾವಾರು, ಜಿಲ್ಲಾವಾರು ಫಲಾನುಭವಿಗಳು.

ಅನುಬಂಧ.–5. ಆಯ್ದ ಫಲಾನುಭವಿಗಳ ವೈವಾಹಿಕ ಸ್ಥಿತಿ.

ಅನುಬಂಧ.–6. ಫಲಾನುಭವಿಗಳ ವಿಧ್ಯಾಭ್ಯಾಸ.

ಅನುಬಂಧ.–7. ಜಿಲ್ಲಾವಾರು ಸಲಹೆ ಮಾಡಿದ ಚಟುವಟಿಕೆಗಳು.

ಅನುಬಂಧ.–8. ಕೃಷಿಯಿಂದ ಬರುತ್ತಿರುವ ಮೇಲಾದಾಯ.

ತಾಂತ್ರಿಕ ಸಮಿತಿ ಕೇಳಿದ ಪ್ರಶ್ನೆಗಳಿಗೆ ಉತ್ತರಗಳು.

ಮೌಲ್ಯಮಾಪನ ಪ್ರಶ್ನೆಗಳಿಗೆ ನೀಡಿದ ಉತ್ತರಗಳು/ಕಂಡುಬಂದ ವಿಚಾರಗಳು.

ಕೆ.ಎಂ.ವಿ.ಎಸ್.ಟಿ.ಡಿ.ಸಿ ಬೆಂಗಳೂರುರವರು ನೀಡಿದ ಪತ್ರದ ಪ್ರತಿ.

ಚಿತ್ರಪಟಗಳು.

# ಕಾರ್ಯಸಾಧ್ಯ ತಾತ್ಪರ್ಯ

# ಕಾರ್ಯಸಾಧ್ಯ ತಾತ್ಪರ್ಯ

ಲಿಂಗ ವಿಸಯ ಅದರಲ್ಲೂ ಮಹಿಳೆಯರ ಆರ್ಥಿಕ ಪಾತ್ರ, ಮತ್ತು ಸ್ಥಾನಗಳಿಗೆ ಸ್ಥಳೀಯ ನಿರ್ದಿಷ್ಟ ಯೋಜನೆಗಳ ಕಾರ್ಯತಂತ್ರಗಳ ಬಗ್ಗೆ ನೀಡಬೇಕಾದ ಗಮನವನ್ನು ಕೊಟ್ಟಿರುವುದಿಲ್ಲ. ಆದರೂ ಸಹಾ ಜಗತ್ತಿನಾಧ್ಯಂತ ಮಹಿಳೆಯ ಬಗ್ಗೆ ಸಾಂಪ್ರದಾಯಿಕ ಭಾವನೆ ಮತ್ತು ಸಮಾಜದಲ್ಲಿ ಆಕೆಯ ಸ್ಥಾನದ ಬಗ್ಗೆ ಮರುಚಿಂತನೆ ನಡೆದಿದೆ. ಮಹಿಳಾ ಸದಸ್ಯರನ್ನು ಸಕ್ರಿಯವಾಗಿ ಪಾಲ್ಗೊಳ್ಳಲು ಅವಕಾಶ ನೀಡದಿದ್ದರೆ ಸಾಮಾಜಿಕ ಆರ್ಥಿಕ ಬೆಳವಣಿಗೆ ಸಾಧ್ಯವಿಲ್ಲವೆಂದು ಮನಗಾಣಲಾಗಿದೆ. ಈ ಬದಲಾವಣೆಯನ್ನು ಭಾರತವು ಒಪ್ಪಿಕೊಂಡಿದ್ದು ಅನೇಕ ಲಿಂಗ ಸಮಾನತೆ ಮತ್ತು ಸಬಲೀಕರಣ ಕಾರ್ಯಕ್ರಮಗಳನ್ನು ಯೋಜಿಸಿ ಕಾರ್ಯರೂಪಕ್ಕ ತರುತ್ತಿದೆ.

ಕರ್ನಾಟಕದಲ್ಲಿ ಪರಿಶಿಷ್ಟ ಪಂಗಡಗಳ ಜನಸಂಖ್ಯೆ 42.9 ಲಕ್ಷವಿದ್ದು ಭೂ ರಹಿತ ಮಹಿಳೆಯರ ಸಾಮಾಜಿಕ ಆರ್ಥಿಕ ಸಬಲೀಕರಣಕ್ಕಾಗಿ ಭೂಮಿ ಖರೀದಿ ಮತ್ತು ಭೂಮಿ ಹಂಚಿಕೆ ಯೋಜನೆ ಮೂಲಕ ಕಾರ್ಯ ಕ್ರಮಗಳನ್ನು ಜಾರಿಗೊಳಿಸುತ್ತಿದೆ. ಯೋಜನೆಯು ಫಲಾನುಭವಿ ಮಹಿಳೆಯರನ್ನು ಆರ್ಥಿಕ ಸ್ವಾತಂತ್ರ್ಯದೆಡೆಗೆ ಒಯ್ಯುವುದೆಂದು ನಿರೀಕ್ಷಿಸಲಾಗಿದೆ. 1990 ರಲ್ಲಿ ಜಾರಿಗೊಳಿಸಲಾದ ಈ ಯೋಜನೆ 2013–14 ನೇ ವರ್ಷದ ಅಂತ್ಯಕ್ಕೆ 965 ಮಹಿಳೆಯರಿಗೆ ತಲುಪಿರುತ್ತದೆ. ಈ ಯೋಜನೆಯ ಅನುಷ್ಠಾನದಿಂದ ಆದಿವಾಸಿ ಕುಟುಂಬಗಳ ಸ್ಥಿತಿ ಸುಧಾರಣೆ ಎಷ್ಟರ ಮಟ್ಟಿಗೆ ಆಗಿದೆಯೆಂದು ತಿಳಿಯಲು ಕನಾಟಕ ಸರ್ಕಾರವು ಯೋಜನೆಯ ಅನುಷ್ಠಾನದ ಮೌಲ್ಯಮಾಪನ ಮಾಡಿಸಲು ಆಲೋಚನೆ ಮಾಡಿತು. ಅದರಂತೆ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು ವಿಶಾಲವಾದ ಗುರಿಗಳೊಡನೆ 1) ಯೋಜನೆಯಿಂದ ಅವರ ಆರ್ಥಿಕ ಸ್ಥಿತಿ ಉತ್ತಮವಾಗಿದೆಯೇ, ಮತ್ತು ಅವರ ಸಬಲೀಕರಣ ಉತ್ತಮವಾಗಿದೆಯೇ ಎಂದು ತಿಳಿಯಲು ಮತ್ತು ತೊಡಕುಗಳನ್ನು, ಕೊರತೆಗಳನ್ನು ಕಂಡುಕೊಳ್ಳಲು, 2) ಯೋಜನೆ ಅನುಷ್ಠಾನದಲ್ಲಿ ನೀಡಿದ ಮಾರ್ಗದರ್ಶನಗಳ ಅನುಸರಣೆ, 3) ಯೋಜನೆಯ ಮುಖ್ಯ ಗುರಿಯಾದ ಮಹಿಳೆಯರ ಸಬಲೀಕರಣ, ಸಾಮಾಜಿಕ ಮತ್ತು ಆರ್ಥಿಕತೆ ಸಾಧಿಸುವುದು, 4) ಅನುಷ್ಠಾನದಲ್ಲಿ

ಎದುರಿಸಿದ ಸಮಸ್ಯೆಗಳು ಮತ್ತು 5) ಯೋಜನೆ ಅನುಷ್ಠಾನದ ಬಗ್ಗೆ ಸಲಹೆಗಳನ್ನು ನೀಡಲು ಭಾರತೀಯ ಮಾಹಿತಿ ಸಂಪನ್ಮೂಲಗಳು ಮತ್ತು ನಿರ್ವಹಣಾ ತಾಂತ್ರಿಕತೆ ನಿಯಮಿತರವರಿಗೆ (IN-RIMT) ವಹಿಸಿಕೊಟ್ಟಿತು.

**ಇಂಡಿಯನ್ ರಿಸೋರ್ಸ್‌ಸ್ ಇನ್ಫರ್ಮೇಷನ್ ಅಂಡ್ ಮೇನೇಜ್‌ಮೆಂಟ್ ಟೆಕ್ನಾಲಜೀಸ್ ಲಿ.** (IN-RIMT), ಸಮಗ್ರ ಮತ್ತು ಬಹು ಕಾರ್ಯ ಅಧ್ಯಯನವನ್ನು ಕೈಗೊಳ್ಳಲು ಪರಿಷ್ಕೃತ ಮಾದರಿ ಆಯ್ಕೆ ವಿಧಾನವನ್ನನುಸರಿಸಿ, 24 ಜಿಲ್ಲೆಗಳ 27 ತಾಲೂಕುಗಳ 41 ಗ್ರಾಮಗಳ 133 ಫಲಾನುಭವಿಗಳನ್ನು (ಸುಮಾರು 14%) ಸಮೀಕ್ಷಿಸಲು, ರೈತ ಗುಂಪುಗಳೊಡನೆ, ನಿಗಮದ ಅಧಿಕಾರಿಗಳೊಡನೆ ಪರಸ್ಪರ ಪ್ರತಿಕ್ರಿಯಿಸುವ ಕಾರ್ಯಕ್ರಮವನ್ನು ರೂಪಿಸಲಾಯಿತು.

ಅಧ್ಯಯನವು ಭೂ ಹಂಚಿಕೆಗೆ ಮೊದಲು ಮತ್ತು ಆ ನಂತರ ಉಂಟಾದ, 1) ಅನುಸರಿಸಿದ ಕಾರ್ಯವಿಧಾನ ಮತ್ತು 2) ಫಲಾನುಭವಿಗಳ ಮೇಲೆ ಉಂಟಾದ ನಿವ್ವಳ ಪೂರಕ ಸೌಲಭ್ಯಗಳನ್ನು, ಸಾಮಾಜಿಕ ಮತ್ತು ಮಹತ್ತರ ಆರ್ಥಿಕ ಪರಿಣಾಮಗಳನ್ನು ಅಂದಾಜಿಸಲು ಪ್ರಯತ್ನಿಸಿರುತ್ತದೆ.

**ಕಂಡು ಬಂದಿದ್ದು.**

ಕಾರ್ಯಕ್ರಮ ಅನುಷ್ಠಾನಗೊಳಿಸುವ ಏಜೆನ್ಸಿಯು ಭೂಮಿಯನ್ನು ಮತ್ತು ಭೂ ಮಾರಾಟ ಮಾಡುವ ಮಾಲೀಕರನ್ನು ಗುರುತಿಸುವುದಕ್ಕಾಗಿ ಹಾಗೂ ಅವರ ಸಾಮಾಜಿಕ ಆರ್ಥಿಕ ಮತ್ತಿತರ ಸ್ಥಾನಮಾನಗಳನ್ನು ಗುರುತಿಸಲು ಕೊಟ್ಟ ಮಾರ್ಗಸೂಚಿಗಳನ್ನು ಅನುಸರಿಸಿರುವುದು ಕಂಡುಬರುತ್ತದೆ. 50 ಉಪ ಗುಂಪುಗಳ ಪೈಕಿ ಯೋಜನೆಯು ಕೇವಲ 11 ಉಪ ಗುಂಪುಗಳಿಗೆ ತಲುಪಿರುತ್ತದೆ. ಫಲಾನುಭವಿಗಳನ್ನು ಗುರುತಿಸುವುದು ಮತ್ತು ಭೂಮಿಯನ್ನು ಹಸ್ತಾಂತರಿಸಲು ಸರಾಸರಿ 6 ರಿಂದ 24 ತಿಂಗಳು ಸಮಯ ತೆಗೆದುಕೊಂಡಿರುವುದು ಕಂಡುಬಂದಿದೆ.

- ಸಾಮಾನ್ಯವಾಗಿ, ಯೋಜನೆಯ ಫಲಗಳನ್ನು, ಖರೀದಿಗೆ ಭೂಮಿಯು ಲಭ್ಯವಿಲ್ಲದಿರುವುದು, ಮತ್ತು ಭೂಮಿಯ ಬೆಲೆ ಕಾರ್ಪೋರೇಶನ್ ನಿಗದಿಪಡಿಸಿದ್ದಕ್ಕಿಂತ ಬಹಳ ಹೆಚ್ಚಾದ ಕಾರಣ ಬಹಳ ಕಡಿಮೆ ಸಂಖ್ಯೆಯ ಮಹಿಳೆಯರಿಗೆ ತಲುಪಿಸಿದ್ದು, ಬಹಳ ತೃಪ್ತಿಕರವಾಗಿರುವುದಿಲ್ಲ. ಈ ಯೋಜನೆಯಲ್ಲಿ

ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಪರಿಶಿಷ್ಠ ಪಂಗಡ ನಿಗಮವು 360.24 ಲಕ್ಷ ರೂಪಾಯಿಗಳಸಾಲವನ್ನು ಮಂಜೂರು ಮಾಡಿರುತ್ತದೆ.

ಫಲಾನುಭವಿಗಳಿಗೆ ಮಂಜೂರು ಮಾಡಿದ ಭೂಮಿಯು ಅವರ ವಾಸ ಸ್ಥಳದಿಂದ ಒಂದು ಕಿ. ಮೀ ಗಿಂತ ಕಡಿಮೆಯಿಂದ 5 ಕಿ.ಮೀಗೂ ಹೆಚ್ಚು ದೂರವಿದೆ. ಆದರೆ ಹೆಚ್ಚಿನವರು ಅಂದರೆ 65% ಫಲಾನುಭವಿಗಳು 2 ರಿಂದ 5 ಕಿಮೀ ಗಳೊಳಗಿನ ದೂರದ ಜಮೀನುಗಳನ್ನು ಹಂಚಿಕೆ ಮಾಡಿಸಿಕೊಂಡಿರುತ್ತಾರೆ. ಭೂಮಿಯ ಯೋಗ್ಯತೆ ಬಗ್ಗೆ ಫಲಾನುಭವಿಗಳ ಪೈಕಿ 96% ಕೃಷಿಗೆ ಯೋಗ್ಯವಾಗಿದೆಯೆಂದು ಹೇಳಿರುತ್ತಾರೆ. ಕೆಲವು ಸಂದರ್ಭಗಳಲ್ಲಿ ಒಟ್ಟಿಗೆ ಇರುವ ಜಮೀನುಗಳನ್ನು ಹಂಚಿಕೆ ಮಾಡಲಾಗಿರುತ್ತದೆ.(ಉದಾ: ಕೋಲಾರ, ಚಿಕ್ಕಬಳ್ಳಾಪುರ, ಕೊಪ್ಪಳ, ಯಾದಗಿರಿ ಮತ್ತು ರಾಯಚೂರು ಜಿಲ್ಲೆಗಳಲ್ಲಿ) ಅವುಗಳಲ್ಲಿ ಹಂಚಿಕೆಯಾದ ಜಮೀನುಗಳಿಗೆ ಚಕ್ಕುಬಂದಿಗಳಿರುವುದಿಲ್ಲ. ಆಯ್ಕೆ ಮಾಡಿದ ಫಲಾನುಭವಿಗಳಲ್ಲಿ 64 ಮಹಿಳೆಯರಿಗೆ (63.30 ಎಕರೆಗಳು) ತರಿ ಜಮೀನು, 58 ಮಹಿಳೆಯರಿಗೆ (115.05 ಎಕರೆ) ಮಳೆಯಾಶ್ರಿತ ಭೂಮಿ, ಉಳಿದ 11 ಮಹಿಳೆಯರಿಗೆ (11.00 ಎಕರೆ) ತೋಟದ ಜಮೀನುಗಳನ್ನು ಹಂಚಿಕೆ ಮಾಡಲಾಗಿರುತ್ತದೆ. ಇತರೆ ಜನಾಂಗದವರಿಗೆ ಸೇರಿದ ಭೂಮಿಗಳನ್ನಷ್ಟೇ ನಿಯಮದ ಪ್ರಕಾರ ಖರೀದಿಗೆ ಪರಿಗಣಿಸಲಾಗಿತ್ತು. ಕೋಲಾರ ಮತ್ತು ಹಾಸನ ಜಿಲ್ಲೆಗಳಲ್ಲಿ ಹಂಚಿಕೆ ಮಾಡಿದ ಜಮೀನುಗಳನ್ನು ಗುತ್ತಿಗೆಗೆ ಕೊಟ್ಟಿರುವುದೂ ವರದಿಯಾಗಿದೆ.

ಆಯಸ್ಸಿನ ಪ್ರಮಾಣದಲ್ಲಿ 57% ಫಲಾನುಭವಿಗಳು 31–40 ವರ್ಷಗಳವರಿದ್ದರು. ಎಲ್ಲ 133 ಪ್ರತಿಕ್ರಿಯಿಸಿದವರು, ಲಗ್ನವಾಗಿದ್ದರು. ಅವರಲ್ಲಿ 13 ಮಂದಿ (10%) ವಿಧವೆಯರು. ಫಲಾನುಭವಿಗಳಲ್ಲಿ ಹೆಚ್ಚನವರು ಮತ್ತು ಅವರ ಪತಿಯವರು, ಕೃಷಿಯಲ್ಲಿ ಪಾಲುಗಾರಿಕೆ ಅಥವಾ ಗುತ್ತಿಗೆ ಆಧಾರದ ಮೇಲೆ ತೊಡಗಿದ್ದು ಕೃಷಿಕರು ಅಥವಾ ಕೃಷಿ ಕಾರ್ಮಿಕರಾಗಿದ್ದದ್ದು ಕಂಡುಬಂದಿದೆ. ಆಶ್ಚರ್ಯವೆಂದರೆ 97 ಜನ (73%) ಫಲಾನುಭವಿಗಳು ತಾವು ಎಂದಿಗೂ ಯಾವುದೇ ಶಾಲೆಗೆ ಹೋಗಿಲ್ಲವೆಂದು ತಿಳಿಸಿದ್ದು.

- ಕಡಿಮೆ ಬೆಲೆಗೆ ದೊರೆಯುವ ಕಾರಣಕ್ಕಾಗಿ ಹೆಚ್ಚಿನವರು ಮಳೆಯಾಶ್ರಿತ ಒಣ ಭೂಮಿಯನ್ನು ಇಷ್ಟಪಟ್ಟರು. ಹಾಗೂ ಹೆಚ್ಚು ವಿಸ್ತೀರ್ಣ ಭೂಮಿ ಲಭ್ಯವಾಗುವುದೂ ಇನ್ನೊಂದು ಕಾರಣ. ಮತ್ತು ಅಂತಹವರು ಇತರೆ ಯೋಜನೆಗಳ ಮೂಲಕ ನೀರಾವರಿ ಭಾವಿಗಳನ್ನು/ಕೊಳವೇ ಭಾವಿಗಳನ್ನು ಕೊರೆಸಲು

ಅನುಕೂಲವಾಗುವುದೆಂದು ಒಣ ಭೂಮಿ ಇಷ್ಟ ಪಟ್ಟರು. ತಾಲೂಕಿನ ಯಾವುದೇ ಭಾಗದಲ್ಲಿ ಜಮೀನು ಕೊಡಬಹುದೆಂಬ ಇತ್ತೀಚಿನ ಧೋರಣೆಯಿಂದಾಗಿ / ನೀತಿಯಿಂದಾಗಿ ಫಲಾನುಭವಿಗಳಿಗೆ ಆ ಜಮೀನುಗಳಿರುವಲ್ಲಿಗೆ ಹೋಗಲು ಅಡಚಣೆಯಾಗುವುದಲ್ಲದೇ ಅಂತಹ ಜಮೀನನ್ನು ಗುತ್ತಿಗೆಗೆ ಕೊಡಲು ಪ್ರೇರೇಪಿಸಿರುವ ಸಾಧ್ಯತೆಗೆ ಅವಕಾಶವಿರುತ್ತದೆ.

- ಈ ಅಧ್ಯಯನವು ಫಲಾನುಭವಿಗಳಿಗೆ ಮುಖ್ಯವಾಗಿ ಮೇಲಾದಾಯ ಬಂದಿರುವುದನ್ನು ಮೌಲ್ಯಮಾಪನ ಮಾಡಲು ಪ್ರಯತ್ನಿಸಿರುವುದು ಯೋಜನೆಯ ಮುಖ್ಯ ಗುರಿಯಾಗಿರುತ್ತದೆ. ಒಂದು ಅಮೂಲ್ಯ ಸ್ವತ್ತಿನ ಮಾಲೀಕರಾಗಿರುವುದರಿಂದ ಅವರಿಗೆ ಸಮಾಜದಲ್ಲಿ ಮತ್ತು ಅವರ ಕುಟುಂಬ ವರ್ಗದವರಲ್ಲಿ ಒಂದು ಗಣ್ಯ ಸ್ಥಾನ ದೊರೆತು ಅವರನ್ನು ಗುರುತಿಸಿದಂತಾಗುವುದರಿಂದ, ಆ ಫಲಾನುಭವಿಗಳಿಗೆ ನೈತಿಕ ಧೈರ್ಯ ಹೆಚ್ಚಾಗಿರುವುದು ಕಂಡುಬಂದಿದೆ.
- ಆದಾಯದ ವಿಚಾರದಲ್ಲಿ, ಜಿಲ್ಲೆಗಳಲ್ಲಿ ವ್ಯಾಪಕವಾದ ವ್ಯತ್ಯಾಸ ಕಂಡುಬಂದಿದೆ. ಫಲಾನುಭವಿಗಳು ಅನುಸರಿಸಿದ ಬೆಳೆ ಪದ್ದತಿಗಳಿಂದ ರೂ. 5000 ಕ್ಕೂ ಕಡಿಮೆ ಮೇಲಾದಾಯದಿಂದ 1,12,500 ರೂಪಾಯಿಗಳಿಗೂ ಹೆಚ್ಚು ಬಂದಿರುವುದು ಕಂಡುಬಂದಿದೆ.
- ಆಯ್ದ ಮಾದರಿಯ (ಸ್ಯಾಂಪಲ್) ಅಧ್ಯಯನದಿಂದ ವಾರ್ಷಿಕ ಸರಾಸರಿ ಆದಾಯ ರೂ. 23,187 ಮತ್ತು ಎಲ್ಲ ಫಲಾನುಭವಿ ಜನಸಂಖ್ಯೆಗೆ ಅಂದಾಜು ಮಾಡಿದಾಗ ಸರಾಸರಿಯು 21,132 ರೂಪಾಯಿಗಳಿರುವುದು ಕಂಡುಬಂದಿದೆ.
- ಹೆಚ್ಚಿನವರು ತಮ್ಮ ಸ್ಥಳದಲ್ಲಿ ವ್ಯಾಪಕವಾಗಿ ಬೆಳೆಯುತ್ತಿರುವ ಬೆಳೆಗಳನ್ನೇ ಬೆಳೆಯುತ್ತಿರುವುದು ಕಂಡುಬಂದಿದೆ. 133 ಫಲಾನುಭವಿಗಳ ಪೈಕಿ ಇಬ್ಬರು ಮಾತ್ರ ಭೂಮಿಯನ್ನು ಬೀಳು ಬಿಟ್ಟಿದ್ದರು. ಸುಮಾರು 50% ರೈತರು ವಾಣಿಜ್ಯ ಬೆಳೆಗಳನ್ನು ಆಯ್ಕೆ ಮಾಡಿಕೊಂಡಿದ್ದರು. ಈ ಫಲಿತಾಂಶವು, ಮಹಿಳೆಯರಿಗೆ ಅವಕಾಶ ದೊರೆತಾಗ, ಅವನ್ನು ಸದುಪಯೋಗ ಪಡಿಸಿಕೊಳ್ಳುವುದಲ್ಲದೇ ಆರ್ಥಿಕ ಬೆಳೆಗಳನ್ನು ಬೆಳೆದು ತಮ್ಮ ಆದಾಯ ಹೆಚ್ಚಿಸಿಕೊಳ್ಳಬಲ್ಲರೆಂಬುದಕ್ಕೆ ಒಂದು ಜ್ವಲಂತ ನಿದರ್ಶನ.

- ಫಲಾನುಭವಿಗಳು ಕೆಲವೇ ಕೆಲವು ಸಂದರ್ಭಗಳನ್ನು ಹೊರತು ಪಡಿಸಿ, ಗುಲ್ಬರ್ಗ ಜಿಲ್ಲೆಯ ಜೇವರ್ಗಿ, ಹಾಸನ ಜಿಲ್ಲೆಯ ಅರಸೀಕೆರೆ, ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲೂಕುಗಳು, ಹೆಚ್ಚಿನವರು ತಮಗೆ ಹಂಚಿಕೆಯಾದ ಜಮೀನುಗಳಲ್ಲಿ ಯಾವುದೇ ಅಭಿವೃದ್ಧಿ ಕೆಲಸಗಳನ್ನು ಮಾಡಿರುವುದಿಲ್ಲ. ಹಾಗಿದ್ದರೂ ಕೆಲವು ಸಮಾನಾಂತರ ಇಲಾಖೆಗಳು ಶೇ.28 ಭಾಗದಲ್ಲಿ ಬದುಗಳನ್ನು ನಿರ್ಮಿಸಿರುವುದು, ಶೇ.5 ಭಾಗದಲ್ಲಿ ಕೊಳವೇ ಭಾವಿಗಳನ್ನು ಕೊರೆಸಿರುವುದು ಕಂಡು ಬಂದಿದೆ.
- ಕ್ಷೇತ್ರದಲ್ಲಿ ಕಂಡು ಬಂದ ಒಂದು ದೋಸವೆಂದರೆ, ಹಂಚಿಕೆ ಮಾಡಿದ ಜಮೀನುಗಳಿಗೆ ಯಾವುದೇ ಚಕ್ಕುಬಂದಿಗಳನ್ನು ತೋರಿಸಿರುವುದಿಲ್ಲ. ಯೋಜನೆ ಕಾರ್ಯಗತಗೊಳಿಸುವುದರಲ್ಲಿ ಆದ ಲೋಪಗಳನ್ನು 47% ಜನ ಫಲಾನುಭವಿಗಳು ಎತ್ತಿ ತೋರಿಸಿರುತ್ತಾರೆ.
- ಕರ್ನಾಟಕ ರಾಜ್ಯದ ದಕ್ಷಿಣ ಭಾಗಗಳಲ್ಲಿ ಮಾರಾಟಕ್ಕೆ ಜಮೀನುಗಳ ಲಭ್ಯತೆಯು ಬಹಳ ಕಡಿಮೆಯಿದ್ದು, (ಅಭಾವ) ಉತ್ತರ ಭಾಗದಲ್ಲಿ ನಿಗಮಕ್ಕೆ ಬೇಕಿದ್ದಕ್ಕಿಂತ ಹೆಚ್ಚು ಜನ ತಮ್ಮ ಜಮೀನುಗಳನ್ನು ಮಾರಾಟಕ್ಕಿಟ್ಟಿರುವುದು ವರದಿಯಾಗಿದೆ. ಭೂ ಮಾಲೀಕರು ತಮ್ಮ ಜಮೀನುಗಳನ್ನು ಮಾರಲು ಒತ್ತಾಯಿಸುತ್ತಿರುವುದು ರಾಜ್ಯದಲ್ಲಿ ಒಂದು ವಿಪರ್ಯಾಸ. ವಾಸ್ತವವಾಗಿ ಭೂ ಬ್ಯಾಂಕ್ ಅನ್ನು ಸ್ಥಾಪಿಸಿ ಫಲಾನುಭವಿಗಳಿಗೆ ಹಂಚಿಕೆ ಮಾಡುವುದು ನಿಜಕ್ಕೂ ಒಂದು ಒಳ್ಳೆಯ ಅವಕಾಶ. ಮತ್ತೊಂದು ಸಂಗತಿ ಎಂದರೆ, ಭೂ ಮಾಲೀಕರು ಮತ್ತು ಫಲಾನುಭವಿಗಳು ತಾವೇ ವ್ಯವಹಾರವನ್ನು ಕುದುರಿಸಿಕೊಂಡು ಹಣ ಸಹಾಯಕ್ಕೆ ನಿಗಮದ ಬಳಿ ಬರುತ್ತಿರುವುದು ಒಳ್ಳೆ ಮುನ್ಸೂಚನೆ.
- ಸಾಮಾಜಿಕ ಸ್ಥಾನಮಾನದಲ್ಲಿ, ತೀರ್ಮಾನ ತೆಗೆದುಕೊಳ್ಳುವುದರಲ್ಲಿ ಮಹಿಳೆಯರಿಗೆ ಅವರ ಮಾತಿಗೆ, ವಿಶೇಷವಾಗಿ ಮದುವೆ ಸಂದರ್ಭದಲ್ಲಿ, ಆರ್ಥಿಕ ನಿರ್ವಹಣೆಯಲ್ಲಿ, ಭೂ ಸಂಬಂಧೀ ವ್ಯವಹಾರಗಳಲ್ಲಿ, ಮಕ್ಕಳ ವಿಧ್ಯಾಭ್ಯಾಸ ಇತ್ಯಾದಿ ವಿಷಯಗಳಲ್ಲಿ ಬೆಲೆಯಿರುವುದು ಕಂಡು ಬಂದಿದೆ. ಈ ವಿಚಾರದಲ್ಲಿ, ರೂಢಿಯ ಪ್ರಕಾರ ಆದಿವಾಸಿ ಜನಾಂಗದಲ್ಲಿ ಕುಟುಂಬದಲ್ಲಿ ಮಹಿಳೆಯೇ ಸಂಸಾರ ನಡೆಸುತ್ತಿರುವುದು ನಡೆದುಬಂದಿದೆ.
- ಮೇಲಿಂದ ಮೇಲೆ ಬರ ಪರಿಸ್ಥಿತಿ ತಲೆದೋರುತ್ತಿರುವುದರಿಂದ ಸರ್ಕಾರವು ರೈತರ ಸಾಲ ಮನ್ನಾ

ಮಾಡುವ ಕಾರ್ಯಕ್ರಮಗಳಿರುವುದರಿಂದ ಅನೇಕ ಫಲಾನುಭವಿಗಳು ತಾವು ಪಡೆದ ಸಾಲವನ್ನು ಹಿಂದಿರುಗಿಸಿರುವುದಿಲ್ಲ. 133 ಫಲಾನುಭವಿಗಳನ್ನು ಸಂದರ್ಶಿಸಿದಾಗ ಕೇವಲ 3 ಫಲಾನುಭವಿಗಳು ಮಾತ್ರ ಪೂರ್ತಿಯಾಗಿ ಅಥವಾ ಭಾಗಶಃ ಸಾಲ ಮರುಪಾವತಿ ಮಾಡಿರುತ್ತಾರೆ. ರೈತರ ಸಾಲಗಳನ್ನು ಹಿಂದಿನಂತೆ ಸರ್ಕಾರ ಮನ್ನಾ ಮಾಡುವುದರಿಂದ ತಮ್ಮದೂ ಮನ್ನಾ ಅಗಬಹುದೆಂದು ಪ್ರತಿಯೊಬ್ಬರೂ ಆಲೋಚಿಸುವುದು ಸ್ವಾಭಾವಿಕ.

- ಸರ್ಕಾರದಿಂದ ನಿರ್ದೇಶನಗಳಿರದಿದ್ದರಿಂದ ಸಂಬಂಧಿಸಿದ ಇಲಾಖೆಗಳು ಯೋಜನೆ ಸಂಬಂಧ ಒಂದೆಡೆ ಸೇರುವುದಿಲ್ಲ / ಕಾಣುವಂತಹ ಏಕ ಕಾರ್ಯಕ್ರಮ ಹಾಕಿಕೊಳ್ಳುವುದಿಲ್ಲವಾದ್ದರಿಂದ ಹೀಗಾಗಿದೆ ಎಂದು ತಿಳಿದುಕೊಳ್ಳಬಹುದು.
- ಒಂದು ಸಲ ಹಂಚಿಕೆಯಾದ ಜಮೀನನ್ನು ಫಲಾನುಭವಿ ಹೆಸರಿಗೆ ರಿಜಿಸ್ಟರ್ ಮಾಡಿಸಿಕೊಟ್ಟ ತರುವಾಯ ಕಾರ್ಪೋರೇಶನ್‌ನವರಿಂದ ಯೋಜನೆಯ ಬಗ್ಗೆ ಮಾರ್ಗ ದರ್ಶನ ಅಥವಾ ಭೇಟಿ/ವಿಚಾರಣೆ. ಅನುಸರಣೆ (ಫಾಲೋ ಅಪ್) ಇರುವುದಿಲ್ಲ. ಫಲಾನುಭವಿಗಳಿಗೆ ಯಾವುದೇ ಹಿಂಪೋಷಣೆ (ಫೀಡ್ ಬ್ಯಾಕ್) ಕೊಡುವ ಅವಕಾಶವಿರುವುದಿಲ್ಲ, ಅವರಿಗೆ ಏನಾದರೂ ಹೆಚ್ಚಿನ ಸಹಾಯ, ಮುಖ್ಯವಾಗಿ ಕೊಳವೇ ಭಾವಿ ಕೊರೆಸಲು, ಬೇಕಾದಾಗ ಕಾರ್ಪೋರೇಶನ್‌ನವರನ್ನು ನೇರವಾಗಿ ಸಂಪರ್ಕಿಸಿರುತ್ತಾರೆ.

**ಶಿಫಾರಸ್ಸುಗಳು.**

- ಪರಿಶಿಷ್ಠ ಪಂಗಡದ ಜನಾಂಗದ ಸಂಖ್ಯೆಗೆ ಹೋಲಿಸಿದಾಗ ಐದು ವರ್ಷಗಳ ಅವಧಿಯಲ್ಲಿ ಕೇವಲ 1000 ಮಹಿಳೆಯರಿಗೆ ಪ್ರಯೋಜನವಾಗಿದ್ದು ಯೋಜನೆಯ ಪ್ರಗತಿ ತೃಪ್ತಿಕರವಾಗಿಲ್ಲ. ಕೆಲವು ಜಿಲ್ಲೆಗಳಲ್ಲಿ ಯೋಜನೆಯ ಅನುಷ್ಠಾನವು ತೀರಾ ಅತೃಪ್ತಿಕರವಾಗಿದ್ದು ಸುಧಾರಿಸಬೇಕಾಗಿರುತ್ತದೆ.
- ತಿದ್ದುಪಡಿ ಮಾಡಿದ ನಿಯಮದ ಪ್ರಕಾರ ತಾಲೂಕಿನ ಯಾವುದೇ ಭಾಗದಲ್ಲಿ ಜಮೀನು ಖರೀದಿಸಿ ಹಂಚಿಕೆ ಮಾಡುವುದರಿಂದ, ಫಲಾನುಭವಿಗಳು, ಮುಖ್ಯವಾಗಿ ಮಹಿಳೆಯರು ತಮ್ಮ ಮೂಲ ವಾಸಸ್ಥಳ ಬಿಟ್ಟು ಬೇರೆ

ಕಡೆಗೆ ಹೋಗಲಿಚ್ಛಿಸುವುದಿಲ್ಲ. ಇದರಿಂದ ಅಂತಹವರು ಆ ಜಮೀನುಗಳನ್ನು ಅಕ್ಕ ಪಕ್ಕದ ರೈತರಿಗೆ ಗುತ್ತಿಗೆಗೆ ನೀಡಲು ಅವಕಾಶವಾಗುತ್ತಿದ್ದು ಅದಕ್ಕೆ ಯೋಜನೆಯ ಮಾರ್ಗದರ್ಶನಗಳಲ್ಲಿ ಅವಕಾಶವಿರುವುದಿಲ್ಲ.

- ಕರ್ನಾಟಕ ರಾಜ್ಯದ ದಕ್ಷಿಣ ಭಾಗಗಳಲ್ಲಿ ಜಮೀನಿನ ಲಭ್ಯತೆ ಕಡಿಮೆಯಿರುವ ಕಾರಣ ಯೋಜನೆಯ ಅನುಷ್ಠಾನದಲ್ಲಿ ಪ್ರಗತಿ ಕುಂಠಿತವಾಗಿರುವುದು ಸಹಜ. ಕಾರ್ಪೋರೇಶನ್ ಸ್ಥಳೀಯ ವಾರ್ತಾ ಪತ್ರಿಕೆಗಳಲ್ಲಿ, ಮಾಧ್ಯಮಗಳಲ್ಲಿ ಜಾಹಿರಾತು ನೀಡಿ ಲಭ್ಯವಿರುವ ಜಮೀನುಗಳನ್ನು ಖರೀದಿಸಿ ಹೊಸ ಅರ್ಜಿದಾರರಿಗೆ ಹಂಚಿಕೆ ಮಾಡಬಹುದು. ರಾಜ್ಯದ ಉತ್ತರ ಭಾಗದಲ್ಲಿ ಭೂ ಲಭ್ಯತೆ ಸರಳವಾಗಿದ್ದು, ಆದರೆ ಅರ್ಜಿದಾರರ ಸಂಖ್ಯೆ ಕಡಿಮೆಯಿರುತ್ತದೆ. ಪರಿಶಿಷ್ಟ ಪಂಗಡದವರಿಗಾಗಿ ಕಾರ್ಪೋರೇಶನ್ ಭೂ ಬ್ಯಾಂಕ್ ಅನ್ನು ಪ್ರಾರಂಭಿಸಿ ಸಾಕಷ್ಟು ಪ್ರಚಾರ ಕೊಟ್ಟು ಅರ್ಜಿದಾರರ ಸಂಖ್ಯೆಯನ್ನು ಹೆಚ್ಚಿಸಲು ಅವಕಾಶ ಮಾಡಿಕೊಡಬೇಕು.
- ಗ್ರಾಮ ಸಭೆಗಳಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡುವುದನ್ನು ಖಾತ್ರಿಪಡಿಸಬೇಕು. ಫಲಾನುಭವಿಗಳ ಆಯ್ಕೆಯಾದ ಬಳಿಕ ಪಟ್ಟಿಯನ್ನೊಳಗೊಂಡ ನಿರ್ಣಯದ ಪ್ರತಿಯನ್ನು ಪರಿಗಣಿಸಲು ಜಿಲ್ಲಾ ಅಭಿವೃದ್ಧಿ ಸಮಿತಿಗೆ ಸಲ್ಲಿಸಬೇಕು. ಗ್ರಾಮ ಪಂಚಾಯತಿಗಳು ದಸ್ತಾವೇಜುಗಳನ್ನು, ದಾಖಲೆಗಳನ್ನು, ಆಯ್ಕೆ ಮಾಡಿದ ಫಲಾನುಭವಿಗಳುಳ್ಳ ನಿರ್ಣಯಗಳನ್ನು ರಕ್ಷಿಸಿಡಲು ಸಲಹೆ ನೀಡಬೇಕು ಮತ್ತು ಅಂತಹ ಆಯ್ಕೆ ಮಾಡಿದ ಹೆಸರುಗಳ ಪಟ್ಟಿಯು ಎಲ್ಲರಿಗೂ ಸಿಗುವಂತಿರಬೇಕು.
- ಸಧ್ಯದ ಮಾರ್ಗದರ್ಶನಗಳ ಪ್ರಕಾರ ತರಿ ಜಮೀನುಗಳೆಂದು ವರ್ಗೀಕರಿಸಿದ ಜಮೀನುಗಳನ್ನು ನಿಜಕ್ಕೂ ಪರಿಗಣೀಸಲು ಸಾಧ್ಯವಿಲ್ಲ. ಕಾರಣ ಅವುಗಳಿಗೆ ನೀರಿನ ಸರಬರಾಜಿರುವುದಿಲ್ಲ. ಆದ್ದರಿಂದ ನೀರಾವರಿ ಕಾಲುವೆಗಳ ಕೊನೆಯಲ್ಲಿರುವ ಜಮೀನುಗಳ ಸಂಬಂಧವಾಗಿ ಈಗಿನ ಒಂದು ಎಕರೆ ಬದಲು ಎರಡು ಎಕರೆಗೆ ಮಿತಿಯನ್ನು ಏರಿಸುವುದರಿಂದ ಫಲಾನುಭವಿಗಳಿಗೆ ಸ್ವಲ್ಪ ಹೆಚ್ಚಿನ ಜಮೀನು ಸಿಕ್ಕಿದಂತಾಗಿ ಪ್ರಯೋಜನವಾಗುವುದು.
- ಕಾರ್ಪೋರೇಶನ್‌ನವರು ಒಂದು ಮಾರ್ಗದರ್ಶನ ಸಮಿತಿಯನ್ನು ನೇಮಕ ಮಾಡಿ, ಹಂಚಿಕೆ ಮಾಡಿದ ಜಮೀನು, ಫಲಾನುಭವಿಯಿಂದ ಸದುಪಯೋಗವಾಗುವಂತೆ ನೋಡಿಕೊಳ್ಳಬೇಕು.

- ಫಲಾನುಭವಿಗಳು ಆದಿವಾಸಿ ಜನಾಂಗದವರಾದ್ದರಿಂದ ಯಾವುದೇ ಕಾರ್ಯಕ್ರಮಕ್ಕೆ, ಕೊಳವೆ ಭಾವಿ, ತುಂತುರು ನೀರಾವರಿ, ನೀರಾವರಿ ವ್ಯವಸ್ಥೆ, ಬೀಜ, ಗೊಬ್ಬರ ಸರಬರಾಜು, ಇತ್ಯಾದಿ ಅಂತಹ ಅಗತ್ಯದ ಫಲಾನುಭವಿಗಳನ್ನು ಗುರುತಿಸುವ/ಪ್ರವರ್ತಿಸುವ ಸಲುವಾಗಿ ಕಾರ್ಪೋರೇಶನ್‌ನಲ್ಲಿ ಸಮಗ್ರತಾ ದೃಷ್ಟಿಯ ಸೇವೆಯೊದಗಿಸಲು ಒಂದು ಅಂತರ್ಗತ ವ್ಯವಸ್ಥೆಯಿರಬೇಕು.
- ಈ ಕಾರ್ಯಕ್ರಮದಲ್ಲಿ ಸರ್ಕಾರೇತರ ಸಂಸ್ಥೆಗಳನ್ನು (ಎನ್.ಜಿ.ಓ ಗಳನ್ನು) ಸೇರಿಸಿಕೊಳ್ಳಲು ಅವಕಾಶವಿರುತ್ತದೆ. ಈ ಹಿಂದೆ ಆದಿವಾಸಿ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಎನ್.ಜಿ.ಓಗಳ ಮುಖಾಂತರ ಕಾರ್ಯಕ್ರಮಗಳ ಮಾಹಿತಿಯು ಆದಿವಾಸಿಗಳಿಗೆ ಸರ್ಕಾರಕ್ಕಿಂತ ಬೇಗ ತಲುಪುತ್ತದೆ.
- ಎಲ್ಲ ಆದಿವಾಸಿಗಳಿಗೆ, ಆದಿವಾಸಿ ಅಭಿವೃದ್ಧಿ ಕಾರ್ಯಕ್ರಮಗಳ ಫಲ ದೊರೆಯಬೇಕಾದಲ್ಲಿ ದುರ್ಗಮ ಪ್ರದೇಶಗಳಲ್ಲಿ, ಅರಣ್ಯಗಳಲ್ಲಿ, ಹಾಡಿಗಳಲ್ಲಿ ನೆಲಸಿರುವ ಗಿರಿಜನರನ್ನು ಸಂಖ್ಯಾ ದೃಷ್ಟಿಯಿಂದ ನೋಡದೇ ಸಾಧ್ಯವಿದ್ದಷ್ಟೂ ಹೆಚ್ಚಿನ ಸಂಖ್ಯೆಯ ಆದಿವಾಸಿಗಳನ್ನು/ಗಿರಿಜನರನ್ನು ಈ ಯೋಜನೆಗಳಿಗೆ ಒಳಪಡಿಸಬೇಕು.
- ಫಲಾನುಭವಿಗಳ ಆಯ್ಕೆಯಲ್ಲಿ ಅರ್ಜಿದಾರನ ವಯಸ್ಸು, ವೈವಾಹಿಕ ಸ್ಥಿತಿಗಳು ಪೂರ್ವಾಪೇಕ್ಷಿತವಾಗಿರತಕ್ಕದ್ದು. ಉದಾ: 50 ವರ್ಷಕ್ಕಿಂತ ಕಡಿಮೆ ವಯಸ್ಸಿನವರಿಗೆ ಹಂಚಿಕೆ ಮಾಡಬೇಕು. ವೈಧವ್ಯ ಸ್ಥಿತಿಯಲ್ಲಿರುವವರಿಗೆ ಪ್ರಾಶಸ್ತ್ಯ ನೀಡಬೇಕು.
- ಜಮೀನು ಹಂಚಿಕೆಯಲ್ಲಿ ಬೆಳೆ ಬೆಳೆಯುವ ಬಗ್ಗೆ ತಾಂತ್ರಿಕ ಮಾಹಿತಿ ಮತ್ತು ಬೇಕಾದ ಬೀಜ ಗೊಬ್ಬರ ಸಲಕರಣೆಗಳನ್ನೊಳಗೊಂಡ ಸೌಲಭ್ಯ ಕನಿಷ್ಠ ಎರಡು ವರ್ಸಗಳಿಗಾಗುವಷ್ಟಿರಬೇಕು. ಮತ್ತು ಈ ವಿಷಯ ಜಿಲ್ಲಾಭಿವೃದ್ಧಿ ಯೋಜನೆಯಲ್ಲಿ ಸೇರ್ಪಡೆಯಾಗಬೇಕೆಂದು ಸಲಹೆ ನೀಡಲಾಗಿದೆ.
- ವಿಶ್ವ ವಿದ್ಯಾಲಯಗಳಾದ ಕೃಷಿ / ತೋಟಗಾರಿಕೆ / ಪಶು ಸಂಗೋಪನೆ ವಿಭಾಗಗಳನ್ನು ಈ ಕಾರ್ಯಕ್ರಮಗಳಲ್ಲಿ ಸೇರಿಸಿಕೊಳ್ಳುವುದರಿಂದ ಫಲಾನುಭವಿಗಳಿಗೆ ಬೆಂಬಲ ದೊರತಂತಾಗುತ್ತದೆ.

# ವರದಿ

# ಅಧ್ಯಾಯ–1

## 1.ಪೀಠಿಕೆ

### 1.1. ಹಿನ್ನೆಲೆ.

ಚೈತನ್ಯಯುತ ಲಿಂಗ ಅಭಿವೃದ್ಧಿಯಲ್ಲಿ ಒಂದು ಅತ್ಯಂತ ಮುಖ್ಯ ಆಯಾಮ, ಅಂತರ್ಗತವಾಗಿ ರಚನೆಗೊಂಡ ಗಂಡು ಹೆಣ್ಣುಗಳ ವ್ಯತ್ಯಾಸ ಮತ್ತು ಅವುಗಳ ಜೊತೆಗೂಡಿದ ಗುಣಮಟ್ಟ, ನಂಬಿಕೆಗಳು, ಪಕ್ಷಪಾತಗಳು ಮಹಿಳೆಯನ್ನು ಎಲ್ಲ ವಿಧದಲ್ಲಿ ಗಂಡಸಿಗಿಂತ ಕೆಳ ಮಟ್ಟದಲ್ಲಿಟ್ಟಿವೆ. ಅದು ಅನೇಕ ದೇಶಗಳಲ್ಲಿ ಅಭಿವೃದ್ಧಿಯ ಕಾರ್ಯಕ್ರಮಗಳನ್ನು, ಬೆಳವಣಿಗೆ ಕೂಡಿದ ಸ್ಪಷ್ಟವಾದ ಗುರಿ ಹೊಂದುವ ನೀತಿ ನಿಯಮಗಳ ಮೇಲೆ ಅಧಿಕಾರಯುತವಾಗಿ ಪರಿಣಾಮ ಬೀರುತ್ತದೆ. ಗ್ರಾಮೀಣ ಮತ್ತು ಗಿರಿಜನ ಸಮುದಾಯಗಳೊಂದಿಗೆ ವ್ಯವಹರಿಸುವಾಗ ಅಂತಹ ಪಕ್ಷಪಾತಗಳು ಬಹಳ ಹರಿತವಾಗಿರುತ್ತವೆ.

ಲಿಂಗ ವಿಷಯವು ಅದರಲ್ಲೂ ಮಹಿಳೆಯ ಆರ್ಥಿಕ ಪಾತ್ರ ಮತ್ತು ಸ್ಥಾನಗಳಿಗೆ, ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಮತ್ತು ನೀತಿ/ಧೋರಣೆಗಳಲ್ಲಿ ಸ್ಥಳೀಯ ಕೌಶಲ್ಯಗಳಿಗೆ ಅಗತ್ಯವಿದ್ದಷ್ಟು ಗಮನ ನೀಡಿರುವುದಿಲ್ಲ. ಈ ಸಂಗತಿಯು ವಾಸ್ತವವಾಗಿ ಪ್ರಪಂಚದ ಎಲ್ಲ ಕಡೆಯಲ್ಲಿದ್ದು ಭಾರತವೇನೂ ಅದಕ್ಕೆ ಹೊರತಲ್ಲ. ಈ ಸಂಗತಿಯನ್ನು ಸರ್ವಕಾಲಿಕವಾಗಿಸಲಾಗಿದ್ದು, ಮಹಿಳೆಯರಲ್ಲಿ ಕಾಲ್ಪನಿಕ ಕಥೆಗಳು ನಂಬಿಕೆಗಳು ಹಾಸುಹೊಕ್ಕಾಗಿದ್ದು, 1) ಮಹಿಳೆಯು ಕೇವಲ ಮನೆಕೆಲಸಕ್ಕೆ ಮಾತ್ರ ಲಾಯಕ್ಕು, 2) ಅದರ ಫಲಗಳನ್ನು ಕುಟುಂಬದ ಪ್ರತಿಯೊಬ್ಬರೂ ಸಮನಾಗಿ ಹಂಚಿಕೊಳ್ಳುವರು, 3) ಮಹಿಳೆಯ ಮಾತನ್ನು ತನ್ನ ಪುರುಷ ಸಂಬಂಧಿಗಳ ಮೂಲಕ ತಿಳಿಸಿ ಹೇಳುವುದು(ನೇರವಾಗಿ ಹೇಳಲು ಅವಕಾಶವಿಲ್ಲದಿರುವುದು) 4) ತಾಂತ್ರಿಕತೆಯು ಪುರುಷ ಮತ್ತು ಸ್ತ್ರೀಯರಿಗೆ ಸಮನಾಗಿ ಪ್ರಯೋಜನಕಾರಿಯಾಗುವುದು, 5) ಮಹಿಳೆ ಕೆಲವು ಕ್ಷೇತ್ರಗಳಲ್ಲಿ ಅಸಮರ್ಥಳಾಗಿರುವುದು, ಇಂತಹವುಗಳನ್ನು ಸೆಲೆಸ್ಟೈನ್ ಕ್ರೋಶೆಲ್ ಅವರು ತಮ್ಮ ಪುಸ್ತಕ "ಜಲ ಸಂಪನ್ಮೂಲ ನಿರ್ವಹಣಾ ಕಾರ್ಯಕ್ರಮ 1977" ರಲ್ಲಿ ಲಿಂಗ ಸಮಗ್ರತೆಯನ್ನು ಗುರುತಿಸಿದ್ದಾರೆ.

ಸಧ್ಯದಲ್ಲಿ, ಪ್ರಪಂಚದ ಎಲ್ಲ ಕಡೆ ಸಮಾಜದಲ್ಲಿ ಮಹಿಳೆಯ ಸ್ಥಾನ ಅವಳ ಸಾಂಪ್ರದಾಯಿಕ ಕಲ್ಪನೆಗಳ ಬಗ್ಗೆ ಪನರ್ಮನನ/ ಪುನರ್ಚಿಂತನೆ ಪ್ರಾರಂಭವಾಗಿದೆ. ಅಭಿವೃದ್ಧಿ ಪರಿಣತರು, ಯೋಜನೆಗಳನ್ನು ರೂಪಿಸುವವರು, ಅನುಷ್ಠಾನ ಮಾಡುವವರು ಅನೇಕ ಪ್ರಯೋಗಗಳಿಂದ, ಮಹಿಳೆಯರಿಗೆ ಅಂಟಿಕೊಂಡ ಅಂತಹ ನಂಬಿಕೆಗಳು ಕೇವಲ ನಂಬಿಕೆಗಳೇ ಹೊರತು ಸತ್ಯಸಂಗತಿಗಳಲ್ಲವೆಂದು ಅರಿತುಕೊಂಡಿದ್ದಾರೆ. ಸಮಸ್ಯೆಗಳನ್ನು ಪರಿಹರಿಸಲು ನಮ್ಮ ಪ್ರಯತ್ನವು ಮುಖ್ಯವಾಗಿ ಗ್ರಾಮೀಣ ಮಹಿಳೆಯರ ಮತ್ತು ಗಿರಿಜನ ಮಹಿಳೆಯರಲ್ಲಿ ಇಂತಹ ನಂಬಿಕೆಗಳ ಅಮೂಲಾಗ್ರ ಬದಲಾವಣೆ ಮಾಡವುದು ಅಗತ್ಯವೆಂದು ನಂಬಲಾಗಿದೆ.

ಇಂದು ಧೋರಣೆಗಳನ್ನು/ನೀತಿಗಳನ್ನು ರೂಪಿಸುವವರು, ಅಭಿವೃದ್ಧಿ ಕಾರ್ಯಗಳನ್ನು ತುಲನೆ ಮಾಡುವವರು, ಅನುಷ್ಠಾನಗೊಳಿಸುವವರು, ಲಿಂಗ ಸಂವೇದನೆ ಬಗ್ಗೆ ಸುಧಾರಣೆ ಮತ್ತು ಮಹಿಳೆಯರನ್ನು ಅಭಿವೃದ್ಧಿಯ ಬೆಳವಣಿಗೆಯಲ್ಲಿ ಸೇರಿಸಿಕೊಳ್ಳುವುದು ಖಂಡಿತಾ ಆಗಬೇಕಾದ ಅಗತ್ಯವೆಂದು ಮನಗಂಡಿದ್ದಾರೆ. ಸಹಾಯ ಹಸ್ತ ಚಾಚುವ ಸಂಸ್ಥೆಗಳಾದ ಅಂತರರಾಷ್ಟ್ರೀಯ ಹಣಕಾಸು ನಿಧಿ (ಐ.ಎಂ.ಎಫ್), ಮತ್ತು ಜಾಗತಿಕ ಬ್ಯಾಂಕ್‌ಗಳು ಲಿಂಗಾಧಾರಿತ ಕೌಶಲಗಳನ್ನು ಅನುಷ್ಠಾನಗೊಳಿಸಿ ಅವುಗಳಲ್ಲಿ ಪಾಲ್ಗೊಳ್ಳುವಂತೆ ಮಾಡಲು ಒತ್ತಾಯಿಸುತ್ತಿದ್ದಾರೆ. ಕುಟುಂಬಗಳಲ್ಲಿನ ಮಹಿಳೆಯರು ಕ್ರಿಯಾತ್ಮಕವಾಗಿ ಪಾಲ್ಗೊಳ್ಳದೇ ಸಾಮಾಜಿಕ ಆರ್ಥಿಕ ಬೆಳವಣಿಗೆಯನ್ನು ಸಾಧಿಸಲಾಗುವುದಿಲ್ಲವೆಂದು ಹೆಚ್ಚು ಹೆಚ್ಚಾಗಿ ಮನಗಾಣಲಾಗುತ್ತಿದೆ. ಇದು ಅನೇಕ ಅಭಿವೃದ್ಧಿ ಹೊಂದುತ್ತಿರುವ ದೇಶಗಳ ನೀತಿ/ಧೋರಣೆ ಬದಲಾವಣೆಗಳಲ್ಲಿ ಅವರ ರಾಷ್ಟ್ರೀಯ ಗುರಿಗಳನ್ನು ಕೂಡಿ, ಕಂಡುಬರುತ್ತಿದೆ. ಈ ಬದಲಾವಣೆಯನ್ನು ಭಾರತವು ಒಪ್ಪಿಕೊಂಡಿದ್ದು ಅನೇಕ ಲಿಂಗ ಸಮಾನ ಸಬಲೀಕರಣ ನೀತಿಗಳನ್ನು/ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನ ಗೊಳಿಸಲಾಗುತ್ತಿದೆ.

ಕರ್ನಾಟಕ ಸರ್ಕಾರವು ಈ ದಿಶೆಯಲ್ಲಿ ಮುಂಚೂಣಿಯಲ್ಲಿದ್ದು ಮಹಿಳೆಯರ ಭಾಗವಹಿಸುವಿಕೆಯಿಂದ ಅಭಿವೃದ್ಧಿಯಲ್ಲಿ ಪ್ರಗತಿ ಸಾಧಿಸಬಹುದೆಂದು ಮನಗಂಡಿರುತ್ತದೆ. ಈ ನೀತಿಯನ್ನು ಅನುಸರಿಸಿಕೊಂಡು ಹೋಗಲು ಗಿರಿಜನ/ಪರಿಶಿಷ್ಟ ಪಂಗಡದ ಮಹಿಳೆಯರಿಗಾಗಿ 1990ರಲ್ಲೇ ಭೂಮಿ ಖರೀದಿ ಮತ್ತು ಭೂಮಿ ಹಂಚಿಕೆ ಕಾರ್ಯಕ್ರಮವನ್ನು ಸಮಾಜ ಕಲ್ಯಾಣ ಇಲಾಖೆಯ ಮೂಲಕ ಅನುಷ್ಠಾನಗೊಳಿಸಲು ಪ್ರಾರಂಭಿಸಿತು. ಈ ಮೇಲೆ ಹೇಳಿದ ನಂಬಿಕೆಗಳನ್ನು ತೊಡೆದುಹಾಕಿ ಗಿರಿಜನ/ಪರಿಶಿಷ್ಟ ಪಂಗಡಗಳಲ್ಲಿ ಸಮಾನತೆ ತರಲು, ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ಕಾರ್ಪೋರೇಶನ್ ನಿಯಮಿತದ (KMVSTDC) ಮೂಲಕ ಅನುಷ್ಠಾನಗೊಳಿಸಿದ ಭೂಮಿ ಖರೀದಿ ಮತ್ತು ಭೂಮಿ ಹಂಚಿಕೆ ಕಾರ್ಯಕ್ರಮವು ಅಂತಹ ಒಂದು ಕೌಶಲಯುಕ್ತ ಕಾರ್ಯಕ್ರಮವಾಗಿರುತ್ತದೆ.

**1.2. ಪರಿಶಿಷ್ಟ ಪಂಗಡಗಳ ಜನಸಂಖ್ಯೆ, ಆರ್ಥಿಕತೆ ಮತ್ತು ಸಂಪ್ರದಾಯ.**

ಭಾರತದಲ್ಲಿ ಕರ್ನಾಟಕವು ಒಂದು ರಾಜ್ಯವಾಗಿದ್ದು, ಚಾರಿತ್ರಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆಯುಳ್ಳದ್ದಾಗಿದೆ. ವಿಸ್ತೀರ್ಣದಲ್ಲಿ ಏಳನೆಯದಾಗಿದ್ದು, 6.1131 ಕೋಟಿ (2011 ರ ಜನಗಣತಿ ಆಧಾರದ ಪ್ರಕಾರ) ಜನಸಂಖ್ಯೆಯಿದ್ದು ಎಂಟನೇ ಸ್ಥಾನದಲ್ಲಿರುತ್ತದೆ. ರಾಜ್ಯದಲ್ಲಿ ಈಗ 30 ಜಿಲ್ಲೆಗಳಿದ್ದು ಹೆಚ್ಚಾಗಿ ಕನ್ನಡ ಭಾಷೆ ಬಳಕೆಯಲ್ಲಿದ್ದು ಆಡಳಿತ ಭಾಷೆಯೂ ಆಗಿರುತ್ತದೆ. ಕನ್ನಡಿಗರಲ್ಲದೇ ಕೊಡವ, ಕೊಂಕಣಿ, ತುಳು ಭಾಷಿಕರಿಗೂ ರಾಜ್ಯವು ಮನೆಯಾಗಿದೆ. ಅಲ್ಲದೇ ಅಲ್ಪ ಸಂಖ್ಯೆಯಲ್ಲಿ ಟಿಬೆಟ್ಟಿನ ಬೌದ್ಧರೂ ಕರ್ನಾಟಕದಲ್ಲಿದ್ದಾರೆ. ಭಾರತ ಸರ್ಕಾರದಿಂದ ಅಧಿಸೂಚಿಲ್ಪಟ್ಟ 50 ವಿವಿಧ ಪರಿಶಿಷ್ಟ ಪಂಗಡಗಳಿದ್ದು ಅವರಲ್ಲಿ 14 ಪಂಗಡಗಳನ್ನು ದೇಶೀಯವೆಂದು ಪರಿಗಣಿಸಲಾಗಿದೆ. ರಾಜ್ಯದಲ್ಲಿ 42.49 ಲಕ್ಷ ಗಿರಿಜನರಿದ್ದು ಅವರಲ್ಲಿ 50,870 ಜನ ಪ್ರಾಚೀನ ಗುಂಪಿಗೆ ಸೇರಿದ್ದಾರೆ. ಗಿರಿಜನರ ಜನಸಂಖ್ಯೆಯು ರಾಜ್ಯದ ಒಟ್ಟು ಜನಸಂಖ್ಯೆಯ ಶೇ. 6.95 ರಷ್ಟಿದೆ. ಅವರೆಲ್ಲಾ ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿಯೂ ಇದ್ದರೆ, ರಾಯಚೂರಿನಲ್ಲಿ ಹೆಚ್ಚಿಗಿದ್ದು (19.07 %) ಚಿತ್ರದುರ್ಗದಲ್ಲಿ 18.22%, ಬಳ್ಳಾರಿಯಲ್ಲಿ 17.33%, ಬೀದರದಲ್ಲಿ 13.87%, ಯಾದಗಿರಿಯಲ್ಲಿ 12.52%, ಚಿಕ್ಕಬಳ್ಳಾಪುರದಲ್ಲಿ 12.40%, ದಾವಣಗೆರೆಯಲ್ಲಿ 11.97%, ಕೊಪ್ಪಳದಲ್ಲಿ 11.81%, ಚಾಮರಾಜನಗರದಲ್ಲಿ 11.78%, ಮೈಸೂರಿನಲ್ಲಿ 11.17%, ಮತ್ತು ಕೊಡಗಿನಲ್ಲಿ 10.46% ಇದ್ದಾರೆ.

ಈ ಮುಂದಿನ ಪಟ್ಟಿಯಲ್ಲಿ ಜಿಲ್ಲಾವಾರು ಪರಿಶಿಷ್ಟ ಜನಾಂಗದ ಜನಸಂಖ್ಯೆ ಜೊತೆಗೆ ಪರಿಶಿಷ್ಟ ಮಹಿಳೆಯರ ಸಂಖ್ಯೆಯನ್ನೂ ನೀಡಲಾಗಿದೆ.

**ಕೋಷ್ಟಕ –1. ಜಿಲ್ಲಾವಾರು ಜನಸಂಖ್ಯೆ ಅದರಲ್ಲಿ ಪರಿಶಿಷ್ಟ ಪಂಗಡದ ಸಂಖ್ಯೆ. 2011ರ ಜನಗಣತಿ ಪ್ರಕಾರ.**

| ಕ್ರಮ ಸಂ. | ಜಿಲ್ಲೆ. | ಒಟ್ಟು ಜನಸಂಖ್ಯೆ, | | ಪರಿಶಿಷ್ಟ ಪಂಗಡದ ಸಂಖ್ಯೆ. | | ಒಟ್ಟು ಜನ ಸಂಖ್ಯೆಗೆ ಪರಿಶಿಷ್ಟ ಪಂಗಡ (ಶೇ.) |
|---|---|---|---|---|---|---|
| | | ಗಂಡಸರು, | ಮಹಿಳೆಯರು. | ಗಂಡಸರು. | ಮಹಿಳೆಯರು | |
| 1. | ಬಾಗಲಕೋಟೆ. | 952902 | 1890826 | 48470 | 48733 | 5.14 |
| 2. | ಬೆಂಗಳೂರು. (ನಗರ) | 5025498 | 4563412 | 99164 | 91075 | 1.98 |
| 3 | ಬೆಂಗಳೂರು. (ಗ್ರಾ) | 507514 | 479743 | 27147 | 25756 | 5.36 |
| 4 | ಬೆಳಗಾವಿ. | 2427104 | 2351335 | 148673 | 148525 | 6.22 |
| 5 | ಬಳ್ಳಾರಿ. | 1280402 | 1251981 | 225451 | 225955 | 17.83 |
| 6 | ಬೀದರ್. | 870850 | 829168 | 119787 | 116035 | 13.87 |
| 7 | ವಿಜಾಪುರ. | 1112953 | 1062149 | 19912 | 19402 | 1.81 |
| 8 | ಚಾಮರಾಜನಗರ. | 513359 | 507603 | 593369 | 60850 | 11.78 |
| 9 | ಚಿಕ್ಕಮಗಳೂರು. | 567483 | 570270 | 21990 | 22980 | 3.95 |
| 10 | ಚಿಕ್ಕಬಳ್ಳಾಪುರ | 637504 | 616873 | 79156 | 77331 | 12.48 |
| 11 | ಚಿತ್ರದುರ್ಗ | 843411 | 816967 | 152939 | 149615 | 18.82 |
| 12 | ದಕ್ಷಿಣ ಕನ್ನಡ. | 1032577 | 1051048 | 40961 | 41307 | 3.95 |
| 13 | ಧಾರವಾಡ. | 939127 | 907866 | 44173 | 43375 | 4.74 |
| 14 | ದಾವಣಗೆರೆ. | 989602 | 957303 | 117808 | 115304 | 11.97 |
| 15 | ಗದಗ | 538477 | 526758 | 30975 | 30679 | 5.79 |
| 16 | ಗುಲಬರ್ಗಾ. | 1307061 | 1257831 | 32830 | 32429 | 2.54 |
| 17 | ಹಾಸನ. | 885807 | 890414 | 15986 | 16343 | 1.82 |
| 18 | ಹಾವೇರಿ. | 819295 | 779211 | 72109 | 69271 | 8.89 |
| 19 | ಕೊಡಗು. | 274725 | 280037 | 28510 | 29544 | 10.46 |
| 20 | ಕೋಲಾರ. | 779401 | 760830 | 39997 | 38878 | 5.12 |
| 21 | ಕೊಪ್ಪಳ. | 701479 | 689813 | 82761 | 81510 | 11.81 |
| 22 | ಮಂಡ್ಯ. | 909441 | 899239 | 11310 | 11092 | 1.14 |
| 23 | ಮೈಸೂರು. | 1511206 | 1483538 | 166697 | 167850 | 11.17 |
| 24 | ರಾಯಚೂರು. | 966493 | 958280 | 182101 | 184970 | 19.07 |
| 25 | ರಾಮನಗರ. | 548060 | 534679 | 11619 | 11327 | 2.12 |
| 26 | ಶಿವಮೊಗ್ಗ. | 897817 | 875693 | 32707 | 32705 | 3.73 |
| 27 | ತುಮಕೂರು. | 1354770 | 1326679 | 105265 | 104294 | 7.82 |
| 28 | ಉಡುಪಿ. | 562896 | 615012 | 26228 | 26669 | 4.49 |
| 29 | ಉತ್ತರ ಕನ್ನಡ. | 727424 | 709423 | 17095 | 17144 | 2.38 |
| 30 | ಯಾದಗಿರಿ. | 591104 | 581881 | 73564 | 73285 | 12.52 |
| | ಒಟ್ಟು | 31075742 | 31025862 | 2668754 | 2114233 | 6.95 |

ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ಕಾರ್ಪೋರೇಶನ್ ನಿಯಮಿತವು (KMVSTDC) ಕರ್ನಾಟಕದಲ್ಲಿ ಪರಿಶಿಷ್ಟ ಜನಾಂಗಗಳ ಒಟ್ಟಾರೆ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಎಲ್ಲ ಪರಿಶಿಷ್ಟ

ಪಂಗಡಗಳ ಜನರನ್ನು ಪರಿಗಣಿಸಿರುತ್ತದೆ. 2001ರ ಜನಗಣತಿಯಲ್ಲಿ ಮೊದಲ ಬಾರಿಗೆ ನಾಯಿಕೊಡ ಎಂಬ ಜನಾಂಗವನ್ನು ಗಣತಿ ಮಾಡಲಾಗಿದ್ದು ಅದರಲ್ಲಿ, ನಾಯ್ಕ್, ನಾಯುಕ, ಬೇಡ, ಬೇಡರ್, ಮತ್ತು ವಾಲ್ಮೀಕಿ ಜನಾಂಗಗಳು ಸೇರಿರುತ್ತವೆ. ನಾಯಿಕೊಡ ಜನಾಂಗವು ಅತಿ ದೊಡ್ಡ ಪರಿಶಿಷ್ಟ ಪಂಗಡವಾಗಿದ್ದು ದಶಕದಲ್ಲಿ ಅತಿ ಹೆಚ್ಚು ಅಂದರೆ ಶೇ.113 ಹೆಚ್ಚಳ ಸಾಧಿಸಿರುತ್ತದೆ, ಆದರೆ ಅದರ ಹೆಚ್ಚಳವು 1981–91 ರ. ದಶಕದಲ್ಲಿ ಶೇ. 8.8 ರಷ್ಟಿತ್ತು. ಕರ್ನಾಟಕದ ಪರಿಶಿಷ್ಟ ಪಂಗಡಗಳ ಜನ ಪ್ರಾಮುಖ್ಯವಾಗಿ ಗ್ರಾಮಾಂತರದಲ್ಲಿರುತ್ತಾರೆ. ಶೇ.84.7. ಗ್ರಾಮಾಂತರ ಪರಿಶಿಷ್ಟ ಪಂಗಡಗಳಲ್ಲಿ ಕೋಳಿ, ಧೋರ್ ಅವರು ಅತಿ ಹೆಚ್ಚಿನ ಸಂಖ್ಯೆಯಲ್ಲಿರುತ್ತಾರೆ. 92.2%. ನಂತರ ಗೋಂಡರು(ಅಥವಾ ಗೊಂಡರು) 91.7%, ಮರಾಠಿ 90.8%, ಮತ್ತು ನಾಯಿಕೊಡ 85.1%. ಇರುತ್ತಾರೆ.

ಚಾರಿತ್ರಿಕವಾಗಿ, ಪರಿಶಿಷ್ಟ ಪಂಗಡಗಳ ಜನ ಅಲೆಮಾರಿ ಜೀವನ ಸಾಗಿಸುತ್ತಿದ್ದು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಅನ್ನ, ನೀರು ಮತ್ತು ಉದ್ಯೋಗ ಅರಸಿ ಹೋಗುತ್ತಿದ್ದರು. ನಂತರ ಉದ್ಯೋಗ ಮತ್ತು ಆಶ್ರಯಗಳ ಲಭ್ಯತೆಯಮೇಲೆ ಕಾಲಗಳನ್ನನುಸರಿಸಿ (ಮಳೆಗಾಲ, ಛಳಿಗಾಲ ಇತ್ಯಾದಿ) ಭಾಗಶಃ ಅಲೆಮಾರಿಗಳಾದರು. ಮುಂದೆ ಸರ್ಕಾರವು ಅವರಿಗೆ ಅನೇಕ ಅಭಿವೃದ್ಧಿ ಕಾರ್ಯಕ್ರಮಗಳನ್ನು ಜಾರಿಗೊಳಿಸಿ ಅವರು ಒಂದೇ ಸ್ಥಳದಲ್ಲಿ ನೆಲೆಸಲು ಸಹಾಯ ಮಾಡಿತು ಮತ್ತು ಅವರನ್ನು ಜೀವನದ ಮುಖ್ಯವಾಹಿನಿಯೊಳಗೆ ತರಲು ಪ್ರಯತ್ನಿಸಲಾಯಿತು. ನಂತರ ಅವರು ಪ್ರಾಚೀನರು ಮತ್ತು ಅತ್ಯಂತ ಹಿಂದುಳಿದವರಾದ್ದರಿಂದ ಸರ್ಕಾರವು ಅವರಿಗಾಗಿಯೇ ಪ್ರತ್ಯೇಕವಾಗಿ ವಿಶೇಷ ಘಟಕ ಯೋಜನೆಗಳನ್ನು ಅನುಷ್ಠಾನಗೊಳಿಸಿತು. ಇಂದು ಸರ್ಕಾರದ ಹಾಗೂ ಕೇಂದ್ರ ಸರ್ಕಾರದ ನೆರವಿನಿಂದ ಸಹಾಯ, ಬೆಂಬಲ ದೊರೆತದ್ದರಿಂದ ಅವರೂ ಇಂದು ಸಮಾಜದಲ್ಲಿ ಗುರಿತಿಸಲ್ಪಡುತ್ತಿದ್ದು ಅವರಿಗೂ ಮಾನ್ಯತೆ ದೊರೆಕಿದೆ. ಸಾಂಪ್ರದಾಯಿಕವಾಗಿ ಪರಿಶಿಷ್ಟ ಪಂಗಡಗಳ ಜನರು ಕಷ್ಟ ಜೀವಿಗಳಾಗಿದ್ದು, ಭಾವನಾತ್ಮಕವಾಗಿದ್ದು, ರೂಢಿಸಮ್ಮತವಾಗಿದ್ದು ಮತ್ತು ಸ್ವಾಭಾವಿಕವಾಗಿ ಸಂಪ್ರದಾಯ ನಿಷ್ಠರಾಗಿರುತ್ತಾರೆ. ಇಂದಿಗೂ ಸಹಾ ಅವರಿಗೆ ಊಟದ ವಿಷಯದಲ್ಲಾಗಲೀ, ಉಡುಪು ತೊಡುವುದರಲ್ಲಾಗಲೀ, ಪದ್ಧತಿಗಳಲ್ಲಿ/ನಂಬಿಕೆಗಳಲ್ಲಿ ತಮ್ಮದೇ ಆದ ವಿಧಾನಗಳನ್ನು ಪಾಲಿಸುತ್ತಾರೆ. ಅವರು ಭೂತ ಪ್ರೇತಗಳನ್ನು ಬಲವಾಗಿ ನಂಬುತ್ತಾರೆ ಮತ್ತು ತಲೆತಲಾಂತರಗಳಿಂದ ಬಂದ ಪೂಜಾ ಪದ್ಧತಿಗಳನ್ನು ಇಂದಿಗೂ ಆಚರಿಸುತ್ತಾರೆ. ಪುರಾತನ ಭಾರತದಲ್ಲಿ ಅವರು ಪುರಾತನ ವಿಧದ ಚಟುವಟಿಕೆಗಳು ಅಂದರೆ, ಕಾಡುಗಳಲ್ಲಿ ಬೇಟೆಯಾಡುವುದು, ಹಣ್ಣು ಹಂಪಲು, ಗೆಡ್ಡೆ ಗೆಣಸುಗಳನ್ನು ಸಂಗ್ರಹಿಸಿ ಆಹಾರವಾಗಿ ಉಪಯೋಗಿಸುವುದನ್ನು ಮಾಡುತ್ತಿದ್ದರು. ನಾವಿಂದು ಅವರಲ್ಲಿ ಒಂದು ಅಮೂಲಾಗ್ರ ಬದಲಾವಣೆಯನ್ನು ಕಾಣಬಹುದು, ಅವರೀಗ ಕೃಷಿ ಕಾರ್ಮಿಕರಾಗಿ ಜೀವನ ನಿರ್ವಹಣೆ ಮಾಡುತ್ತಿರುವುದನ್ನು ಕಾಣಬಹುದು. ಗಿರಿಜನರು ಪ್ರಾಣಿ ಪ್ರಿಯರಾದ್ದರಿಂದ ಅವರು ದನಗಳನ್ನು ಸಾಕಿ ಹಾಲು ಉತ್ಪಾದಿಸುವುದು, ಕುರಿ ಕೋಳಿ ಸಾಕುವುದು ಇತ್ಯಾದಿ ಕಸಬುಗಳಲ್ಲಿ ತೊಡಗಿದ್ದಾರೆ.

**ಅಧ್ಯಾಯ–2.**

## 2. ಮಧ್ಯ ಪ್ರವೇಶದ ಅಗತ್ಯ.

ಕರ್ನಾಟಕದಲ್ಲಿ ಪರಿಶಿಷ್ಟ ಪಂಗಡಗಳ ಜನ ಶೇ. 6.95 ರಷ್ಟಿದ್ದು ಅದರಲ್ಲಿ ಅರ್ಧದಷ್ಟು ಮಹಿಳೆಯರಿದ್ದಾರೆ. ಒಂದು ಅಂದಾಜಿನ ಪ್ರಕಾರ 50 ಪರಿಶಿಷ್ಟ ಪಂಗಡಗಳ ಗುಂಪುಗಳು ಇದರಲ್ಲಿ ಸೇರಿವೆ. ಅವರಿಗೆ ಸ್ವಂತ ಜಮೀನುಗಳಿಲ್ಲದ್ದರಿಂದ ಕೃಷಿ ಕಾರ್ಮಿಕರಾಗಿ, ಕೆಲಸದಾಳುಗಳಾಗಿ ತಮ್ಮ ಜೀವನೋಪಾಯವನ್ನು ಕಂಡುಕೊಂಡಿದ್ದಾರೆ. ಈ ಕುಟುಂಬಗಳ ಪುರುಷರು ವಿವಿಧ ವೃತ್ತಿಗಳನ್ನು ಮಾಡಿ ಸ್ವಲ್ಪ ಆದಾಯವನ್ನು ಗಳಿಸುತ್ತಿದ್ದಾರೆ. ಹಾಗಾಗಿ ಅವರ ಆರ್ಥಿಕ ಸ್ಥಿತಿಯು ಹೆಚ್ಚು ಕಡಿಮೆ ಒಂದೇ ಮಟ್ಟದಲ್ಲಿದ್ದು ಹೆಚ್ಚಿನ ಪ್ರಗತಿ ಆಗಿರುವುದಿಲ್ಲ. ಈ ಜನಾಂಗದ ಮಹಿಳೆಯರ ಸ್ಥಿತಿಯೂ ಏನಷ್ಟು ಚೆನ್ನಾಗಿರುವುದಿಲ್ಲ, ಏಕೆಂದರೆ ಅವರಿಗೆ ಹೇಳಿಕೊಳ್ಳುವಂತಹ ಆದಾಯ ಯಾವುದೂ ಇರುವುದಿಲ್ಲ. ಕೆಲವೇ ಕೆಲವು ಪ್ರಗತಿಪರ ಪರಿಶಿಷ್ಟ ಪಂಗಡಗಳವರನ್ನು ಬಿಟ್ಟು ಉಳಿದ ಹೆಚ್ಚಿನ ಪರಿಶಿಷ್ಟ ಪಂಗಡಗಳವರಿಗೆ ಆರ್ಥಿಕ ಪ್ರಗತಿಯ ಫಲ ಯಾವುದೂ ಸಿಕ್ಕಿರುವುದಿಲ್ಲ.

ಒಂದು ದೇಶದ ಆರ್ಥಿಕ ಪ್ರಗತಿಯು, ಮುಂದುವರಿದ ತಾಂತ್ರಿಕತೆಯಿಂದಾಗಿ ಎಲ್ಲರಿಗೂ ಸಮನಾವಕಾಶಗಳನ್ನು ಒದಗಿಸಬೇಕಾಗಿರುತ್ತದೆ. ಅದರಿಂದ ಉದ್ಯೋಗಾವಕಾಶಗಳು ಹೆಚ್ಚಿ ಉತ್ಪಾದನೆ ಹೆಚ್ಚಳದ ಮೂಲಕ ಆ ದೇಶದ ಆರ್ಥಿಕತೆ ಸುಧಾರಿಸುತ್ತದೆ. ಗ್ರಾಮೀಣ ಭಾಗದ ಪರಿಶಿಷ್ಟ ಪಂಗಡಗಳು ಅವಕಾಶ ವಂಚಿತರಾಗಿದ್ದರಿಂದ ಅವರು ಪ್ರತ್ಯೇಕವಾಗಿಯೇ ಇದ್ದುಬಿಟ್ಟರು ಮತ್ತು ಅವರಲ್ಲಿ ಮುಖ್ಯವಾಗಿ ಮಹಿಳೆಯರಿಗೆ ಆರ್ಥಿಕ ಸ್ವಾತಂತ್ರ್ಯ ಇಲ್ಲವಾದಂತಾಯಿತು. ಈ ದೃಷ್ಟಿಯಿಂದ ಕರ್ನಾಟಕ ಸರ್ಕಾರವು ಪರಿಶಿಷ್ಟ ಪಂಗಡಗಳ ಮಹಿಳೆಯರಿಗೆ ಜಮೀನು ನೀಡಿ ಅವರು ವ್ಯವಸಾಯ ಚಟುವಟಿಕೆಗಳಲ್ಲಿ ತೊಡಗಿ ಅವರ ಆರ್ಥಿಕ ಸ್ಥಿತಿ ಉತ್ತಮಗೊಳಿಸಲು ಸಹಾಯ ಮಾಡಿತು. ಎರಡನೇ ಆಯ್ಕೆ ಎಂದರೆ, ಅತ್ಯಂತ ಹಿಂದುಳಿದ ಗ್ರಾಮೀಣ ಭಾಗಗಳಲ್ಲಿನ ಪರಿಶಿಷ್ಟ ಪಂಗಡಗಳ ಕುಟುಂಬಗಳಲ್ಲಿನ ಮಹಿಳೆಯರನ್ನು ಆರ್ಥಿಕವಾಗಿ ಸಬಲೀಕರಣಗೊಳಿಸುವುದಾಗಿತ್ತು. ಹಾಗೂ ಅವರನ್ನು ಅರಣ್ಯ ಉತ್ಪನ್ನಗಳ ಮೇಲೆ ದುರ್ಗಮ ಪ್ರದೇಶಗಳಲ್ಲಿ ಜೀವಿಸುವುದನ್ನು ತಡೆದು ಇತರರಂತೆ ಉನ್ನತ ಮಟ್ಟದ ಜೀವನ ನಡೆಸಲು ತಯಾರು ಮಾಡುವುದಾಗಿತ್ತು.

ಸಾಮಾಜಿಕ ಆರ್ಥಿಕ ಅಭಿವೃದ್ಧಿಯ ಪರಿಕಲ್ಪನೆ ಭಾರತೀಯ ದೃಷ್ಟಿಯಲ್ಲಿ ಜ್ಞಾನಿಗಳು ಹೇಳಿದ ಹಾಗೆ ಅಭಿವೃದ್ಧಿ ಕಾರ್ಯಕ್ರಮಗಳಿಂದ ಬಡತನ ಕಡಿಮೆ ಮಾಡುವುದು, ಜೀವನ ಮಟ್ಟದಲ್ಲಿ ಸುಧಾರಣೆ, ಸಂಸ್ಥೆಗಳ ಸ್ಥಾಪನೆಯಿಂದ ಅಸಮಾನತೆ ಮತ್ತು ನಿರುದ್ಯೋಗಗಳನ್ನು ಕಡಿಮೆ ಮಾಡುವುದಾಗಿತ್ತು. ಅದರಿಂದ ಮಾನವ ಅಭಿವೃದ್ಧಿ ನಿರಂತರವಾಗಿ ಮಾನವನ ಸಾಮರ್ಥ್ಯವನ್ನು ಪೂರ್ಣವಾಗಿ ಬಳಸಿಕೊಳ್ಳುವುದಾಗಿತ್ತು. ಈ ಬಗ್ಗೆ (UNDP) 1994 ರ ವರದಿಯಲ್ಲಿಯೂ ಸಹಾ ಉಲ್ಲೇಖಿಸಲಾಗಿದೆ.

ಈ ಅಭಿವೃದ್ಧಿಯ ಮತ್ತು ಬದಲಾವಣೆಯ ಪರಿಕಲ್ಪನೆಯು ನಮ್ಮ ಮನಸ್ಸಿನಲ್ಲಿ 'ಆರ್ಥಿಕ ಸಿದ್ಧಾಂತ ಮಾನವ' ಎನ್ನುವ ವಿಚಾರ ಪಾಶ್ಚಿಮಾತ್ಯ ವಿಚಾರ ಪರಂಪರೆ ತುಂಬಿರುವಾಗ ಇವುಗಳನ್ನು ಆಚರಣೆಗೆ ತರುವುದಾಗಿರುವುದಿಲ್ಲ. ಗುನ್ನಾರ್ ಮಿರ್ಡಾಲ್ ಅವರು ತಮ್ಮ ಏಷಿಯನ್ ಡ್ರಾಮಾ ಹೆಸರಿನ ಪುಸ್ತಕದಲ್ಲಿ ಯಾವುದೇ ದಾರಿಯಿಂದ ಅಭಿವೃದ್ಧಿ ಕಡೆಗೆ ಹೋಗುವಾಗ ಸಾಮಾಜಿಕ ಜ್ಞಾನದ ನಷ್ಟವುಂಟು ಮಾಡಿದ್ದು ಭಾರತದಂತಹ ಏಷಿಯನ್ ಸಮಾಜಗಳಲ್ಲಿ

ಬದಲಿಸುವುದು ಅನಗತ್ಯ ಎಂಬುದನ್ನು ಸರಿಯಾಗೇ ಎತ್ತಿ ತೋರಿಸಿದ್ದಾರೆ. ವಿಶಾಲವಾದ ಸಂಸ್ಥಾ ಪ್ರಯತ್ನವು, ವಿವಿಧ ರೀತಿಯ ಗುಂಪುಗಳಲ್ಲಿ, ಹಾಗೂ ಅವರ ಅಸಮ ಆರ್ಥಿಕ ಸ್ಥಾನಗಳ ಮತ್ತು ಸಾಂಸ್ಕೃತಿಕ ಹಿನ್ನೆಲೆಯುಳ್ಳವರಲ್ಲಿ ಒಟ್ಟು ಬೆಳವಣಿಗೆ ಬೇಕಾಗಿರುತ್ತದೆ. ಇದಕ್ಕೆ ಯೋಜಿತ ಬದಲಾವಣೆ ಬೇಕಿದ್ದು, ಭಾರತದಲ್ಲಿ ಇಂದು ಈ ದೃಷ್ಟಿಯ ಬೆಳವಣಿಗೆಗೆ ಒಪ್ಪಿಕೊಂಡು ಸರ್ಕಾರ ಮತು ಸರ್ಕಾರೇತರ ಸಂಸ್ಥೆಗಳು ಯೋಜಿತ ಮಧ್ಯಪ್ರವೇಶ ಕಾರ್ಯಕ್ರಮಗಳನ್ನು ಕೈಗೆತ್ತಿಕೊಂಡಿವೆ.

ಮುಂದುವರೆದು, ಸಂಯುಕ್ತ ರಾಷ್ಟ್ರಗಳ ಉನ್ನತ ಸಮಿತಿಯು, ಮಹಿಳೆಯರನ್ನು ಆರ್ಥಿಕ ಸಬಲತೆಯಿಂದ ದೂರವಿಡಲು ರಚನಾತ್ಮಕ ಪ್ರತಿಬಂಧಕಗಳನ್ನು ಒಡ್ಡುವುದನ್ನು ತೋರಿಸಿದೆ. ಈ ಬಗ್ಗೆ ಅಧ್ಯಯನ ಮಾಡಿದ ಡಾ: ಪುಟ್ಟರಾಜು ಮತ್ತು ಹೆಗ್ಡೆಯವರು ತಮ್ಮ ಅನುಭವದ ಆಧಾರದಮೇಲೆ ಕರ್ನಾಟಕದಲ್ಲಿ ಗಿರಿಜನ ಮಹಿಳೆಯರ ಸಬಲೀಕರಣ ಎನ್ನುವ ವಿಷಯದ ಮೇಲೆ ನಡೆಸಿದ ಅಧ್ಯಯನದಲ್ಲಿ ಸಾಬೀತು ಪಡಿಸಿದ್ದಾರೆ.

**ಅಧ್ಯಾಯ–3.**

## 3. ಭೂಮಿ ಖರೀದಿ ಮತ್ತು ಹಂಚಿಕೆ ಯೋಜನೆ – ಮರು ಪರಿಶೀಲನೆ.

ಕರ್ನಾಟಕ ರಾಜ್ಯದಲ್ಲಿ 1990–91 ರಷ್ಟು ಹಿಂದೆಯೇ ಭೂರಹಿತ ಪರಿಶಿಷ್ಟ ಪಂಗಡದ ಮಹಿಳೆಯರಿಗೆ ಭೂಮಿ ಖರೀದಿಸಿ ಹಂಚಿಕೆ ಮಾಡುವ ಯೋಜನೆಯನ್ನು ಪ್ರಾರಂಭಿಸಲಾಯಿತು. ಪ್ರಾರಂಭದಲ್ಲಿ ಈ ಯೋಜನೆಯನ್ನು ಕರ್ನಾಟಕ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಕಾರ್ಪೋರೇಶನ್ ಅವರು ಅನುಷ್ಠಾನಗೊಳಿಸಿದರು. ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತವನ್ನು ಕರ್ನಾಟಕ ಸರ್ಕಾರವು 1956ರ ಕಂಪನಿಗಳ ಕಾಯಿದೆ ಪ್ರಕಾರ ಪರಿಶಿಷ್ಟ ಪಂಗಡಗಳ ಉನ್ನತೀಕರಣಕ್ಕಾಗಿ ಸ್ಥಾಪಿಸಲಾಯಿತು. ಇದರ ಹೆಸರನ್ನು 2013ರಲ್ಲಿ ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ಕಾರ್ಪೋರೇಶನ್ ನಿಯಮಿತ (KMVSTDC) ಎಂದು ಮರು ನಾಮಕರಣ ಮಾಡಲಾಯಿತು. ಈ ಕಾರ್ಪೋರೇಶನ್ ಈಗಿನ ಭೂ ರಹಿತ ಪರಿಶಿಷ್ಟ ಪಂಗಡದ ಮಹಿಳೆಯರಿಗೆ ಭೂಮಿ ಖರೀದಿಸಿ ಹಂಚಿಕೆ ಮಾಡುವ ಯೋಜನೆಯನ್ನು ರೂಪಿಸಿತು. ಅದರಿಂದ ಪರಿಶಿಷ್ಟ ಪಂಗಡದ ಮಹಿಳೆಯರಿಗೆ ಸ್ವಂತ ಭೂಮಿಯ ಒಡೆತನ ದೊರೆತು ಅವರ ಸಬಲೀಕರಣವಾಗಲು ಸಹಾಯ ಮಾಡಿದಂತಾಯಿತು. ಈ ಯೋಜನೆಯ ಅನುಷ್ಠಾನದಿಂದ ಫಲಾನುಭವಿ ಮಹಿಳೆಯರಿಗೆ ಸ್ಥಳೀಯ ಭೂಮಾಲೀಕರ ಹಿಡಿತದಿಂದ ತಪ್ಪಿಸಿಕೊಂಡು ಸ್ವತಂತ್ರವಾಗಿ, ಸ್ವಂತ ಜಮೀನಿನಲ್ಲಿ ದುಡಿದು ತೃಪ್ತಿಯಿಂದ ಜೀವಿಸಲು ಅನುಕೂಲವಾಯಿತು ಮತ್ತು ಅವರ ಸಾಮಾಜಿಕ–ಆರ್ಥಿಕ ಅಂತಸ್ತನ್ನು ಉತ್ತಮಪಡಿಸಿತು.

ಕರ್ನಾಟಕ ರಾಜ್ಯದ ಭೂ ಖರೀದಿ ಮತ್ತು ಭೂ ಹಂಚಿಕೆ ಯೋಜನೆಯು, ಕೃಷಿ ಕಾರ್ಮಿಕ ವರ್ಗಕ್ಕೆ ಸೇರಿದ ಭೂ ರಹಿತ ಪರಿಶಿಷ್ಟ ಪಂಗಡದ ಮಹಿಳೆಯರಿಗೆ 2 ಎಕರೆ ಖುಷ್ಕಿ ಜಮೀನು, ಅಥವಾ 1 ಎಕರೆ ತರಿ ಜಮೀನು, ಅಥವಾ 1/2 ಎಕರೆ ತೋಟದ ಜಮೀನನ್ನು ಖರೀದಿಸಲು ಆರ್ಥಿಕ ಸಹಾಯವನ್ನು ನೀಡುತ್ತದೆ. ಭೂಮಿಯನ್ನು ಫಲಾನುಭವಿ ಹೆಸರಿನಲ್ಲಿ ಖರೀದಿಸಲಾಗುತ್ತದೆ. ಫಲಾನುಭವಿಗೆ ಭೂಮಿ ಖರೀದಿಸಲು ಜಮೀನಿನ ಬೆಲೆಯ 50% ಹಣವನ್ನು ರಿಯಾಯತಿಯಾಗಿಯೂ ಉಳಿದ 50% ಭಾಗವನ್ನು 10 ವರ್ಷಗಳ ಅವಧಿಯಲ್ಲಿ 20 ಕಂತುಗಳಲ್ಲಿ ಶೇ.6 ರ ಬಡ್ಡಿ ದರದಲ್ಲಿ ಮರುಪಾವತಿಸುವ ಷರತ್ತಿನ ಮೇಲೆ ಸಾಲವಾಗಿ ನೀಡಲಾಗುವುದು. ಭೂಮಿಯ ಬೆಲೆಯನ್ನು ಆಯಾ ಪ್ರದೇಶಗಳಲ್ಲಿ ಚಾಲ್ತಿಯಲ್ಲಿರುವ ಬೆಲೆಗಳ ಆಧಾರದ ಮೇಲೆ ನಿಷ್ಕರ್ಷೆ ಮಾಡಲಾಗುವುದು. ಯೋಜನೆಯ ಮುಖ್ಯ ಉದ್ದೇಶವೆಂದರೆ, ಕೃಷಿ ಕೂಲಿ ಕಾರ್ಮಿಕರಾಗಿ ಜೀವನ ನಡೆಸುತ್ತಿರುವ ಭೂರಹಿತ ಪರಿಶಿಷ್ಟ ಪಂಗಡದ ಮಹಿಳೆಯರನ್ನು ಸಬಲೀಕರಣಗೊಳಿಸುವುದು ಆಗಿರುತ್ತದೆ.

### 3.1. ಯೋಜನೆಯ ಸ್ಥಾನ.

2013–14ರ ಮುಕ್ತಾಯದಲ್ಲಿ ಇಲಾಖೆ ಒದಗಿಸಿದ ಮಾಹಿತಿ ಪ್ರಕಾರ 965 ಪರಿಶಿಷ್ಟ ಪಂಗಡದ ಮಹಿಳೆಯರು 26.42 ಕೋಟಿ ಮೌಲ್ಯದ 466.51 ಎಕರೆ ತರಿ ಭೂಮಿ, 768.03 ಎಕರೆ ಖುಷ್ಕಿ ಭೂಮಿ, ಮತ್ತು 43.36 ಎಕರೆ ತೋಟದ ಜಮೀನುಗಳನ್ನು ಪಡೆದಿರುತ್ತಾರೆ. ಫಲಾನುಭವಿಗಳ ವರ್ಷಾವಾರು ವಿವಿಧ ವರ್ಗದ ಭೂಮಿ ಪಡೆದವರು, ಮತ್ತು ಬೆಲೆಗಳನ್ನು ಈ ಕೆಳಗಿನ ಕೋಷ್ಟಕದಲ್ಲಿ ಕೊಟ್ಟಿದೆ.

**ಕೋಷ್ಟಕ–2. ಯೋಜನೆಯ ಪ್ರಗತಿ**

| ವರ್ಷ | ಫಲಾನುಭವಿಗಳು. | ಭೂಮಿ ಎಕರೆಗಳಲ್ಲಿ. | | | | ಮೌಲ್ಯ ಲಕ್ಷ ರೂಪಾಯಿಗಳಲ್ಲಿ. |
|---|---|---|---|---|---|---|
| | | ತರಿ,(ನೀರಾವರಿ) | ಖುಷ್ಕಿ | ತೋಟ. | ಒಟ್ಟು. | |
| 2009–10 | 191 | 43.00 | 291.35 | 2.00 | 336.35 | 197.98 |
| 2010–11 | 159 | 65.00 | 184.00 | 1.00 | 250.00 | 238.15 |
| 2011–12 | 120 | 40.35 | 158.00 | –– | 198.35 | 267.06 |
| 2012–13 | 216 | 134.00 | 158.00 | 2.00 | 294.00 | 507.13 |
| 2013–14 | 279 | 184.16 | 91.43 | 38.36 | 313.95 | 1431.84 |
| ಒಟ್ಟು | 965 | 466.51 | 882.78 | 43.36 | 1392.65 | 2642.16 |




ಮೇಲಿನ ಅಂಕಿ ಅಂಶಗಳಿಂದ ತಿಳಿದು ಬರುವುದೇನೆಂದರೆ ಹಂಚಿಕೆ ಮಾಡಿದ ಜಮೀನುಗಳಲ್ಲಿ 63% ಖುಷ್ಕಿ, 34% ತರಿ (ನೀರಾವರಿ) ಮತ್ತು 3% ತೋಟದ ಜಮೀನುಗಳಾಗಿವೆ. ಐದು ವರ್ಷಗಳ ಸರಾಸರಿ ಭೂಮಿಯ ಬೆಲೆ 1.90 ಲಕ್ಷ ಇದ್ದು, ಈ ಅವಧಿಯಲ್ಲಿ ನಿಗಮವು ಪ್ರತಿ ಫಲಾನುಭವಿಗೆ 2.74 ಲಕ್ಷ ರೂಗಳನ್ನು ಖರ್ಚು ಮಾಡಿರುತ್ತದೆ.

**3.2. ಕೊರತೆಗಳು.**

ಹಂಚಿಕೆ ಮಾಡುವ ಜಮೀನು, ಫಲಾನುಭವಿಯ ವಾಸಸ್ಥಳದ ಸಮೀಪವಿರಬೇಕೆಂದು ಯೋಜನೆಯಲ್ಲಿ ಷರತ್ತು ಹಾಕಲಾಗಿತ್ತು. ಅನುಷ್ಠಾನದ ಸಮಯದಲ್ಲಿ, ಅನೇಕ ಜಿಲ್ಲೆಗಳಲ್ಲಿ ಹಂಚಿಕೆ ಮಾಡಬೇಕಾದ ಜಮೀನು ನಿರ್ದಿಷ್ಟ ಪಡಿಸಿದ ಅಂತರದಲ್ಲಿ ಸಿಕ್ಕಿರುವುದಿಲ್ಲ. ಹಾಗಾಗಿ ಈ ಯೋಜನೆಯ ಅವಧಿಯಲ್ಲಿ ಹೆಚ್ಚಿನ ಮಹಿಳೆಯರಿಗೆ ಒದಗಿಸಲು ಸಾಧ್ಯವಾಗಲಿಲ್ಲ. (ಅದರಲ್ಲೂ ರಾಜ್ಯದ ದಕ್ಷಿಣ ಭಾಗದಲ್ಲಿ). ಈ ಒಂದು ಕೊರತೆಯಿಂದಾಗಿ ನಿಗಮವು ಹೆಚ್ಚಿನ

ಫಲಾನುಭವಿಗಳಿಗೆ ಯೋಜನೆಯ ಫಲ ದೊರೆಕಿಸಲಾಗಲಿಲ್ಲ. ಈಗ ಈ ಷರತ್ತನ್ನು ಮಾರ್ಪಡಿಸಿ ಹೆಚ್ಚಿನ ಫಲಾನುಭವಿಗಳನ್ನು ಯೋಜನೆಯ ಪರಧಿಯಲ್ಲಿ ತರಲು ಅವಕಾಶ ಮಾಡಲಾಗಿದೆ. ಅದರಿಂದ ಫಲಾನುಭವಿಗೆ ಆಕೆ ವಾಸಿಸುತ್ತಿರವ ತಾಲೂಕಿನೊಳಗೆ ಎಲ್ಲಿ ಬೇಕಾದರೂ ಭೂಮಿಯನ್ನು ಹಂಚಿಕೆ ಮಾಡಬಹುದಾಗಿದೆ. ಈ ಹೊಸ ಕ್ಲಾಸ್ ಅನ್ನು ನಿಯಮಗಳಲ್ಲಿ ಸೇರಿಸಿದ ಬಳಿಕ ಫಲಾನುಭವಿ ವಾಸಿಸುತ್ತಿರುವ ತಾಲೂಕಿನ ಯಾವುದೇ ಭಾಗದಲ್ಲಿ ಭೂಮಿ ಪಡೆಯಲು ಸಲ್ಲಿಸಿದ ಅರ್ಜಿಯನ್ನು ನಿಗಮವು ಪರಿಶೀಲಿಸಿ ಕ್ರಮಕೈಗೊಳ್ಳಬಹುದಾಗಿದೆ.

# ಅಧ್ಯಾಯ-4.

## 4. ವ್ಯಾಪ್ತಿ. ಗುರಿ ಮತ್ತು ಅಧ್ಯಯನದ ರೂಪರೇಶೆ.

**4.1.** ಪರಿಶಿಷ್ಟ ಪಂಗಡದ ಮಹಿಳೆಯರಿಗೆ ಭೂಮಿ ಖರೀದಿಸಿ ಹಂಚಿಕೆ ಮಾಡುವ ಯೋಜನೆಯನ್ನು ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತವು ರೂಪಿಸಿ ಭೂರಹಿತ ಪರಿಶಿಷ್ಟ ಪಂಗಡದ ಮಹಿಳೆಯರಿಗೆ ಕೃಷಿ ಭೂಮಿಯ ಒಡತನ ಕೊಡಿಸಿ ಆರ್ಥಿಕ ಸಹಾಯವನ್ನು ದೊರಕಿಸಿ ಅವರನ್ನು ಸಬಲರನ್ನಾಗಿ ಮಾಡುವ ಗುರಿಯಿಂದ ಪ್ರಾರಂಭಿಸಲಾಯಿತು.

ಯೋಜನೆಯ ಅನುಷ್ಠಾನಕ್ಕೆ ಆರಿಸಿಕೊಂಡ ಉದ್ದೇಶಿತ ಮಹಿಳೆಯರು ಕೃಷಿ ಕಾರ್ಮಿಕರಾಗಿದ್ದು ಅವರಿಗೆ ಅಥವಾ ಅವರ ಗಂಡಂದಿರಿಗೆ ಯಾವುದೇ ಸ್ವಂತ ಭೂಮಿಯಿರಲಿಲ್ಲ. ಈ ಯೋಜನೆಯನ್ನು ರಾಜ್ಯದ 30 ಜಿಲ್ಲೆಗಳಲ್ಲಿಯೂ ಅನುಷ್ಠಾನಗೊಳಿಸಲಾಯಿತು. (2013–14 ರವರೆಗೆ 24 ಜಿಲ್ಲೆಗಳಲ್ಲಿ ಮಾತ್ರ ಅನುಷ್ಠಾನಗೊಳಿಸಲಾಯಿತು.)

ಈ ಯೋಜನೆಯ ಯಶಸ್ಸಿನಿಂದ ಫಲಾನುಭವಿ ಮಹಿಳೆಯರು ಸ್ಥಳೀಯ ಭೂ ಮಾಲೀಕರ ಹಿಡಿತದಿಂದ ಬಿಡುಗಡೆಯಾಗಿ ಸ್ವತಂತ್ರರಾಗಿ ಫಲದಾಯಕ ಉದ್ಯೋಗದಲ್ಲಿ ತೊಡಗಿ ತಮ್ಮ ಸಾಮಾಜಿಕ ಆರ್ಥಿಕ ಸ್ಥಾನ ಸುಧಾರಿಸಿಕೊಳ್ಳಲು ಸಹಾಯವಾಗಿದೆ. ಯೋಜಿತ ಸಾಮಾಜಿಕ ಆರ್ಥಿಕ ಅಭಿವೃದ್ಧಿ ಕಾರ್ಯಕ್ರಮಗಳು ಸಾಮಾನ್ಯವಾಗಿ ಆಗಿಂದಾಗ್ಯೆ ಮೌಲ್ಯಮಾಪನ ಮಾಡಲು ಅಂತರ್ಗತವಾಗಿ ಅವಕಾಶ ಮಾಡಿಕೊಟ್ಟಿರುತ್ತವೆ.

ಪ್ರಸಕ್ತ ಯೋಜನೆಯು, ಪರಿಶಿಷ್ಟ ಪಂಗಡದ ಭೂ ರಹಿತ ಮಹಿಳೆಯರಿಗೆ ಭೂಮಿ ಖರೀದಿಸಿ ಹಂಚಿಕೆ ಮಾಡಿದ್ದರಿಂದ, ಅವರಿಗೆ ಆರ್ಥಿಕ ಲಾಭ ದೊರೆತು ಅವರು ಆರ್ಥಿಕವಾಗಿ ಸಬಲರಾಗಿರುವರೇ ಎಂದು ತಿಳಿಯುವುದಾಗಿದೆ. ಅಧ್ಯಯನದ ವಿಶಾಲ ವ್ಯಾಪ್ತಿಯು 1) ನಿಗಮದಿಂದ ರೂಪಿಸಿದ ಷರತ್ತುಗಳು ಮತ್ತು ನಿಬಂಧನೆಗಳನ್ನು ಪಾಲಿಸಲಾಗಿದೆಯೇ, 2) ಯೋಜನೆಯ ಮುಖ್ಯ ಗುರಿಯಾದ ಮಹಿಳೆಯರನ್ನು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಸಬಲಗೊಳಿಸುವ ಉದ್ದೇಶ ಈಡೇರಿದೆಯೇ, 3) ಕ್ಷೇತ್ರದಲ್ಲಿ ಕೆಲಸ ಮಾಡಿದ ಅಧಿಕಾರಿಗಳಿಗೆ ಎದುರಾದ ಸಮಸ್ಯೆಗಳು, ಮತ್ತು 4) ಯೋಜನೆಯ ಪರಿಣಾಮಕಾರಿ ಅನುಷ್ಠಾನಕ್ಕೆ, ಅಧ್ಯಯನದ ಆಧಾರದ ಮೇಲೆ ನೀಡಿದ ಸಲಹೆಗಳನ್ನು ಮೌಲ್ಯ ಮಾಪನದ ವ್ಯಾಪ್ತಿಯಲ್ಲಿ ತರಲು ಉದ್ದೇಶಿಸಲಾಗಿದೆ.

ಅಧ್ಯಯನವು ನಿರ್ದಿಷ್ಟವಾಗಿ

1) ಮಹಿಳಾ ಕುಟುಂಬಗಳನ್ನು ಅಧ್ಯಯನದ ವ್ಯಾಪ್ತಿಯಲ್ಲಿ ತರುವುದು.
2) ಫಲಾನುಭವಿಯ ಆಯ್ಕೆಯಲ್ಲಿನ ಕಾರ್ಯ ವಿಧಾನ
3) ಆಯ್ಕೆಗೆ ಮಾನದಂಡ,
4) ಖರೀದಿಗೆ ಯೋಗ್ಯವಾದ ಭೂಮಿಯ ತರಹೆ.
5) ಫಲಾನುಭವಿಯಾಗಬಯಸುವವರು ಒದಗಿಸಬೇಕಾದ ದಾಖಲೆಗಳು.
6) ಹಣ ಹೊಂದಾಣಿಕೆ/ಬೆಲೆಯನ್ನು ಮತ್ತು ಸಾಲ ಹಂಚಿಕೊಳ್ಳುವ ವ್ಯವಸ್ಥೆ. ಮತ್ತು

7) ಖರೀದಿ ಮಾಡಲ್ಪಟ್ಟ ಜಮೀನನ್ನು ಹಂಚಿಕೆದಾರಳ ಪರವಾಗಿ ನೋಂದಣಿ, ಮತ್ತು ಭೂಮಿಯ ಹಸ್ತಾಂತರ.

**4.2. ಧ್ಯೇಯಗಳು.**

ಯೋಜನೆಯ ನಿರ್ದಿಷ್ಟ ಧ್ಯೇಯಗಳು ಈ ಕೆಳಗಿನಂತಿವೆ.

1. ಹಂಚಿಕೆಯಾದ ಭೂಮಿಯ ಮಣ್ಣಿನ ಫಲವತ್ತತೆ ತಿಳಿಯುವುದು,
2. ಹಂಚಿಕೆಯಾದ ಭೂಮಿಯನ್ನು ಸಮತಟ್ಟು ಮಾಡಲಾಗಿದೆಯೇ.
3. ಹಂಚಿಕೆಯಾದ ಮರುಕ್ಷಣವೇ ಫಲಾನುಭವಿಗಳು ಜಮೀನಿನಲ್ಲಿ ಕೃಷಿ ಪ್ರಾರಂಭಿಸಿದ್ದಾರೆಯೇ,
4. ಸಾಲದ ಮರುಪಾವತಿ ಕ್ರಮವಾಗಿ ಆಗುತ್ತಿದೆಯೇ,
5. ಕೃಷಿ ತಾಂತ್ರಿಕತೆಯ ಅನುಷ್ಠಾನವಾಗುತ್ತಿದೆಯೇ,
6. ಸಂಬಂಧಪಟ್ಟ ಇಲಾಖೆಗಳು ಸಹಕರಿಸುತ್ತಿವೆಯೇ,(ಒಟ್ಟಾಗುತ್ತಿವೆಯೇ)

ಅದರ ಮೇಲೆ ನಿರ್ದಿಷ್ಟ ಪ್ರಶ್ನೆಗಳ ಬಗ್ಗೆ ಉಲ್ಲೇಖಿತ/ಉಲ್ಲೇಖದ ಷರತ್ತುಗಳ ಪ್ರಕಾರ (ಟಿ.ಓ.ಆರ್) ಅಧ್ಯಯನ ಮಾಡಬೇಕಿದೆ. (ಟಿ.ಓ.ಆರ್–ಅನುಬಂಧ–1)

1. ಫಲಾನುಭವಿಗಳ ಅರ್ಹತೆಯ ಮಾನದಂಡ.
2. ಆಯ್ಕೆಯಲ್ಲಿ ಭೂಮಿಯ ಅರ್ಹತೆಯ ಮಾನದಂಡ.
3. ಗ್ರಾಮಸಭೆಯಲ್ಲಿ ಫಲಾನುಭವಿಗಳ ಆಯ್ಕೆ.
4. ಫಲಾನುಭವಿಗಳ ಜಾತಿ ಮತ್ತು ಉಪಜಾತಿ.
5. ಭೂ ಮಾರಾಟಗಾರರ ಸಾಮಾಜಿಕ ಆರ್ಥಿಕ ಜೀವನ ಚಿತ್ರ.
6. ಫಲಾನುಭವಿಗಳ ಕುಟುಂಬಸ್ಥರ ಭೂ ಒಡೆತನ.
7. ಹಂಚಿಕೆಗಾಗಿ ಭೂ ಖರೀದಿಗೆ ಜಮೀನನ್ನು ತೋರಿಸಿದ ಜನ.
8. ಫಲಾನುಭವಿ ಆಯ್ಕೆಯಾದಂದಿನಿಂದ ಅಂತಿಮವಾಗಿ ಭೂಮಿ ಹಂಚಿಕೆ ಮಾಡಲು ತೆಗೆದುಕೊಂಡ ಸಮಯ.
9. ಕೊಡುವುದರಲ್ಲಿ/ತೆಗೆದುಕೊಳ್ಳುವುದರಲ್ಲಿ ಫಲಾನುಭವಿಗಳಿಂದ ಏನಾದರೂ ವಿಳಂಬವಾಗಿದೆಯೇ.
10. ಫಲಾನುಭವಿಗಳಿಗೆ ಹಂಚಿಕೆಯಾದ ಜಮೀನಿನಲ್ಲಿ ಬೇಸಾಯ ತಡವಾಗಿದೆಯೇ.
11. ಫಲಾನುಭವಿಗಳು ಇಷ್ಟಪಟ್ಟ ಭೂಮಿಯ ತರಹೆ.
12. ನಿಗಮದಿಂದ ಅಥವಾ ಫಲಾನುಭವಿಗಳಿಂದಲೇ ಕೊಳವೆ ಭಾವಿ ಕೊರೆಸಿದ್ದು.
13. ಫಲಾನುಭವಿಗಳ ಮತ್ತು ಅವರ ಕುಟುಂಬಸ್ಥರ ಸಾಮಾಜಿಕ ಆರ್ಥಿಕ ಸ್ಥಿತಿಯಲ್ಲಿ ಮೇಲ್ನೋಟಕ್ಕೆ ಕಾಣುವಂತಹ ಬದಲಾವಣೆ.
14. ಬೆಳೆ ವಿಮೆ ಮಾಡಿಸಿದ್ದು.
15. ಜಿಲ್ಲಾವಾರು ಸಾಲ ಮರುಪಾವತಿ/ವಸೂಲಾತಿ, ಮರುಪಾವತಿ ಯಾಗದಿದ್ದರೆ ಕಾರಣಗಳು.
16. ಫಲಾನುಭವಿಗಳಿಂದ ಜಮೀನಿನ ಮಾರಾಟ ಅಥವಾ ಗುತ್ತಿಗೆಗೆ ನೀಡಿರುವುದು.
17. ಸಲಹೆಗಳು.

**ಅಧ್ಯಯನದ ರೂಪರೇಶೆ.**

ಯೋಜನೆಯ ಉದ್ದೇಶ ಈಡೆರಿದೆಯೇ ಎಂದು ತಿಳಿಯಲು, ವಿವಿಧ ಸನ್ನಿವೇಶಗಳ ಪ್ರಶ್ನೆಗಳನ್ನು ಕೇಳುವ ವ್ಯಾಪ್ತಿ, ಅರ್ಹ ಮಾನದಂಡಗಳು, ಕಾರ್ಯವಿಧಾನಗಳು, ಪರಿಶೀಲಿಸಬೇಕಾದ ದಾಖಲೆಗಳನ್ನು ಒಳಗೊಂಡ ಈ ಅಧ್ಯಯನದಿಂದ ಒಂದು ಸಮಗ್ರ ರೂಪರೇಶೆಯನ್ನು ಹೊರತರುವುದಲ್ಲದೇ, ಆರ್ಥಿಕ ಸಹಾಯಕ್ಕೆ ಅರ್ಹತೆಯ ಮಾನದಂಡ,(ರಿಯಾಯತಿ ಹಣ ಮತ್ತು ಸಾಲ ಸೌಲಭ್ಯ) ಸಾಲ ವಸೂಲಿ ಇತ್ಯಾದಿಗಳ ಬಗ್ಗೆ ಅಧ್ಯಯನ ಮಾಡುವುದಾಗಿದೆ. ಪ್ರತಿಯೊಂದಕ್ಕೂ ಅನುಕೂಲಕರ ಪದ್ದತಿಗಳನ್ನು ಅನುಸರಿಸಲಾಗಿದೆ. ಅವು–

1) ಅನುಷ್ಠಾನಗೊಳಿಸುವವರೊಂದಿಗೆ ನಿರಂತರ ಸಂಪರ್ಕದಲ್ಲಿದ್ದು ಅವರೊಂದಿಗೆ ಪರಸ್ಪರ ಪ್ರತಿಕ್ರಿಯೆ, 2) ಮಾಹಿತಿಯನ್ನು ಸಂಗ್ರಹಿಸುವುದು ಮತ್ತು ಅದರ ವಿಶ್ಲೇಷಣೆ. 3) ಗ್ರಾಮ ಪಂಚಾತಿಯವರೊಂದಿಗೆ ಪರಸ್ಪರ ಪ್ರತಿಕ್ರಿಯೆ, 4) ಗ್ರಾಮಸ್ಥರೊಂದಿಗೆ ಮತ್ತು ಸಮಾಜದೊಂದಿಗೆ ಪರಸ್ಪರ ಪ್ರತಿಕ್ರಿಯೆ, ಇತ್ಯಾದಿ. ಮಾಹಿತಿ ಸಂಗ್ರಹಣೆಯಲ್ಲಿ ಬಳಸಿದ ವಿಧಾನಗಳು 1) ಫಲಾನುಭವಿಗಳು ಮತ್ತು ಅನುಷ್ಠಾನಗೊಳಿಸಿದ ಅಧಿಕಾರಿಗಳೊಂದಿಗೆ ಪ್ರತಿಕ್ರಿಯೆಗಾಗಿ ಪ್ರತ್ಯೇಕ ಪ್ರಶ್ನಾವಳಿಯನ್ನು ರೂಪಿಸುವುದು, 2) ಮತ್ತು ದ್ವಿತೀಯ ಹಂತದ ಮಾಹಿತಿ ಸಂಗ್ರಹಕ್ಕೆ ಪ್ರಪತ್ರಗಳನ್ನು ರೂಪಿಸುವುದು.

## ಅಧ್ಯಾಯ–5.

## 5. ವಿಧಾನ.

ಕರ್ನಾಟಕದಲ್ಲಿ ಭೂ ರಹಿತ ಪರಿಶಿಷ್ಟ ಪಂಗಡದ ಮಹಿಳಾ ಫಲಾನುಭವಿಗಳಿಗೆ ಅನುಷ್ಠಾನಗೊಳಿಸಿದ ಭೂಮಿ ಖರೀದಿ ಮತ್ತು ಹಂಚಿಕೆ ಯೋಜನೆಯಿಂದ ಆದ ಪ್ರಯೋಜನಗಳ ಅಧ್ಯಯನಕ್ಕೆ ಸಮೀಕ್ಷಾ ಪದ್ದತಿಯನ್ನು ಅನುಸರಿಸಲಾಗಿದೆ. ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದ್ದ ಎಲ್ಲ 24 ಜಿಲ್ಲೆಗಳನ್ನು ಅಧ್ಯಯನಕ್ಕೆ ಆರಿಸಲಾಗಿತ್ತು. ಸ್ಟ್ರಾಟಿಫೈಡ್ ರ್‍ಯಾಂಡಮ್ ಸ್ಯಾಂಪ್ಲಿಂಗ್ ವಿಧಾನದಿಂದ ಒಟ್ಟಿನಲ್ಲಿ 27 ತಾಲೂಕುಗಳು ಮತ್ತು 41 ಗ್ರಾಮಗಳನ್ನು ಆಯ್ಕೆ ಮಾಡಲಾಗಿತ್ತು. ಖುಷ್ಕಿ, ನೀರಾವರಿ, ಮತು ತೊಟದ ಜಮೀನುಗಳ ಎಲ್ಲ ಶ್ರೇಣಿಯ ಫಲಾನುಭವಿಗಳನ್ನು ಒಳಗೊಂಡು ಪೂರ್ಣ 5 ವರ್ಷಗಳ ಅವಧಿಯಲ್ಲಿ ಅನುಷ್ಠಾನಗೊಳಿಸಿದ ಕಾರ್ಯಕ್ರಮಗಳ ಅಧ್ಯಯನ ನಡೆಸಲಾಯಿತು. ಸಮೀಕ್ಷೆಗೆ 10% ಫಲಾನುಭವಿಗಳನ್ನು ಆರಿಸಬೇಕಿದ್ದರೂ ಸುಮಾರು 14% ಫಲಾನುಭವಿಗಳನ್ನು ಆರಿಸಲಾಗಿದ್ದು ಎಲ್ಲ ಸ್ಥರದ/ ವರ್ಗಗಳ ಫಲಾನುಭವಿಗಳನ್ನು ಆರಿಸಲಾಗಿತ್ತು. ಒಟ್ಟು 133 ಮಾಹಿತಿ ನೀಡುವ ಫಲಾನುಭವಿಗಳನ್ನು ಆರಿಸಲಾಗಿತ್ತು. ಕೆಲವು ಜಿಲ್ಲೆಗಳಲ್ಲಿ ಬೇಕಿದ್ದಷ್ಟು ಫಲಾನುಭವಿಗಳು ಇರಲಿಲ್ಲ ಆದ್ದರಿಂದ ಎಲ್ಲ/ಹೆಚ್ಚಿನ ಮಾದರಿಗಳನ್ನು ಬೇಕೆಂದೇ ಅಧ್ಯಯನಕ್ಕೆ ಆರಿಸಲಾಯಿತು. (ಉದಾ: ಬೆಂಗಳೂರು, ಕೊಡಗು, ಉತ್ತರ ಕನ್ನಡ, ದಕ್ಷಿಣ ಕನ್ನಡ, ಹಾವೇರಿ, ಬೀದರ್ ಮತ್ತು ಶಿವಮೊಗ್ಗ ಜಿಲ್ಲೆಗಳು)

### 5.1. ಮಾಹಿತಿ ಸಂಗ್ರಹ.

ಮಾಹಿತಿ ಸಂಗ್ರವನ್ನು ಸಂರಚನಾ ಪದ್ದತಿಯಲ್ಲಿ ವೈಯುಕ್ತಿಕ ಸಂದರ್ಶನದ ಮೂಲಕ ಕ್ಷೇತ್ರ ಅನ್ವೇಷಕರು, ತಂಡದ ಸದಸ್ವರನ್ನೊಳಗೊಂಡು ಅಧ್ಯಯನದ ವಿವಿಧ ಸನ್ನಿವೇಶಗಳ ಬಗ್ಗೆ ಫಲಾನುಭವಿಗಳಿಂದ ಹಂತ ಹಂತವಾಗಿ ತಪಸೀಲುಗಳಲ್ಲಿ ಮಾಹಿತಿಯನ್ನು ಸಂಗ್ರಹಿಸಲಾಯಿತು.

- ಫಲಾನುಭವಿ ಮಹಿಳೆಯರಿಂದ ಅವರ ಸಮಾಜಿಕ ಮತ್ತು ಆರ್ಥಿಕ ಮಟ್ಟವನ್ನು ತಿಳಿಯಲು ರಚಿಸಿದ ಪ್ರಶ್ನಾವಳಿ– ಉದಾ. ಅವರ ಕುಟುಂಬದ ವಿವರಗಳು, ಕುಟುಂಬದ ಗಾತ್ರ, ಮುಖ್ಯವಾದ ಮತ್ತು ಪೂರಕ ಕಸಬು/ವೃತಿಗಳು, ಬೆಳೆಸಿದ ಬೆಳೆಗಳು, ಭೂಮಿಯನ್ನು ವಶಕ್ಕೆ ಪಡೆದ ಬಳಿಕ ಮಾಡಬೇಕಾದ ಸುಧಾರಣೆಗಳು, ವಾರ್ಷಿಕ ಆದಾಯ ಮತ್ತು ವೆಚ್ಚಗಳು, ನಿವ್ವಳ ಮೇಲಾದಾಯ, ಕುಟುಂಬದ ಸದಸ್ಯರಲ್ಲಿ ಹಾಗೂ ಸಮಾಜದಲ್ಲಿ ಬದಲಾದ ದೃಷ್ಟಿಕೋನ, ಸಮಸ್ಯೆಗಳು ಮತ್ತು ನಿರ್ಬಂಧಗಳು ಇತ್ಯಾದಿ. (ಪ್ರಶ್ನಾವಳಿ ಅನುಬಂಧ 2 ರಲ್ಲಿದೆ.)
- ನಿಗಮದ ಜಿಲ್ಲಾ ಉಸ್ತುವಾರಿ ಮಾಡುವವರಿಗೆ, ಉದಾ: ಜಿಲ್ಲಾ ನಿರ್ವಾಹಕರು ಅಧಿಕೃತ ಮಾಹಿತಿ, ಫಲಾನುಭವಿಗಳನ್ನು ಆಯ್ಕೆ ಮಾಡುವಲ್ಲಿ ಪಾತ್ರಗಳು ಮತ್ತು ಜವಾಬ್ದಾರಿಗಳು, ರೀತಿಗಳು ಮತ್ತು ವಿಧಾನಗಳು, ಪ್ರತಿ ಕಾರ್ಯವಿಧಾನಕ್ಕೆ ನಿಗದಿ ಪಡಿಸಿದ ಸಮಯ, ಖರೀದಿಗೆ ನೀಡಲಿಚ್ಛಿಸಿದ ಭೂಮಿ ತಪಾಸಣೆ, ಎಲ್ಲ ಸಂಬಂಧಿಸಿದ ದಾಖಲೆಗಳ ಕಾನೂನು ಪ್ರಕಾರ ಪರಿಶೀಲನೆ, ಗುರಿ ಸಾಧಿಸಲು ಕಾರ್ಯವಿಧಾನಗಳಿಂದ ಅಡ್ಡಿ, ಯೋಜನೆಯ ಅನುಷ್ಠಾನದಲ್ಲಿ ಮುಖ್ಯ ಮಿತಿಗಳು, ಮತ್ತು ಇತರ

ನೋಟ/ದೃಷ್ಟಿ ಮತ್ತು ಸುಧಾರಿಸಿದ ಕಾರ್ಯಕ್ರಮ ಅನುಷ್ಠಾನದಿಂದ ನಿರೀಕ್ಷಿಸಿದ ಫಲಗಳ ಮಾಹಿತಿಯನ್ನು ಸಂಗ್ರಹಿಸಬೇಕು. (ಪ್ರಶ್ನಾವಳಿ–ಅನುಬಂಧ 3 ರಲ್ಲಿದೆ.)

**5.2** ವಿಷಯ ಕೇಂದ್ರಿತ ಗುಂಪು ಚರ್ಚೆ. (ಎಫ್.ಜಿ.ಡಿ)

ಅಧ್ಯಯನ ತಂಡದಿಂದ ಕ್ಷೇತ್ರ ವೀಕ್ಷಣೆ ಮತ್ತು ಫಲಾನುಭವಿಗಳೊಂದಿಗೆ ಅಧ್ಯಯನಕ್ಕೆ ಸಂಬಂಧಿಸಿದ ವಿಷಯ ಕೇಂದ್ರಿತ ಚರ್ಚೆ ಮತ್ತು ಯೋಜನೆ ಅನುಷ್ಠಾನಗೊಳಿಸಿದ ಅಧಿಕಾರಿಗಳೊಂದಿಗೆ ಪರಸ್ಪರ ಪ್ರತಿಕ್ರಿಯೆ ಒಂದು ಗುಣಮಟ್ಟದ ವಿಶ್ಲೇಶಣೆಗೆ ಅವಕಾಶವಾಗಿದೆ. ಅಧ್ಯಯನದ ತಂಡವು ಆರಿಸಿದ 40 ಗ್ರಾಮಗಳಲ್ಲಿ ವಿಷಯ ಕೇಂದ್ರಿತ ಗುಂಪು ಚರ್ಚೆಗಳನ್ನು ನಡೆಸಿದೆ.

**ಕೋಷ್ಟಕ. 3. ಕ್ಷೇತ್ರ ಭೇಟಿ ವಿವರಗಳು ಮತ್ತು ವಿಷಯ ಕೇಂದ್ರಿತ ಗುಂಪು ಚರ್ಚೆ ಪ್ರತಿಕ್ರಿಯೆಗಳು.**

| ಕ್ರ. ಸಂ. | ಜಿಲ್ಲೆ. | ತಾಲೂಕು. | ಗ್ರಾಮ( ಮಾದರಿಗಳ ಸಂಖ್ಯೆ ಸಹಿತ) | ಭೇಟಿ ದಿನಾಂಕ. | (ವಿ.ಕೇಂ.ಗು.ಚರ್ಚೆ) ರೈತರು/ಜನ/ಸಮಿತಿ ಯಲ್ಲಿನ ಸದಸ್ಯರು. |
|---|---|---|---|---|---|
| 1. | ಚಿಕ್ಕಬಳ್ಳಾಪುರ. | ಬಾಗೇಪಲ್ಲಿ. | ಅಬ್ಬರವಾರಿ ಪಲ್ಲಿ. (10)<br>ದುಗ್ಗಿನಾಯಕನಪಲ್ಲಿ(6) | 15/09/2016.<br>15/09/2015. | 10<br>12 |
| 2. | ಬಾಗಲಕೋಟೆ. | ಮುಧೋಳ. | ಅಳಗುಂಡಿ/ಪಾಲ್ಕಿಮನೆ(3)<br>ಲೋಕಾಪುರ. (2) | 15/03/2016<br>15/03/2016 | 3<br>2 |
| 3. | ಬೆಳಗಾವಿ. | ಗೋಕಾಕ. | ಗಿಳಿಹೊಸೂರು. (2)<br>ತಾಪಸಿ. (1)<br>ಪುಲಗದ್ದೆ. (2) | 29/03/2016<br>29/03/2016<br>29/03/2016 | 5<br>6<br>8 |
| 4. | ಬೆಂಗಳೂರು.(ಗ್ರಾ) | ದೊಡ್ಡಬಳ್ಳಾಪುರ | ಮಲ್ಲಸಂದ್ರ/ಹೊಸಹಳ್ಳಿ (1) | 25/01/2016 | 5 |
| 5 | ಬೀದರ್. | ಔರಾದ್. | ಚಿಂಟಕಿ.(2) | 7/02/2015. | 9 |
| 6 | ವಿಜಾಪುರ. | ಸಿಂದಗಿ. | ಕಡ್ಲೇವಾಡ. (2) | 14/03/2016 | 4 |
| 7 | ಚಾಮ ರಾಜನಗರ. | ಕೊಳ್ಳೇಗಾಲ. | ಧನಗೆರೆ.(1)<br>ಬಂಡಹಳ್ಳಿ (2) | 29/01/2016<br>29/01/2016 | 3<br>6 |
| 8 | ಚಿಕ್ಕಮಗಳೂರು. | ಮೂಡಿಗೆರೆ. | ಜೋಗಣ್ಣನ ಕೆರೆ.(3) | 17/02/2016 | 2 |
| 9 | ಚಿತ್ರದುರ್ಗ. | ಚಿತ್ರದುರ್ಗ. | ಬೆಳಘಟ್ಟ.(5) | 26/11/2015 | 8. |
| 10 | ದಾವಣಗೆರೆ. | ಜಗಳೂರು.<br>ಹರಪನಹಳ್ಳಿ. | ದೊಮ್ಮಹಳ್ಳಿ.(ಅಕನೂರು)(3)<br>ತಳವಾರ/ಗುಂಡಗಟ್ಟಿ.(2) | 26/11/2015<br>26/11/2015 | 6<br>7 |
| 11 | ಧಾರವಾಡ. | ಕುಂದಗೋಳ. | ಎರೆ ಬೂದಿಹಾಳ. (5) | 28/03/2016 | 6 |
| 12 | ದಕ್ಷಿಣ .ಕನ್ನಡ. | ಬೆಳ್ತಂಗಡಿ. | ಮಲವಂತಿಗೆ. (2) | 03/03/2016 | 6 |
| 13 | ಗದಗ. | ರೋಣ. | ಅಬ್ಬಿಗೆರೆ.(5) | 16/03/2016 | 7 |
| 14 | ಗುಲಬರ್ಗಾ. | ಜೇವರ್ಗಿ. | ನರಿಬೋಲ (2)<br>ಮಲ್ಲ. ಕೆ. (4) | 10/12/2015 | 30<br>9 |
| 15 | ಕೊಡಗು. | ಮಡಿಕೇರಿ. | ಮಾಥೆ.(1) | 04/03/2016 | 3 |
| 16 | ಕೋಲಾರ. | ಶ್ರೀನಿವಾಸಪುರ | ಅಡ್ಡಗಲ್ಲು/ಕುಂಟೋರಿ ಪಲ್ಲಿ (5) ಕರಿಪಲ್ಲಿ. (9) | 24/09/2015<br>31/10/2015 | 10<br>12 |
| 17 | ಕೊಪ್ಪಳ. | ಕೊಪ್ಪಳ. | ಬೆಟಗೇರಿ. (4)ನ | 25/02/2016 | 12 |
| 18 | ಹಾಸನ. | ಅರಸೀಕೆರೆ. | ಶಿಂಗನಹಳ್ಳಿ. (1)<br>ಹಿರೇಸಾದರಹಳ್ಳಿ. (1)<br>ಚಿಕ್ಕಕಲ್ಲೂರು. (1) | 19/02/2016<br>19/02/2016<br>19/02/2016 | 4<br>6<br>3 |

| | | | | | |
|---|---|---|---|---|---|
| 19 | ಹಾವೇರಿ. | ಹಿರೇಕೆರೂರು.<br>ಸವಣೂರು. | ನಾಗವಂದ. (1)<br>ಹೊಸನೇರಳಗಿ. (1) | 17/04/2016<br>17/04/2016 | 4<br>5 |
| 20 | ರಾಯಚೂರು. | ಮಾನ್ವಿ. | ಚಿಕ್ಕೋತನಹಳ್ಳಿ. (17)<br>ಮುಸ್ಟೂರು. (14)<br>ಅಟ್ಟನೂರು. (4) | 24/02/2016<br>24/02/2016<br>25/02/2016 | 10<br>15<br>10 |
| 21 | ಶಿವಮೊಗ್ಗ. | ಶಿಕಾರಿಪುರ. | ಅರಸಿನಗೇರಿ. (1)<br>ಗುಳದಹಳ್ಳಿ. (1) | 24/11/2015<br>24/11/2015 | 6<br>5 |
| 22 | ತುಮಕೂರು. | ಕೊರಟಗೆರೆ.<br>ಮಧುಗಿರಿ. | ಮಾರಗಾನಹಳ್ಳಿ. (1)<br>ನಿತ್ರಹಳ್ಳಿ. (1) | 21/01/2016<br>21/01/2016 | 6<br>6 |
| 23 | ಉತ್ತರ ಕನ್ನಡ. | ಭಟ್ಕಳ. | ಹಡ್ಲೂರ. (2) | 5/04/2016 | 5 |
| 24 | ಯಾದಗಿರಿ. | ಸುರಪುರ. | ತೀರ್ಥ. (2)<br>ಕರ್ನಾಲ್. (1) | 9/12/2015<br>9/12/2015 | 9<br>6 |
| | ಒಟ್ಟು. | 27 | 41(133) | | 40(294 ಸದಸ್ಯರು) |

**5.3 ಮಾಹಿತಿಯ ವಿಶ್ಲೇಷಣೆ.**

ಒಟ್ಟು ಮಾಹಿತಿಯನ್ನು ಸೂಕ್ತ ಅಂಕಿಅಂಶಗಳ, ಸಾಧನಗಳಿಂದ, ಆವರ್ತನ ಮತ್ತು ಶೇಕಡಾವರು ಕ್ರಮಗಳನ್ನು ಉಪಯೋಗಿಸಿ ಕೋಷ್ಟಕದ (ಟ್ಯಾಬ್ಯುಲರ್) ವಿಶ್ಲೇಷಣೆ ಮೂಲಕ ವಿಶ್ಲೇಷಣೆ ಮಾಡಲಾಗಿದೆ.

**5.4 ಅಧ್ಯಯನದ ಮಿತಿಗಳು.**

ಕ್ಷೇತ್ರ ಸಿಬ್ಬಂದಿಯವರ ಬೆಂಬಲದೊಂದಿಗೆ ಮತ್ತು ಸಹಕಾರದೊಂದಿಗೆ ಒಟ್ಟಾರೆ ಕ್ಷೇತ್ರ ಭೇಟಿ ಕಾರ್ಯಕ್ರಮಗಳು ಸರಳವಾಗಿ ಸುಲಲಿತವಾಗಿ ನಡೆದವು. ಆದರೂ ಕೆಲವು ಜಿಲ್ಲೆಗಳ ಮಾಹಿತಿ ನಿರೀಕ್ಷಿಸಿದ ಸಮಯಕ್ಕೆ ದೊರೆಯಲಿಲ್ಲ. (ಉದಾ: ರಾಯಚೂರು, ಬೆಂಗಳೂರು, ಕೋಲಾರ) ಕೆಲವು ಸಂದರ್ಭಗಳಲ್ಲಿ ಫಲಾನುಭವಿಗಳು ತಮಗೆ ಭೂಮಿ ಹಂಚಿಕೆ ಮಾಡಿದ ಗ್ರಾಮಗಳಲ್ಲಿ ವಾಸವಿರದೇ ಬೇರೆ ಹಳ್ಳಿಗಳಲ್ಲಿ ವಾಸವಿರುವುದು ಕಂಡುಬಂತು. ಮತ್ತೂ ಕೆಲವರು ವೇತನ ಗಳಿಸುವ ಕೆಲಸಗಳಿಗೆ ಬೇರೆ ಗ್ರಾಮಗಳಿಗೇ ಅಲ್ಲದೇ ಪಕ್ಕದ ರಾಜ್ಯಗಳಿಗೂ ಹೋಗಿರುತ್ತಾರೆ. ಅಂತಹ ಸಂದರ್ಭಗಳಲ್ಲಿ ಫಲಾನುಭವಿಗಳ ಭೇಟಿಗಾಗಿ ಹೋದ ಕ್ಷೇತ್ರ ಸಿಬ್ಬಂದಿ ಸುಮ್ಮನೆ ಹಿಂದಿರುಗಬೇಕಾಯಿತು. ಆದರೂ ಸಹಾ ಅಂತಹ ಫಲಾನುಭವಿಗಳ ಸಂಬಂಧೀಕರಿಂದ, ಅಕ್ಕ ಪಕ್ಕದವರಿಂದ ಅಲ್ಪ ಸ್ವಲ್ಪ ಮಾಹಿತಿಯನ್ನು ಕಲೆಹಾಕಲು ಸಾಧ್ಯವಾಯಿತು.

**ಅಧ್ಯಾಯ-6.**

# 6. ಅಧ್ಯಯನದಿಂದ ಕಂಡುಬಂದಿದ್ದು.

ಅಧ್ಯಯನವು ಎರಡು ಪರಿಸ್ಥಿತಿಗಳಲ್ಲಿ, ಅಂದರೆ ಭೂಮಿ ಹಂಚಿಕೆ ಯೋಜನೆಯ ಪೂರ್ವದಲ್ಲಿ ಮತ್ತು ಆ ನಂತರ ನಿವ್ವಳ ಮೇಲಾದಾಯ ಸಹಿತ ಸಾಮಾಜಿಕ ಮತ್ತು ಆರ್ಥಿಕ ಸ್ಥಾನ ಮಾನಗಳು ಮತ್ತು ಭೂ ಒಡೆತನದ ಬಳಿಕ ದೊರೆತ ಸೌಲಭ್ಯಗಳನ್ನು ವಿಶ್ಲೇಷಣೆ ಮಾಡಲು ಪ್ರಯತ್ನಿಸಿದೆ. ಈ ಅಧ್ಯಯನವನ್ನು ರಾಜ್ಯದ 24 ಜಿಲ್ಲೆಗಳ 27 ತಾಲೂಕುಗಳ 41 ಗ್ರಾಮಗಳಲ್ಲಿ ಆಯ್ಕೆ ಮಾಡಿದ ಒಟ್ಟು 133 ಮಾದರಿ ಫಲಾನುಭವಿಗಳಿಗೆ ಅನ್ವಯಿಸುವಂತೆ ಮಾಡಲಾಗಿದೆ. ರಾಯಚೂರು ಜಿಲ್ಲೆಯಲ್ಲಿ ಗರಿಷ್ಟ 35 ಫಲಾನುಭವಿಗಳು, ಚಿಕ್ಕಬಳ್ಳಾಪುರ 16, ಕೋಲಾರ 14, ಕ್ರಮವಾಗಿ ಶೇ. 25, 12, ಮತ್ತು 10 ಪ್ರಮಾಣದಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿದೆ. ಆರು ಜಿಲ್ಲೆಗಳಾದ ದಾವಣಗೆರೆ, ಧಾರವಾಡ, ಚಿತ್ರದುರ್ಗ ಬೆಳಗಾವಿ, ಬಾಗಲಕೋಟೆ, ಗದಗ ಜಿಲ್ಲೆಗಳಲ್ಲಿ ತಲಾ 5 ರಂತೆ, ಹಾಗೂ ಯಾದಗೀರ, ಬೀದರ, ಚಾಮರಾಜನಗರ, ಚಿಕ್ಕಮಗಳೂರು, ದಕ್ಷಿಣ ಕನ್ನಡ, ಹಾಸನ, ಹಾವೇರಿ ಶಿವಮೊಗ್ಗ ಮತ್ತು ತುಮಕೂರು ಜಿಲ್ಲೆಗಳಲ್ಲಿ 2 ರಿಂದ 3 ಫಲಾನುಭವಿಗಳು ಮತ್ತು ಕೊಡಗು, ಬೆಂಗಳೂರು ಜಿಲ್ಲೆಗಳಿಂದ ಒಬ್ಬೊಬ್ಬ ಫಲಾನುಭವಿಯನ್ನು ಅಧ್ಯಯನಕ್ಕೆ ಒಳಪಡಿಸಲಾಗಿತ್ತು.

### 6.1. ಭೂಮಿ ಮತ್ತು ಭೂಮಿ ಮಾರಾಟಗಾರರನ್ನು ಗುರುತಿಸುವುದು.

ಯೋಜನೆಯ ಪ್ರಕಾರ ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ಕಾರ್ಪೋರೇಶನ್ ನಿಯಮಿತವು (KMVSTDC) ಖರೀದಿಗಾಗಿ ಜಮೀನುಗಳನ್ನು ಗುರುತಿಸಬೇಕಾಗಿತ್ತು. ಜಮೀನಿನ ಮಾರಾಟಗಾರರು ಪ.ಜಾ/ಪ.ಪಂ ಗಳಿಗೆ ಸೇರಿರಬಾರದು, ಮತ್ತು ಭೂಮಿಯು ಆ ಹಳ್ಳಿಯಿಂದ ಸುತ್ತ 5 ಕಿಲೋ ಮೀಟರುಗಳೊಳಗೆ ಇರಬೇಕಾಗಿತ್ತು. ಮತ್ತು ಭೂಮಿಯು ಎಲ್ಲ ತರಹದ ಋಣಬಾಧೆಗಳಿಂದ ಮುಕ್ತವಾಗಿದೆಯೆಂದು ಭೂಮಿ ಮಾರಾಟಗಾರನು ಖಾತ್ರಿ ಪಡಿಸಬೇಕಿತ್ತು. ಈ ಅಗತ್ಯಗಳನ್ನು/ಷರತ್ತುಗಳನ್ನು ಎಲ್ಲ ಪ್ರಕರಣಗಳಲ್ಲಿಯೂ ಅನುಸರಿಸಲಾಗಿತ್ತು.

ಎಲ್ಲ 965 ಫಲಾನುಭವಿಗಳ ಪೈಕಿ 73% ಭೂಮಿಯನ್ನು ಗ್ರಾಮಪಂಚಾಯತಿ ಹಾಗೂ KMVSTDC ಜಂಟಿಯಾಗಿ ಗುರುತಿಸಿದ್ದರು, 7% ಮಾರಾಟಗಾರರಿಂದಲೇ ಗುರುತಿಸಲಾಗಿತ್ತು. ಗ್ರಾಮ ಪಂಚಾಯತಿಗಳು ಸ್ವತಂತ್ರವಾಗಿ ಮತ್ತು ಫಲಾನುಭವಿಗಳು 1% ಭೂಮಿಯನ್ನು ಗುರುತಿಸಿದ್ದರು. ಸಮಾಜದ ಗುಂಪುಗಳಿಂದ 18% ನಷ್ಟು ಭೂಮಿ ಗುರುತಿಸಲಾಗಿತ್ತು. ಈ ಖರೀದಿ/ಮಾರಾಟ ವ್ಯವಹಾರದಲ್ಲಿ ಎಲ್ಲಿಯೂ ಮಧ್ಯವರ್ತಿಗಳು ಮಧ್ಯ ಪ್ರವೇಶಿಸಿರುವುದಿಲ್ಲ ಅಥವಾ ಯಾರಿಗೂ ಫಲಾನುಭವಿಗಳು ಕಮೀಶನ್(ದಲ್ಲಾಳಿ) ಪಾವತಿಸಿರುವುದು ಕಂಡು ಬಂದಿಲ್ಲ. ವಿವರಗಳಿಗೆ ಈ ಕೆಳಗಿನ ಕೋಷ್ಟಕವನ್ನು ನೋಡಬಹುದು.

**ಕೋಷ್ಟಕ–4: ಭೂಮಿಯನ್ನು ಗುರುತಿಸಿದವರು.**

| ಕ್ರ.ಸಂ. | ಜಮೀನು ಗುರುತಿಸಿದವರು. | ಫಲಾನುಭವಿಗಳ ಗುಂಪು.(ಮಾದರಿ) | | ಒಟ್ಟು ಫಲಾನುಭವಿಗಳು. | |
|---|---|---|---|---|---|
| | | ಸಂಖ್ಯೆ. | ಶೇಕಡಾವಾರು. | ಸಂಖ್ಯೆ. | ಶೇಕಡಾವಾರು. |
| 1. | ಗಾಮ ಪಂಚಾಯತಿ + ಎಸ್.ಟಿ.ಸಿ. | 53 | 40 | 709 | 73 |
| 2 | ಗ್ರಾಮ ಪಂಚಾಯತ್. | 02 | 01 | 09. | 01 |
| 3 | ಸ್ವತಃ ಫಲಾನುಭವಿಗಳು. | 01 | 01 | 09 | 01 |
| 4 | ಭೂ ಮಾರಾಟಗಾರರು. | 11 | 08 | 72 | 07 |
| 5 | ಇತರೆ.ಸಮಾಜದ ಸದಸ್ಯರು. | 66 | 50 | 166 | 18 |
| ಒಟ್ಟು | | 133 | 100 | 965 | 100 |

**6.2 ಭೂ ಮಾರಾಟಗಾರರ ಆರ್ಥಿಕ ಸ್ಥಾನ.**

ಯೋಜನೆಯ ಮಾರ್ಗ ಸೂಚಿಯು ಯಾವುದೇ ಪರಿಶಿಷ್ಟ ಪಂಗಡದ ಕುಟುಂಬಕ್ಕೆ ಸೇರಿದ ಜಮೀನನ್ನು ಖರಿದಿಸಬಾರದೆಂದು ನಿರ್ಬಂಧಿಸುತ್ತದೆ. ಕಾರಣ ಅದು ಯೋಜನೆಯ ಮೂಲ ಉದ್ದೇಶವನ್ನೇ ಹಾಳುಮಾಡಿಬಿಡುತ್ತದೆ. ನಿಗಮವು ಈ ಷರತ್ತನ್ನು ಕಟ್ಟುನಿಟ್ಟಾಗಿ ಪಾಲಿಸಿದ್ದು ಪ.ಜಾ/ಪ.ಪಂ ಹೊರತು ಪಡಿಸಿದ ಇತರರಿಗೆ ಸೇರಿದ ಜಮೀನುಗಳನ್ನೇ ಖರೀದಿಸಿರುವುದು ಕಂಡುಬರುತ್ತದೆ. ಈ ಮೌಲ್ಯಮಾಪನದ ಭಾಗವಾಗಿ ಜಮೀನುಗಳನ್ನು ನೀಡಲು ಮುಂದೆ ಬಂದವರ ಸಾಮಾಜಿಕ ಆರ್ಥಿಕ ಸ್ಥಾನ ಮಾನಗಳನ್ನು ಅಧ್ಯಯನ ಮಾಡಲಾಯಿತು. ಮತ್ತು ಭೂಮಿ ಮಾರಾಟಗಾರರು ಯಾರಾದರೂ ಪ.ಜಾ/ಪ.ಪಂ ಗಳಿಗೆ ಸೇರಿದ್ದಾರೆಯೇ ಎಂದು ಸಹಾ ಅಧ್ಯಯನ ಮಾಡಲಾಯಿತು, ಕಾರಣ ಆ ಜನಾಂಗದವರಿಂದ ಖರೀದಿಸುವುದನ್ನು ನಿರ್ಬಂದಿಸಲಾಗಿತ್ತು. ಈ ಕೆಳಗಿನ ಕೋಷ್ಟಕವು ಮಾರಾಟಗಾರರ ಒಟ್ಟಾರೆ ಸಾಮಾಜಿಕ ಆರ್ಥಿಕ ಚಿತ್ರಣವನ್ನು ತೋರಿಸುತ್ತದೆ.

**ಕೋಷ್ಟಕ–5. ಜಮೀನು ಮಾರಾಟಗಾರರ ಹೊರ ಚಿತ್ರಣ.**

| ಸಾಮಾಜಿಕ ಸ್ಥಾನಮಾನ/ಜನಾಂಗ. | ಜಮೀನಿನ ಒಡೆತನದ ವರ್ಗೀಕರಣ. | ಆರ್ಥಿಕ ಸ್ಥಾನ ಮಾನ. | ವಾಸ ಸ್ಥಾನ. | ಒಟ್ಟು ಸಂಖ್ಯೆಗೆ ಶೇಕಡಾವಾರು. |
|---|---|---|---|---|
| ಒಕ್ಕಲಿಗರು / ಗೌಡರು. | ದೊಡ್ಡ ಜಮೀನುದಾರರು. | ಅನುಕೂಲಸ್ಥರು ಮತ್ತು ಶ್ರೀಮಂತರು. | ಸ್ಥಳೀಯ. | 50% |
| ಲಿಂಗಾಯತರು. | ದೊಡ್ಡ ಜಮೀನುದಾರರು. | ಅನುಕೂಲಸ್ಥರು. ಮತ್ತು ಶ್ರೀಮಂತರು | ಸ್ಥಳೀಯ. | 25% |
| ಇತರ ಹಿಂದುಳಿದವರು. (ಓಬಿಸಿ) | ಮಧ್ಯಮ ದರ್ಜೆ ಜಮೀನುದಾರರು. | ಅನುಕೂಲಸ್ಥರು. | ಸ್ಥಳೀಯ. | 10% |
| ಅಲ್ಪ ಸಂಖ್ಯಾತರು. | ಮಧ್ಯಮ ದರ್ಜೆ ಜಮೀನುದಾರರು. | ಅನುಕೂಲಸ್ಥರು. | ಸ್ಥಳೀಯ. | 05% |
| ಇತರರು (ಅನಿವಾಸಿ) ಸ್ಥಳದಲ್ಲಿಲ್ಲದ ಎಲ್ಲ ವರ್ಗದ ಭೂ ಮಾಲೀಕರು. | | ಲಭ್ಯವಿಲ್ಲ. | ನಗರ ಪ್ರದೇಶಗಳಿಗೆ ವಲಸೆ ಹೋಗಿರುವವರು. | 10% |

ಈ ರೀತಿ ಯೋಜನೆಯ ಮಾರ್ಗಸೂಚಿಗಳನ್ನು ಪಾಲಿಸಿದ್ದು ಪ.ಜಾ/ಪ.ಪಂ ಗಳಿಗೆ ಸೇರಿದವರ ಜಮೀನುಗಳನ್ನು ನಿಗಮವು ಖರೀದಿಸಿರುವುದಿಲ್ಲ.

**6.3. ಜಮೀನಿಗೆ ತಲುಪುವುದು, ಸೂಕ್ತತೆ, ಮತ್ತು ಮಣ್ಣಿನ ಗುಣ.**

ಗುರುತಿಸಿದ ಭೂಮಿಯು, ಫಲಾನುಭವಿಗಳು ವಾಸಿಸುವ ಸ್ಥಳದಿಂದ ತುಂಬಾ ದೂರದಲ್ಲಿರಬಾರದೆಂದು ಯೋಜನೆಯ ಮಾರ್ಗಸೂಚಿಯಲ್ಲಿ ತಿಳಿಸಲಾಗಿದೆ. ಹಂಚಿಕೆಯಾದ ಭೂಮಿಯು ಫಲಾನುಭವಿಗಳ ವಾಸ ಸ್ಥಳದಿಂದ 1 ಕಿ.ಮೀ ಗಿಂತ ಕಡಿಮೆಯಿಂದ 5 ಕಿ.ಮೀ ಗಳಿಗೂ ಮೀರಿದ ದೂರವಿರುವುದು ಕಂಡು ಬಂದಿತು. ಹೆಚ್ಚಿನ ಅಂದರೆ 65% ಫಲಾನುಭವಿಗಳ ಜಮೀನುಗಳು ಅವರ ವಾಸಸ್ಥಳದಿಂದ 2 ರಿಂದ 5 ಕಿ.ಮೀ ಅಂತರದಲ್ಲಿರುವುದು ಕಂಡು ಬಂತು. ಶೇ. 13 ರಷ್ಟು ಫಲಾನುಭವಿಗಳಿಗೆ 1 ಕಿಲೋಮೀಟರಿನೊಳಗೆ, ಶೆ. 8 ಫಲಾನುಭವಿಗಳಿಗೆ 1 ರಿಂದ 2 ಕಿ.ಮೀ. ಉಳಿದ 14% ಫಲಾನುಭವಿಗಳಿಗೆ ತಮ್ಮ ಜಮೀನುಗಳನ್ನು ತಲುಪಲು 5 ಕಿ.ಮೀ ಗಿಂತಲೂ ಹೆಚ್ಚು ದೂರ ಹೋಗಬೇಕಾಗಿತ್ತು. ಇದು ಮುಖ್ಯವಾಗಿ ಗದಗ, ಕೋಲಾರ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಕಂಡುಬಂದಿದೆ. ಹಾಗಾದರೂ ಫಲಾನುಭವಿಗಳಿಂದ ಆ ಬಗ್ಗೆ ಯಾರೂ ದೂರು ಕೊಡಲಿಲ್ಲ. ಇದರಿಂದ ಅವರ ಕೃಷಿ ಚಟುವಟಿಕೆಗೆ ಏನೂ ತೊಂದರೆ ಆಗಿರುವುದಿಲ್ಲ ಅಥವಾ ಈ ಕಾರಣದಿಂದ ಕೃಷಿ ಚಟುವಟಿಕೆ ಕಡೆಗಾಣಿಸಲ್ಪಡಲಿಲ್ಲ.

**ಕೋಷ್ಟಕ–6. ಜಮೀನಿಗೆ ತಲುಪಲು ಮತ್ತು ಕೃಷಿಗೆ ಜಮೀನಿನ ಸೂಕ್ತತೆ.**

| ಕ್ರ.ಸಂ. | ಮಾದರಿ ಗಾತ್ರ. | ಕೃಷಿಗೆ ಸೂಕ್ತ. (%) | | ಒಟ್ಟು. (%) | ತಲುಪುವುದು. ಮನೆಯಿಂದ ಜಮೀನಿಗೆ ಇರುವ ದೂರ. | | | | | | | |
|---|---|---|---|---|---|---|---|---|---|---|---|---|
| | | ಹೌದು | ಇಲ್ಲ | | <1 ಕಿ.ಮೀ. | | 1–2 ಕಿ.ಮೀ | | 2–5 ಕಿ.ಮೀ | | >5 ಕಿ.ಮೀ. | |
| | | | | | ಸಂ. | % | ಸಂ | % | ಸಂ | % | ಸಂ | % |
| 1 | 133 | 96 | 04 | 100 | 17 | 13 | 10 | 8 | 87 | 65 | 19 | 14 |

ಹಂಚಿಕೆಯಾದ ಜಮೀನಿನ ಸೂಕ್ತತೆ ಬಗ್ಗೆ 96 ಫಲಾನುಭವಿಗಳು ಜಮೀನು ಕೃಷಿಗೆ ಯೋಗ್ಯವಾಗಿದೆಯೆಂದು ತಿಳಿಸಿದರು. ಕೇವಲ 4 ಪ್ರತಿಶತ ಭೂಮಿಗಳು ಬೆಳಗಾವಿ ಜಿಲ್ಲೆಯ ಗೋಕಾಕ ಮತ್ತು ಕೊಪ್ಪಳ ಜಿಲ್ಲೆಯ ಕೊಪ್ಪಳ ತಾಲೂಕಿನಲ್ಲಿ ತೃಪ್ತಿಕರವಾಗಿಲ್ಲ. ಅಂದರೆ – ಕಡಿಮೆ ಫಲವತ್ತತೆ, ತೇವಾಂಶ ಹಿಡಿದಿಟ್ಟುಕೊಳ್ಳುವಲ್ಲಿ ಅತೃಪ್ತಿಕರ ಗುಣಗಳಿಂದ ನಿರೀಕ್ಷಿಸಿದ ಬೆಳೆ ಬರುತ್ತಿಲ್ಲವೆಂದು ದೂರುಗಳು ಬಂದವು. ಈ ಭೂಮಿಗಳನ್ನು ಅಭಿವೃದ್ಧಿ ಪಡಿಸುವುದು ಅಗತ್ಯವಾಗಿದ್ದು ಉತ್ಪಾದನೆ ಹೆಚ್ಚಿಸಬೇಕಾಗಿರುತ್ತದೆ.

**6.4. ಫಲಾನುಭವಿಗಳನ್ನು ಗುರುತಿಸುವುದು.**

ಫಲಾನುಭವಿಗಳನ್ನು ಸ್ಥಳೀಯ ಗ್ರಾಮ ಪಂಚಾಯತಿ, ಜನರ ಪ್ರತಿನಿಧಿಗಳು, ಮತ್ತು ಕೆಎಂವಿಎಸ್‌ಟಿಡಿಸಿ ಯವರು ಆರಿಸುತ್ತಾರೆ. ಕೆಲವು ಸಂದರ್ಭಗಳಲ್ಲಿ ಫಲಾನುಭವಿಗಳೇ ನೇರವಾಗಿ ಭೂಮಿ ಖರೀದಿಗೆ ನಿಗಮವನ್ನು ಸಂಪರ್ಕಿಸಿದಾಗ ನಿಗಮವು ಭೂಮಿ ಮಾರಾಟಗಾರನ ಒಪ್ಪಿಗೆ ಪತ್ರ ತರಲು ಫಲಾನುಭವಿಗೆ ತಿಳಿಸಿರುತ್ತದೆ.

ಇಂತಹ ವಿಧಾನವು ಪಂಚಾಯತಿ ಮಟ್ಟದಲ್ಲಿ ಪಾರದರ್ಶಕವಾಗಿರುವುದು ಕಂಡುಬಂದಿದೆ. ಫಲಾನುಭವಿಗಳ ಅರ್ಹತೆಯನ್ನು ಅಳೆಯಲು ಈ ವಿಧಾನವನ್ನು ಇತರ ಎಲ್ಲ ಜಿಲ್ಲೆಗಳಲ್ಲೂ ಅನುಸರಿಸಲಾಗಿದೆ.

**6.5. ಗ್ರಾಮ ಪಂಚಾಯತಿಗಳ ಪಾತ್ರ.**

ಫಲಾನುಭವಿಗಳನ್ನು ಗ್ರಾಮ ಪಂಚಾಯತಿಗಳು ಗುರುತಿಸಿದರೆಂದು ವರದಿಯಾಗಿದೆ. ಒಮ್ಮೆ ಫಲಾನುಭವಿಗಳನ್ನು ಪಂಚಾಯತಿಯು ಗುರುತಿಸಿದ ಬಳಿಕ ವಿಷಯವನ್ನು ಸಮಿತಿಯ ಮುಂದೆ ಮಂಡಿಸಿ ನಿರ್ಣಯವನ್ನು ಅಂಗೀಕರಿಸಿದ ಬಳಿಕ ಪ್ರಸ್ತಾವನೆಯನ್ನು ಪರಿಗಣಿಸಲು ನಿಗಮಕ್ಕೆ ಕಳುಹಿಸಲಾಗುವುದು. ನಿಗಮವು ಅದನ್ನು ಪರಿಗಣಿಸಿರುವುದು ಕಂಡು ಬಂದಿದೆ. ಆದರೂ ಸಹಾ ಅಂತಹ ನಿರ್ಣಯಗಳನ್ನು ಪಂಚಾಯತಿ ರಿಜಿಸ್ಟರ್‌ಗಳಲ್ಲಿ ಎಲ್ಲ ಫಲಾನುಭವಿಗಳ ವಿಚಾರದಲ್ಲಿ ಬರೆದಿರುವುದಿಲ್ಲ.

**6.6. ಜನ ಪ್ರತಿನಿಧಿಗಳ ಪಾತ್ರ.**

ಜನ ಪ್ರತಿನಿಧಿಗಳಿಗೆ ಫಲಾನುಭವಿಗಳ ಆಯ್ಕೆಯಲ್ಲಿ ಯೋಜನೆಯು ಯಾವುದೇ ನಿರ್ದಿಷ್ಟ ಪಾತ್ರವನ್ನು ನಿಗದಿ ಪಡಿಸಿಲ್ಲವಾದರೂ, ಭೂಮಿಯ ಹಂಚಿಕೆ ಬಗ್ಗೆ ಅವರ ಶಿಫಾರಸ್ಸುಗಳನ್ನು ಗ್ರಾಮ ಪಂಚಾಯತಿಯವರು/ನಿಗಮದವರು ಒಪ್ಪಿಕೊಳ್ಳುತ್ತಾರೆ.

**6.7 ನಿಯಮಗಳು ಮತ್ತು ಕಾರ್ಯ ವಿಧಾನಗಳು.**

**ಅರ್ಹತೆ ಮಾನದಂಡಗಳು.**

ಫಲಾನುಭವಿಗಳಿಗೆ ಭೂಮಿ ಹಂಚಿಕೆ ಮಾಡಲು ಈ ಕೆಳಗಿನ ಅರ್ಹತೆಗಳಿರಬೇಕೆಂದು ಯೋಜನೆಯಲ್ಲಿ ನಿರೂಪಿಸಲಾಗಿದೆ.

1) ಭವಿಷ್ಯದ ಫಲಾನುಭವಿಯು ಪರಿಶಿಷ್ಟ ಪಂಗಡದ ಜನಾಂಗಕ್ಕೆ ಸೇರಿದವರಾಗಿರಬೇಕು.
2) ಆಕೆಯು ಅಗತ್ಯವಾಗಿ ಕೃಷಿ ಕೂಲಿ ಕಾರ್ಮಿಕಳಾಗಿರಬೇಕು.
3) ಆಕೆ ಅಥವಾ ಆಕೆಯ ಗಂಡ ರಾಜ್ಯದಲ್ಲಿ ಎಲ್ಲಿಯೇ ಆಗಿರಲಿ ಕೃಷಿ ಯೋಗ್ಯ ಭೂಮಿಯನ್ನು ಹೊಂದಿರಬಾರದು / ಭೂಮಿಯ ಮಾಲೀಕರಾಗಿರಬಾರದು.

ಅಧ್ಯಯನ ಮತ್ತು ನಿಗಮದ ಅಧಿಕಾರಿಗಳೊಡನೆ ಪರಸ್ಪರ ಪ್ರತಿಕ್ರಿಯೆ ನಡೆಸಿದಾಗ ಎಲ್ಲ ಪ್ರಕರಣಗಳಲ್ಲಿ ಈ ಎಲ್ಲ ಷರತ್ತುಗಳನ್ನು ಪಾಲಿಸಿರುವುದು ಕಂಡುಬಂದಿದೆ ಹಾಗೂ ಸರಿಯಾದ ದಾಖಲೆಗಳನ್ನು ನಿಗಮವು ಬರೆದಿಟ್ಟಿದೆ.

ಸೂಕ್ಷ್ಮ ತಪಾಸಣೆ ಮತ್ತು ಪರಿಶೀಲನೆ. ಯೋಜನೆಯಲ್ಲಿ ಮಾರ್ಗಸೂಚಿಯಲ್ಲಿ ನಿರೂಪಿಸಿದ ಕೆಲವು ಸಹಜ ಕ್ರಿಯೆ ಮತ್ತು ಕಾರ್ಯವಿಧಾನಗಳನ್ನು ನಿಗಮವು ಅನುಸರಿಸಬೇಕಾಗಿರುತ್ತದೆ.

1. ಖರೀದಿಗೆ ಕೊಡಲೊಪ್ಪಿದ ಜಮೀನು ಎಲ್ಲ ಬಗೆಯ ಋಣಬಾಧೆಗಳಿಂದ ಮುಕ್ತವಾಗಿರುವುದನ್ನು ಮತ್ತು ಕಾಗದ ಪತ್ರಗಳು ಸ್ಪಷ್ಟವಾಗಿದ್ದು ಕಾನೂನು ಬದ್ದವಾಗಿ ಸರಿಯಾಗಿರುವುದನ್ನು ಖಾತ್ರಿ ಪಡಿಸಬೇಕು.
2. ಜಮೀನಿಗೆ ತಲುಪಲು ಸುಲಭವಾಗಿರಬೇಕು ಮತ್ತು ಕೃಷಿಯೋಗ್ಯವಾಗಿರಬೇಕು.
3. ಮಾರಾಟಗಾರನು ಪ.ಜಾ/ಪ.ಪಂ ಸಮಾಜಕ್ಕೆ ಸೇರಿರಬಾರದು.
4. ಮಾರಾಟಕ್ಕೆ ಕೊಡಲೊಪ್ಪಿದ ಭೂಮಿಯ ಮೇಲೆ ಯಾವುದೇ ತಂಟೆ–ತಕರಾರುಗಳಿರಬಾರದು,
5. ಭೂಮಿಯನ್ನು ಯಾವದೇ ಹಣಕಾಸು ಸಂಸ್ಥೆಗೆ ಆಧಾರ ಮಾಡಿರಬಾರದು.

ಅಧ್ಯಯನ ನಡೆಸಿದ ಎಲ್ಲ ಪ್ರಕರಣಗಳಲ್ಲಿ ಈ ಮೇಲಿನ ಎಲ್ಲ ಷರತ್ತುಗಳನ್ನು ಅನುಸರಿಸಿರುವುದು ಕಂಡುಬಂದಿದೆ.

**ಕಾರ್ಯವಿಧಾನಗಳು.**

ಭೂಮಿ ಖರೀದಿ ಮತ್ತು ಹಂಚಿಕೆ ಯೋಜನೆಯು, ನಿಗಮದಿಂದ ಕೆಲವು ಕಾರ್ಯ ವಿಧಾನಗಳನ್ನು ಅನುಸರಿಸುವ ಷರತ್ತು ವಿಧಿಸಿರುತ್ತದೆ. ಅವು :

1) ಫಲಾನುಭವಿಗಳ ಜಾತಿ ತಿಳಿದುಕೊಳ್ಳುವುದು, ಮತ್ತು ಸಮರ್ಥ ಅಧಿಕಾರಿಯಿಂದ ಈ ಬಗ್ಗೆ ಒಂದು ಜಾತಿ ಪ್ರಮಾಣ ಪತ್ರ ಪಡೆದುಕೊಳ್ಳುವುದು. ಇದನ್ನು ಮಾರಾಟಗಾರ ಹಾಗೂ ಖರೀದಿದಾರರಿಬ್ಬರ ವಿಷಯದಲ್ಲೂ ಮಾಡಬೇಕಾಗಿರುತ್ತದೆ.
2) ಮಾರಾಟಕ್ಕೆ ನೀಡಿದ ಜಮೀನನ್ನು ಖರೀದಿದಾರ ಭೌತಿಕವಾಗಿ/ವಾಸ್ತವವಾಗಿ ಪರಿಶೀಲಿಸುವುದು.
3) ಸಂಬಂಧಿಸಿದ ಕಾಗದ ಪತ್ರಗಳನ್ನು ಪರಿಶೀಲಿಸುವುದು.
4) ಫಲಾನುಭವಿಗಳ ಪರವಾಗಿ ಪಂಚಾಯತಿ ತೆಗೆದುಕೊಂಡ ನಿರ್ಣಯವನ್ನು ಪರಿಶೀಲಿಸುವುದು.
5) ಬ್ಯಾಂಕಿನಿಂದ ಬೇಬಾಕಿ ಪ್ರಮಾಣಪತ್ರ ಪಡೆದುಕೊಳ್ಳುವುದು.
6) ಕಳೆದ 13 ವರ್ಷಗಳ ಋಣಬಾರ ಪತ್ರ.
7) ವಕೀಲರಿಂದ ಕಾನೂನು ಅಭಿಪ್ರಾಯ ಪಡೆದುಕೊಳ್ಳುವುದು.
8) ಭೂಮಿಯ ನಕ್ಷೆಯನ್ನು ತಯಾರಿಸಿ ನಿಗಮದಿಂದ ಜಮೀನಿನ ಪರಿಶೀಲನೆಯ ವೀಡಿಯೋ ರೆಕಾರ್ಡ ಮಾಡುವುದು.
9) ಭೂಮಿ ತರಹೆ ಮತ್ತು ಜಮೀನಿಗೆ ನೀರಿನ ಸೌಲಭ್ಯವೇನಾದರೂ ಇದ್ದರೆ ಅವುಗಳ ಬಗ್ಗೆ ಕೃಷಿ ಮತ್ತು ನೀರಾವರಿ ಇಲಾಖೆಗಳಿಂದ ಧೃಢೀಕರಣ.
10) ತಹಸೀಲ್ದಾರ್/ಅಸಿಸ್ಟಂಟ್ ಕಮೀಶನರ್ ಅವರಿಂದ ಫಾರಂ–1 ರಲ್ಲಿ ಧೃಢೀಕರಣ ಪತ್ರ ಮತ್ತು ತಾಲೂಕು ಆಭಿವೃದ್ಧಿ ಅಧಿಕಾರಿ/ ಜಿಲ್ಲಾ ವ್ಯವಸ್ಥಾಪಕರಿಂದ ಫಾರಂ–2 ರಲ್ಲಿ ಧೃಢೀಕರಣ ಪತ್ರಗಳು.

ನಿಗಮವು ಮೇಲಿನ ಎಲ್ಲ ಷರತ್ತುಗಳನ್ನು ಪೂರೈಸಿ ಪ್ರಸ್ಥಾವನೆಗಳನ್ನು ಕೇಂದ್ರ ಕಛೇರಿಗೆ ಅನುಮೋದನೆಗಾಗಿ ಕಳುಹಿಸಿಕೊಟ್ಟಿದೆ. ಅನುಮೋದನೆ ಬಂದ ಬಳಿಕ ಅವುಗಳನ್ನು ಅಂತಿಮ ಅನುಮೋದನೆಗಾಗಿ ಅಯಾ ಜಿಲ್ಲಾಧಿಕಾರಿಗಳು/ ಜಿಲ್ಲಾ ಡೆಪ್ಯೂಟಿ ಕಮೀಷನರ್ ಅವರಿಗೆ ಕಳುಹಿಸಲಾಗಿದೆ. ಈ ರೀತಿ ಭೂಮಿ ಖರೀದಿ ಮತ್ತು ಭೂಮಿ ಹಂಚಿಕೆ ಪ್ರಸ್ಥಾವನೆಯು ಈ ಕೆಳಗೆ ತಿಳಿಸಿದ ಮಾದರಿಯಲ್ಲಿ ವಿವಿಧ ಹಂತಗಳನ್ನು ದಾಟಿ ಹೋಗಿರುತ್ತದೆ.

**ಕೋಷ್ಟಕ–7 ಅನುಮೋದನೆಯ ಕಾರ್ಯವಿಧಾನ.**

| ಕಾರ್ಯವಿಧಾನ. | ಏಜೆನ್ಸಿ. | ಕಾರ್ಯ ಭಾರ. | ಕಾಲ. |
|---|---|---|---|
| ಕಾರ್ಯ–1 | ಫಲಾನುಭವಿ/ಗ್ರಾ.ಪಂ. ನಿಗಮ/ಸಾಮಾಜಿಕ ಗುಂಪು ಮತ್ತು ಅಕ್ಕ ಪಕ್ಕದವರು. | ಭೂಮಿಯನ್ನು ಗುರುತಿಸುವುದು. | ಸಂದರ್ಭಕ್ಕನುಸಾರವಾಗಿ ವ್ಯತ್ಯಾಸವಾಗುತ್ತದೆ. |
| ಕಾರ್ಯ–2 | ಗ್ರಾಮ ಪಂಚಾಯತಿ. | ಭೂ ಹಂಚಿಕೆಗೆ ನಿರ್ಣಯ ಅಂಗೀಕರಿಸುವುದು. | ಪ್ರಸ್ಥಾವನೆ ಬಂದ ತಕ್ಷಣ. |
| ಕಾರ್ಯ–3 | ಕ.ಮ.ವಾ.ಪ.ಪಂ.ಅ.ನಿ. ನಿಯಮಿತ–ಜಿಲ್ಲಾ ವ್ಯವಸ್ಥಾಪಕರು | ದಾಖಲೆಗಳನ್ನು ಸೂಕ್ಷ್ಮವಾಗಿ ಪರಿಶೀಲಿಸುವುದು, ಭೂಮಿಯನ್ನು ಭೌತಿಕವಾಗಿ ತಪಾಸಣೆ ಮಾಡಿ ಪ್ರಸ್ಥಾವನೆಯನ್ನು ಕೇಂದ್ರ ಕಛೇರಿಗೆ ಸಲ್ಲಿಸುವುದು. | |
| ಕಾರ್ಯ–4 | ಕ.ಮ.ವಾ.ಪ.ಪಂ.ಅ.ನಿ. ಮತ್ತು ಕೇಂದ್ರ ಕಛೇರಿ. | ಪ್ರಸ್ಥಾವನೆಗೆ ಅನುಮೋದನೆ ನೀಡುವುದು. | |
| ಕಾರ್ಯ–5 | ಕ.ಮ.ವಾ.ಪ.ಪಂ.ಅ.ನಿ. ಜಿಲ್ಲಾ ಉಸ್ತುವಾರಿ ಅಧಿಕಾರಿ. | ಪ್ರಸ್ಥಾವನೆಯನ್ನು ಜಿಲ್ಲಾಧಿಕಾರಿಗೆ ಸಲ್ಲಿಸುವುದು. | ಕೇಂದ್ರ ಕಛೇರಿಯಿಂದ ಒಪ್ಪಿಗೆ ಬಂದ ತಕ್ಷಣ. |
| ಕಾರ್ಯ–6 | ಜಿಲ್ಲಾಧಿಕಾರಿಗಳು. | ಪ್ರಸ್ಥಾವನೆಯನ್ನು ಅನುಮೋದಿಸುವುದು. | |
| ಕಾರ್ಯ–7 | ಕ.ಮ.ವಾ.ಪ.ಪಂ.ಅ.ನಿ. | ಭೂಮಿಯ ನೋಂದಣಿ, ದಾಖಲೆಗಳನ್ನು ಪೂರ್ಣಗೊಳಿಸುವುದು, ಮತ್ತು ಭೌತಿಕವಾಗಿ ಹಸ್ತಾಂತರಿಸುವುದು. | ಜಿಲ್ಲಾಧಿಕಾರಿಗಳಿಂದ ಅನುಮೋದನೆ ಬಂದ ತಕ್ಷಣ. |

ಕ್ಷೇತ್ರದಲ್ಲಿ ಅಧ್ಯಯನ ಮಾಡಿದ ಅನುಭವವೇನೆಂದರೆ, ಈ ಮೇಲಿನ ಪ್ರತಿಯೊಂದೂ ಹಂತದಲ್ಲಿ ಸಾಕಷ್ಟು ಸಮಯ ತೆಗೆದುಕೊಂಡದ್ದು, ಕೆಲವು ಸಲ ಸರಾಸರಿ 2 ವರ್ಷಗಳಿಗೂ ಹೆಚ್ಚು ಸಮಯ ತೆಗೆದುಕೊಂಡಿದ್ದು ಕಂಡುಬಂದಿದೆ.

**<u>ನೋಂದಣಿ ಮತ್ತು ಭೌತಿಕವಾಗಿ ಹಸ್ತಾಂತರಿಸುವುದು.</u>**

ಯೋಜನೆಯ ಮಾರ್ಗದರ್ಶನಗಳ ಪ್ರಕಾರ ಖರೀದಿ ಪತ್ರವನ್ನು ನೊಂದಾಯಿಸುವ ಮೊದಲು ಭೂಮಿಯನ್ನು ಹಸ್ತಾಂತರಿಸಲು ಸಿದ್ದವಾಗಿದೆ ಎಂದು ನಿಗಮವು ಖಾತ್ರಿ ಪಡಿಸಿಕೊಳ್ಳಬೇಕು. ಆ ರೀತಿ ಭೂಮಿಯನ್ನು ಹಸ್ತಾಂತರಿಸಿದ ಬಳಿಕವಷ್ಟೇ ಹಂಚಿಕೆಯ ಕಾರ್ಯ ಪೂರ್ಣಗೊಳ್ಳುವುದು. ಈ ಮಾರ್ಗದರ್ಶನಗಳನ್ನು ಕೋಲಾರ ಮತ್ತು ಬೆಂಗಳೂರಿನ 10 ಪ್ರಕರಣಗಳಲ್ಲಿ ಹೊರತು ಉಳಿದೆಲ್ಲ ಕಡೆ ಅನುಸರಿಸಲಾಗಿದೆ. ಈ ಜಿಲ್ಲೆಗಳಲ್ಲಿ ಒಂದಲ್ಲಾ ಒಂದು ಕಾರಣಕ್ಕೆ ಭೂಮಿ ಹಸ್ತಾಂತರವಾಗಿರುವುದಿಲ್ಲ. ಆದರೆ ಈ ಮಾರ್ಗದರ್ಶನದ ಪ್ರಕಾರ ಕಾರ್ಯಕ್ರಮ ಅನುಷ್ಠಾನಗೊಳಿಸಬೇಕೆಂದು ಸಂಬಂಧಿಸಿದ ಅಧಿಕಾರಿಗಳಿಗೇ ತಿಳಿದಿರಲಿಲ್ಲ ಅಥವಾ ಇಂತಹ ಲೋಪಗಳ ಬಗ್ಗೆಯೂ ತಿಳುವಳಿಕೆಯಿರಲಿಲ್ಲ.

**6.8 ಕಾಲ ಮಿತಿ.**

ಭೂಮಿಯನ್ನು ಗುರುತಿಸಿದ ಬಳಿಕ ಅದನ್ನು ಫಲಾನುಭವಿಗೆ ಎಲ್ಲ ಮಾರ್ಗ ದರ್ಶನಗಳನ್ನು ಅನುಸರಿಸಿ ಹಸ್ತಾಂತರಿಸುವಲ್ಲಿ 6 ತಿಂಗಳಿಂದ 36 ತಿಂಗಳ ಅವಧಿ ತೆಗೆದುಕೊಂಡಿರುವುದು ಕಂಡುಬಂದಿದೆ. ಈ ಕೆಳಗಿನ ಕೋಷ್ಟಕ

ದಲ್ಲಿ ಆಯ್ದ ಫಲಾನುಭವಿಗಳ ಸಂಬಂಧ ಕಾಲ ಮಿತಿಯ ವಿವರಗಳನ್ನು ನೋಡಬಹುದು. 103 ಫಲಾನುಭವಿಗಳು 1 ವರ್ಷದಲ್ಲಿ ಸೌಲಭ್ಯವನ್ನು ಪಡೆಕೊಂಡಿರುತ್ತಾರೆ. 5 ಮಂದಿ 1 ರಿಂದ 2 ವರ್ಷಗಳು 25 ಮಂದಿ ಫಲಾನುಭವಿಗಳು 2ರಿಂದ 3 ವರ್ಷಗಳ ಕಾಲ ನಿರೀಕ್ಷಿಸಬೇಕಾಯಿತು.

**ಕೋಷ್ಟಕ–8 ಕಾರ್ಯ ವಿಧಾನವನ್ನು ಪೂರ್ಣಗೊಳಿಸಲು ತೆಗೆದುಕೊಂಡ ಕಾಲ.**

| **ಕಾಲ (ತಿಂಗಳುಗಳಲ್ಲಿ)** | **ಸಂಖ್ಯೆ** | **ಶೇಕಡಾವಾರು.** |
|---|---|---|
| 6–10 | 11 | 8 |
| 11–12 | 92 | 69 |
| 13–18 | 03 | 02 |
| 19–24 | 02 | 02 |
| 25–36 | 25 | 19 |
| ಒಟ್ಟು | 133 | 100 |

ಜಿಲ್ಲಾ ಮಟ್ಟದಿಂದ ಅನುಮೋದನೆ ಬಳಿಕ ಜಮೀನು ನೊಂದಣಿಯಾಗುವವರೆಗಿನ ಅವಧಿಯಲ್ಲಿ ಹೆಚ್ಚು ಸಮಯ ತೆಗೆದುಕೊಂಡಿರುವುದು ಕಂಡುಬಂದಿದೆ.

### 6.9 ಪ್ರಮುಖ ವಿಷಯಗಳು.

ಕಂದಾಯ ವಿಭಾಗಗಳಲ್ಲಿ ವಾರ್ಷಿಕ ಸಾಧನೆಗಳನ್ನು ಪರಿಶೀಲಿಸಿದಾಗ, ಫಲಾನುಭವಿಗಳನ್ನು ಯೋಜನೆಯ ವ್ಯಾಪ್ತಿಯಲ್ಲಿ ತರುವುದು ಬಹಳ ನಿಧಾನವೆಂದು ಕಂಡು ಬಂದಿದೆ ಮತ್ತು ಇದೊಂದು ಗೊಂದಲಮಯ ಚಿತ್ರಣವನ್ನು ತೋರಿಸುತ್ತದೆ. ಕರ್ನಾಟಕದ ದಕ್ಷಿಣ ಭಾಗದಲ್ಲಿ ಮಾರಾಟಕ್ಕೆ ಭೂಮಿಯ ಲಭ್ಯತೆ ಬಹಳ ಕಡಿಮೆಯಿರುವ ಕಾರಣ ಯೋಜನೆ ಪ್ರಗತಿ ಬಹಳ ಕುಂಟಿತ ಗತಿಯಲ್ಲಿರುವುದು ಕಂಡುಬರುತ್ತಿದೆ.

ಅದರೆ ಉತ್ತರ ಕರ್ನಾಟಕದಲ್ಲಿಯ ಚಿತ್ರಣವೇ ಬೇರೆಯಾಗಿರುತ್ತದೆ. ಅಲ್ಲಿ ಮಾರಾಟಕ್ಕೆ ಹೆಚ್ಚು ಜಮೀನು ಲಭ್ಯವಿದ್ದು ಖರೀದಿಸಲು ಅರ್ಹ ಫಲಾನುಭವಿಗಳೇ ಕಡಿಮೆಯಿದ್ದಾರೆ. (ಉದಾ: ಗುಲಬರ್ಗಾ, ರಾಯಚೂರು ಜಿಲ್ಲೆಗಳು.) ಅದರ ಕಾರಣಗಳು ಈ ಕೆಳಗಿನಂತಿರಬಹುದು.

1. ರಾಜ್ಯದ ಉತ್ತರಭಾಗದಲ್ಲಿ ಭೂಮಿ ಹೊಂದಿರುವವರ ತಲಾ ವಿಸ್ತೀರ್ಣವು ದಕ್ಷಿಣ ಭಾಗದವರಿಗಿಂತ ಹೆಚ್ಚಿಗಿದೆ.
2. ಭೂ ಮಾಲೀಕರು ತಮ್ಮ ಸ್ಥಳಗಳಿಂದ ಹೊರಗಿರುವುದು ಅಥವಾ ಪೇಟೆ ಪಟ್ಟಣಗಳಲ್ಲಿ ವಾಸಿಸುತ್ತಿರುವುದು.

3.ಸಣ್ಣ ಹಿಡುವಳಿಗಳ ಕಾರಣ ಮಾರಾಟಕ್ಕೆ ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಜಮೀನುಗಳು ದೊರೆಯದಿರುವುದು ಮತ್ತು ಮಾಲೀಕರು ಪಿತ್ರಾರ್ಜಿತ ಆಸ್ತಿಗಳನ್ನು ಮಾರಾಟ ಮಾಡಲು ಇಷ್ಟಪಡದಿರುವುದು.

ತಿದ್ದುಪಡಿಯಾದ ನಿಯಮಗಳ ಪ್ರಕಾರ ಫಲಾನುಭವಿ ವಾಸವಾಗಿರುವ ಸ್ಥಳದಿಂದ 5 ಕಿ.ಮೀ. ದೂರ ಷರತ್ತನ್ನು ಸಡಿಲ ಗೊಳಿಸಿದ್ದರಿಂದ ತಾಲೂಕಿನ ಯಾವುದೇ ಭಾಗದಲ್ಲಿ ಲಭ್ಯವಿರುವ ಭೂಮಿಯನ್ನು ಹಂಚಿಕೆಗೆ ಪರಿಗಣಿಸಬಹುದಾಗಿರುತ್ತದೆ. ಸರ್ಕಾರದ ಉದ್ದೇಶವು ಒಳ್ಳೆಯದಾದರೂ ಫಲಾನುಭವಿಗಳು ಜಮೀನಿಗೋಸ್ಕರ ತಮ್ಮ ಮನೆ ಬಿಟ್ಟು ದೂರ ಹೋಗಲು ಸಾಮಾನ್ಯವಾಗಿ ಇಷ್ಟಪಡುವುದಿಲ್ಲವಾದ್ದರಿಂದ ಯೋಜನೆಯ ಅನುಷ್ಠಾನ ಕಷ್ಟವಾಗುತ್ತದೆ. ಅಂತಹ ಭೂಮಿಯನ್ನು ತೆಗೆದುಕೊಂಡರೂ ಸಹಾ ಅವರು ಅದನ್ನು ಅಲ್ಲಿಯೇ ಅಕ್ಕ ಪಕ್ಕದವರಿಗೆ ಗುತ್ತಿಗೆಗೆ ನೀಡಿ ತಮ್ಮ ಸ್ವಂತ ಸ್ಥಳದಲ್ಲೇ ವಾಸಿಸುತ್ತಾರೆ.

**6.10 ಪರಿಶಿಷ್ಟ ಪಂಗಡದ ಉಪ ಜಾತಿ/ಗುಂಪುಗಳು.**

**ಕೋಷ್ಟಕ–9 ಆಯ್ದ ಫಲಾನುಭವಿಗಳ ವಿವರಗಳು.**

| ಕ್ರ.ಸಂ. | ಜಾತಿಯ ಹೆಸರು. | ಉಪ ಜಾತಿಯ ಹೆಸರು. | ಒಟ್ಟು ಜನಸಂಖ್ಯೆ. | | ಆಯ್ದ ಫಲಾನುಭವಿಗಳು. | | ಒಟ್ಟು ಜನಸಂಖ್ಯೆಗೆ ಫಲಾನುಭವಿಗಳ ಶೇಕಡಾವಾರು. |
|---|---|---|---|---|---|---|---|
| | | | ಸಂಖ್ಯೆ. | ಶೇಕಡ | ಸಂಖ್ಯೆ. | ಶೇಕಡ | |
| 1 | | ನಾಯಕ. | 692 | 71.71 | 33 | 25 | 4.79 |
| 2 | | ಬೇಡರು. | 81 | 8.40 | 17 | 13 | 21.00 |
| 3 | | ವಾಲ್ಮೀಕಿ. | 159 | 16.48 | 76 | 57 | 47.80 |
| 4 | ಪರಿಶಿಷ್ಟ ಪಂಗಡ. | ಟಿ.ಕೋಳಿ. | 10 | 1.04 | –– | –– | –– |
| 5 | | ಗೊಂಡ್. | 8 | 0.83 | 2 | 1 | 20.00 |
| 6 | | ಕೆ.ಕೋಳಿ. | 4 | 0.41 | 2 | 1 | 50.00 |
| 7 | | ಗೌಡಲು. | 1 | 0.10 | – | – | – |
| 8 | | ಪರಾಡಿ. | 6 | 0.62 | – | – | – |
| 9 | | ಕುಡಿಯಾ. | 1 | 0.10 | 1 | 1 | 100.00 |
| 10 | | ಸೋಲಿಗ. | 1 | 0.10 | – | – | – |
| 11 | | ಮರಾಠಿ. | 2 | 0.21 | 2 | 2 | 100.00 |
| | ಒಟ್ಟು | | 965 | 100 | 133 | 100 | |

ಲಭ್ಯವಿರುವ ಮಾಹಿತಿ ಪ್ರಕಾರ ಕರ್ನಾಟಕದಲ್ಲಿ ಪರಿಶಿಷ್ಟ ಪಂಗಡದಲ್ಲಿ 50 ಉಪ ಪಂಗಡಗಳಿವೆ. ಅಧ್ಯಯನದ ಷರತ್ತುಗಳ ಪ್ರಕಾರ ಭೂಮಿ ಹಂಚಿಕೆ ಮಾಡಲ್ಪಟ್ಟವರಲ್ಲಿ ಮಾದರಿಗಳನ್ನು ಆರಿಸಿದಾಗ ಕಂಡುಬಂದಿದ್ದೇನೆಂದರೆ 50ರಲ್ಲಿ

ಆಯ್ದ ಗುಂಪು ಕೇವಲ 11 ಉಪ ಜಾತಿಗಳಿಗೆ ಸೇರಿದ್ದವೆಂದು ಮತ್ತು ಯೋಜನೆಯ ಫಲಗಳನ್ನು ಮುಖ್ಯವಾಗಿ ಈ ಗುಂಪುಗಳೇ ಅನುಭವಿಸಿವೆ ಎಂದು ಕಂಡುಬಂದಿದೆ.

ಈ ಯೋಜನೆಯಲ್ಲಿ ಹೆಚ್ಚಿನ ಪರಿಶಿಷ್ಟ ಪಂಗಡದ ಜನ ಪ್ರಯೋಜನ ಪಡೆದವರು ಎಂದರೆ, ನಾಯಕರು–692, (71.71%) ವಾಲ್ಮೀಕಿ 159 (16.48%) ಮತ್ತು ಬೇಡರು 81 (8.40%) ಯೋಜನೆಯ ಪ್ರಯೋಜನ ಪಡೆದ ಇತರರು ಎಂದರೆ ಟಿ.ಕೋಳಿ 10 (1.04%) ಗೊಂಡರು 5 (0.52%) ಪರಾಡಿ 6 (0.62%) ಕೆ.ಕೋಳಿ 4 (0.41.%) ಗೌಡಲು 1 (0.10%) ಕುಡಿಯಾ 1 (0.01%) ಸೋಲಿಗಾ–1, (0.01%) ಮತ್ತು ಮರಾಠಿ 2 (0.21%) ಒಟ್ಟಿಗೆ 965. ಫಲಾನುಭವಿಗಳು.

**6.11. ವಯಸ್ಸಿನ ಪ್ರಕಾರ ಜನರ ಹಂಚಿಕೆ.**

ವಯಸ್ಸು ಮತ್ತು ಸ್ವಾಸ್ಥ್ಯ ಕೃಷಿ ಕಾರ್ಯಗಳಿಗೆ ಅತ್ಯಮೂಲ್ಯವಾದ ಬಂಡವಾಳವೆಂದು ಪರಿಗಣಿಸಲಾಗಿದ್ದು ಅದರಲ್ಲೂ ಜಮೀನಿನ ಉಳುಮೆ, ಮತ್ತು ಕೃಷಿ ಸಂಬಂಧಿ ಕಾರ್ಯಗಳಿಗೆ ಬಹಳ ಅಗತ್ಯವಾಗಿ ಬೇಕಾಗಿರುತ್ತವೆ. ಮಾದರಿ ಗುಂಪಿನವರ ಪೈಕಿ 24 ಜನ (18%) 21–30 ವರ್ಷದೊಳಗಿದ್ದು 76 (57%) ಮಂದಿ 31–40 ವರ್ಷ. 15% 41–50 ವರ್ಷದೊಳಗಿದ್ದು ಉಳಿದವರು 8% 51–60 ವರ್ಷದ ಗುಂಪಿನೊಳಗಿದ್ದರು. ಕೇವಲ 2% ಮಾತ್ರ 60 ವರ್ಷಗಳಿಗಿಂತ ಹೆಚ್ಚಿನವರಿದ್ದು ಕೃಷಿ ಕೆಲಸಗಳಿಗೆ ದುರ್ಬಲರಾಗಿರುತ್ತಾರೆ. ವಿವರಗಳು ಈ ಕೆಳಗಿನಂತಿವೆ.

**ಕೋಷ್ಟಕ–10. ಮಾದರಿ ಫಲಾನುಭವಿಗಳ ಸಾಮಾಜಿಕ ಆರ್ಥಿಕ ಹೊರ ನೋಟ. ವಿವಿಧ ವಯಸ್ಸಿನ ಗುಂಪುಗಳು.**

| ಕ್ರಮ ಸಂಖ್ಯೆ. | ವಯಸ್ಸು (ವರ್ಷಗಳಲ್ಲಿ) | ಫಲಾನುಭವಿಗಳ ಸಂಖ್ಯೆ. ಸಂಖ್ಯೆ. | ಶೇಕಡಾವಾರು. |
|---|---|---|---|
| 1 | 21–30 | 24 | 18 |
| 2 | 31–40 | 76 | 57 |
| 3 | 41–50 | 20 | 15 |
| 4 | 51–60 | 10 | 8 |
| 5 | >60 | 3. | 2 |
| | ಒಟ್ಟು. | 133 | 100 |



### 6.12 ವೈವಾಹಿಕ ಸ್ಥಿತಿ.

ಎಲ್ಲ 133 ಮಂದಿಯೂ ಲಗ್ನವಾಗಿದ್ದು ಅವರಲ್ಲಿ 13 ಮಂದಿ ವಿಧವೆಯರಾಗಿದ್ದಾರೆ. ಅವರಲ್ಲಿ ರಾಯಚೂರಿನಲ್ಲಿ 6 ಮಂದಿಯಿದ್ದು ಸುಮಾರು ಶೇ.50 ರಷ್ಟಾಗುತ್ತದೆ. ವಿಧವೆಯರಿಗೆ ವಿಶೇಷ ಸ್ಥಾನಮಾನ ಇಲ್ಲದಿದ್ದರೂ ಅವರ ಆಯ್ಕೆಯಿಂದ ನಿಜವಾಗಿಯೂ ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡಿದಂತಾಗಿದೆ, ಅವರ ಜೀವನಕ್ಕೆ ಬೆಂಬಲವಾಗಲೀ, ಭಧ್ರತೆಯಾಗಲೀ ಬಹಳ ಕಡಿಮೆಯಿದ್ದ ಕಾರಣ ಅವರ ಆಯ್ಕೆ ನಿಜಕ್ಕೂ ಒಳ್ಳೆಯದು. ಇದರಿಂದ ಯೋಜನೆಯ ಗುಣಮಟ್ಟದ ಪ್ರಗತಿ ಸಾಧಿಸಿದಂತಾಗಿದೆ. ಈ ಕೆಳಗಿನ ಕೋಷ್ಟಕವು ವಿವರಗಳನ್ನು ಒದಗಿಸುತ್ತದೆ. ಜಿಲ್ಲಾವಾರು ವಿವರಗಳು ಅನುಬಂಧ 5 ರಲ್ಲಿವೆ.

**ಕೋಷ್ಟಕ-11. ವೈವಾಹಿಕ ಸ್ಥಿತಿ.**

| ಕ್ರಮ ಸಂಖ್ಯೆ. | ಒಟ್ಟು ಫಲಾನುಭವಿಗಳು. | ವಿವಾಹಿತರು. | ವಿಧವೆಯರು. | ಮೃತ ಪಟ್ಟವರು. |
|---|---|---|---|---|
| 1 | 133 | 133 | 13 | 1 |

### 6.13 ವೃತ್ತಿ.

ಭೂಮಿ ಹಂಚಿಕೆಗೆ ಮೊದಲು ಫಲಾನುಭವಿಗಳ ಹಿನ್ನೆಲೆಯನ್ನು ವಿಶ್ಲೇಶಿಸಲಾಗಿದ್ದು ಯೋಜನೆಯಿಂದ ಅವರ ಆದಾಯದಲ್ಲಿ ಮೇಲು ಸಂಪಾದನೆ ಆಗುವುದನ್ನು ಅಂದಾಜಿಸಲು ಸಹಾಯಕವಾಗುವುದು, ಏಕೆಂದರೆ ಅವರು ಅಥವಾ ಅವರ ಗಂಡಂದಿರು ಕೃಷಿಯನ್ನು ಗುತ್ತಿಗೆ ಮೇಲೆ ಅಥವಾ ಪಾಲುದಾರಿಕೆ ಅಥವಾ ಕೃಷಿ ಕೂಲಿ ಕಾರ್ಮಿಕರಾಗಿ ಕೆಲಸ ಮಾಡಿತ್ತಿದ್ದುದು ಕಂಡುಬಂದಿದೆ. ಕೇವಲ 4 ಮಂದಿ ( ಸುಮಾರು 3%) ಸ್ಥಳೀಯವಾಗಿ ಇತರ ಕೆಲಸಗಳಲ್ಲಿ ತೊಡಗಿದ್ದು ಕಂಡುಬಂದಿದೆ. ಉಳಿದವರು ಕೃಷಿ ಮತ್ತು ಇತರ ಸಂಬಂಧಿಸಿದ ಕೆಲಸಗಳನ್ನು ಈ ಕೆಳಗಿನ ಕೋಷ್ಟಕದಲ್ಲಿರುವಂತೆ ಮಾಡಿಕೊಂಡಿರುವುದು ಕಂಡುಬಂದಿದೆ.

**ಕೋಷ್ಟಕ-12 ಫಲಾನುಭವಿಗಳ ಮತ್ತು ಅವರ ಗಂಡಂದಿರ ವೃತ್ತಿ ವಿವರಗಳು.**

| ಕ್ರಮ ಸಂಖ್ಯೆ. | ಒಟ್ಟು ಫಲಾನುಭವಿಗಳು. | ಪತಿ/ಪತ್ನಿಯ ವೃತ್ತಿ. | | | | | | | | | |
|---|---|---|---|---|---|---|---|---|---|---|---|
| | | ಕೃಷಿ ಮತ್ತು ಕೃಷಿ ಕಾರ್ಮಿಕ. | | ಕೃಷಿ ಕಾರ್ಮಿಕರು. | | ಕುರಿಸಾಕಣೆ. | | ಸೇವೆಗಳು. | | ಮರಣ ಹೊಂದಿದವರು. | |
| | | ಸಂ | % | ಸಂ. | % | ಸಂ. | % | ಸಂ | % | ಸಂ | % |
| 1 | 133 | 102 | 76 | 12 | 9 | 2 | 2 | 4 | 3 | 13 | 10 |

**6.14. ವಿದ್ಯಾಭ್ಯಾಸ.**

ಕರ್ನಾಟಕದಲ್ಲಿ ಹೆಣ್ಣುಮಕ್ಕಳ ವಿದ್ಯಾಭ್ಯಾಸದ ಮಟ್ಟವು ಹೆಚ್ಚಿಗಿದ್ದರೂ ಫಲಾನುಭವಿಗಳ ಪೈಕಿ 97 ಜನ (73%) ಯಾವುದೇ ಶಾಲೆಗೆ ಹೋಗದೇ ಅವಿದ್ಯಾವಂತರಾಗಿರುವುದು ಕಂಡುಬಂತು. ಅವರಲ್ಲಿ 9 ಜನ ಸಹಿ ಮಾತ್ರ ಮಾಡಿದರು. 11 ಜನ ಪ್ರೈಮರಿ ವಿದ್ಯಾಭ್ಯಾಸ, 8 ಮಂದಿ ಮಾಧ್ಯಮಿಕ ಮತ್ತು 8 ಮಂದಿ ಹೈಸ್ಕೂಲು ಶಿಕ್ಷಣ ಪಡೆದಿದ್ದರು. ಇಲ್ಲಿ ಒಂದು ವಿಷಯ ಗಮನಿಸುವುದೇನೆಂದರೆ ಹೆಚ್ಚಿನವರು 21–40 ವಯಸ್ಸಿನೊಳಗಿದ್ದವರೂ ಯಾರೂ ಶಾಲೆಯ ಮುಖ ನೋಡಿಲ್ಲ. ವಿದ್ಯಾರ್ಹತೆ ಬಗ್ಗೆ ಕೆಳಗಿನ ಕೋಷ್ಟಕದಲ್ಲಿ ಕೊಟ್ಟಿದ್ದು ಅನುಬಂಧ 6 ರಲ್ಲಿ ಜಿಲ್ಲಾವಾರು ವಿವರಗಳನ್ನು ಕೊಟ್ಟಿದೆ.

**ಕೋಷ್ಟಕ–13. ಫಲಾನುಭವಿಗಳ ವಿದ್ಯಾಭ್ಯಾಸ ಮಟ್ಟ.**

| ಒಟ್ಟು ಫಲಾನುಭವಿಗಳು– 133 | | |
|---|---|---|
| ಸಾಕ್ಷರತೆ. | | |
| ಅಕ್ಷರಸ್ಥರು. | 36 | 27% |
| ಅನಕ್ಷರಸ್ಥರು. | | |
| ವಿದ್ಯಾಭ್ಯಾಸ. | | |
| ಪ್ರಾಥಮಿಕ | 11 | 08% |
| ಮಧ್ಯಮಿಕ | 08 | 06% |
| ಎಸ್.ಎಸ್.ಎಲ್.ಸಿ. | 08 | 06% |
| ಇತರ ಅಕ್ಷರಸ್ಥರು. | 09 | 07% |

ಫಲಾನುಭವಿಗಳ ವಿದ್ಯಾಭ್ಯಾಸದ ಮಟ್ಟ.



**6.15 ಫಲಾನುಭವಿಗಳ ಸಂಬಂಧ.**

133 ಫಲಾನುಭವಿಗಳ ಪೈಕಿ 47 ಮಂದಿ ತಮಗೆ ಗಂಡು ಮಕ್ಕಳಿಲ್ಲವೆಂದು ವರದಿ ಮಾಡಿಕೊಂಡರು. ಉಳಿದ 86 ಫಲಾನುಭವಿಗಳ ಪೈಕಿ 58 ಜನರಿಗೆ ಒಬ್ಬರೇ ಸಹೋದರರಿರುವುದು, 19 ಜನರಿಗೆ ಇಬ್ಬರು ಸಹೋದರರಿರುವುದು, 9 ಜನರಿಗೆ ಪ್ರತಿಯೊಬ್ಬರಿಗೂ 3 ಸಹೋದರರಿದ್ದಾರೆಂದು ತಿಳಿಸಿದರು. ಎಲ್ಲ 133 ಜನರೂ ತಾವು ಸ್ವತಂತ್ರವಾಗಿ ಚಿಕ್ಕ ಸಂಸಾರಗಳಲ್ಲಿ ವಾಸ ಮಾಡುತ್ತಿರುವುದಾಗಿ ತಿಳಿಸಿರುತ್ತಾರೆ.

**6.16 ಕುಟುಂಬದ ಆದಾಯ.**

ಕುಟುಂಬದ ಸರಾಸರೀ ಆದಾಯವು ಅವರೇ ತಿಳಿಸಿದಂತೆ ಶೂನ್ಯ ರೂಪಾಯಿಗಳಿಂದ 1.12,500 ರೂಪಾಯಿಗಳವರೆಗೆ ಇದೆಯೆಂದು ತಿಳಿದುಬಂದಿದೆ. ವಾರ್ಷಿಕ ಆದಾಯವನ್ನು 4 ಭಾಗಗಳನ್ನಾಗಿ ವಿಭಾಗಿಸಲಾಗಿದೆ. ವಾರ್ಷಿಕ ಆದಾಯ 5000/ ಕ್ಕಿಂತ ಕಡಿಮೆ ಇರುವವರು ಶೇ.7.52 ರಷ್ಟಿದ್ದು, 5 ಸಾವಿರದಿಂದ 10 ಸಾವಿರ ವಾರ್ಷಿಕ ಆದಾಯ ಇರುವವರು ಶೇ. 6.02 ಇರುತ್ತಾರೆ. 10 ಸಾವಿರದಿಂದ 25 ಸಾವಿರ ವಾರ್ಷಿಕ ಆದಾಯ ಇರುವವರು ಶೇ. 65.4 ಇದ್ದರು. 25,000 ದಿಂದ 50,000, ವಾರ್ಷಿಕ ಆದಾಯ ಇರುವವರು ಶೇ. 18.05 ಇದ್ದರು. ಆದಾಯದ ಅಂದಾಜಿನ ಪ್ರಕಾರ ಹೆಚ್ಚಿನವರು (133ರಲ್ಲಿ 87 ಜನ) 10 ಸಾವಿರದಿಂದ 25 ಸಾವಿರ ಆದಾಯ ಹೊಂದಿದ್ದರು.

**ಕೋಷ್ಟಕ–14. ಆದಾಯ ಗುಂಪುಗಳು.**

| ಕ್ರಮ ಸಂಖ್ಯೆ. | ಒಟ್ಟು ಫಲಾನುಭವಿಗಳು. | ಸರಾಸರಿ ವಾರ್ಷಿಕ ಆದಾಯದ ಗುಂಪುಗಳು. | | | | | | | | | |
|---|---|---|---|---|---|---|---|---|---|---|---|
| | | 5 ಸಾವಿರಕ್ಕಿಂತ ಕಡಿಮೆ. | | 5 ಸಾವಿರದಿಂದ 10 ಸಾವಿರ. | | 10 ಸಾವಿರದಿಂದ 25,000/ | | 25 ಸಾವಿರದಿಂದ 50 ಸಾವಿರ . | | 50 ಸಾವಿರದಿಂದ 1,12,500/ | |
| | | ಸಂ | % | ಸಂ. | % | ಸಂ. | % | ಸಂ | % | ಸಂ | % |
| 1 | 123 | 5 | 4.06 | 3 | 2.44. | 87 | 70.73.. | 24 | 19.51. | 4 | 3.26 |
| | 10 ಫಲಾನುಭವಿಗಳು. ಶೂನ್ಯ ಆದಾಯವಿರುವವರು. (ಕೋಲಾರ–9. ಮತ್ತು ಬೆಂಗಳುರು–1) | | | | | | | | | | |

**6.17 ಭೂಮಿ ಹಂಚಿಕೆಗೆ ಮೊದಲು ಭೂಮಿಯ ಒಡೆತನ.**

ಅರ್ಹತೆ ಮಾನದಂಡಗಳ ಪ್ರಕಾರ ಭೂಮಿ ಹಂಚಿಕೆಯು ಕೇವಲ ಭೂ ರಹಿತರಿಗಷ್ಟೇ ಇದ್ದಿದ್ದರಿಂದ ಎಲ್ಲ ಪ್ರಕರಣಗಳಲ್ಲಿ ಈ ಷರತ್ತನ್ನು ಪಾಲಿಸಲಾಗಿದೆ.

**6.18 ಭೂಮಿಯ ವಿಧ ಮತ್ತು ಬೆಲೆಯ ಆಧಾರದ ಮೇಲೆ ಭೂ ಹಂಚಿಕೆ.**

ಭೂ ಹಂಚಿಕೆಯ ಧೋರಣೆಯ ವಿವರಗಳನ್ನು ನಿಗಮದಿಂದ ಪಡೆದುಕೊಳ್ಳಲಾಯಿತು. ಅಧ್ಯಯನಕ್ಕೆ 2009–10 ರಿಂದ 2013–14 ರ ಐದು ವರ್ಷಗಳ ಅವಧಿಯಲ್ಲಿ ಭೂಮಿ ಪಡೆದವರನ್ನು ಆರಿಸಿಕೊಳ್ಳಲಾಯಿತು. 133 ಫಲಾನುಭವಿಗಳ ಪೈಕಿ 64 ಮಂದಿಗೆ 63.30 ಎಕರೆ ನೀರಾವರಿ ಜಮೀನು, 58 ಜನರಿಗೆ 115.05 ಎಕರೆ ಖುಷ್ಕಿ, ಮತ್ತು 11 ಜನರಿಗೆ 11

ಎಕರೆ ತೋಟದ ಜಮೀನನ್ನು ಹಂಚಿಕೆ ಮಾಡ'ಲಾಗಿತ್ತು. (ಒಟ್ಟಿಗೆ 189.35 ಎಕರೆಗಳು) ರಾಯಚೂರು, ಕೋಲಾರ, ವಿಜಾಪುರ, ಚಿಕ್ಕಮಗಳೂರು, ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಎಲ್ಲರಿಗೂ ನೀರಾವರಿ ಜಮೀನುಗಳನ್ನು ಹಂಚಿಕೆ ಮಾಡಲಾಯಿತು. 13 ಜಿಲ್ಲೆಗಳ ಫಲಾನುಭವಿಗಳಿಗೆ ಖುಷ್ಕಿ ಜಮೀನುಗಳನ್ನು ಮತ್ತು ಉಳಿದ ಜಿಲ್ಲೆಗಳಲ್ಲಿ ಮಿಶ್ರ ರೀತಿಯ ಜಮೀನುಗಳನ್ನು ಹಂಚಲಾಗಿದೆ.

ವರ್ಷಾವಾರು ಹಂಚಿಕೆಯಿಂದ ಕಂಡುಬರುವುದೇನೆಂದರೆ, ನಿಗಮದಿಂದ ಬಂದ ಮಾಹಿತಿ ಪ್ರಕಾರ 2009–10 ರಲ್ಲಿ 17 ಜನರಿಗೆ ಖುಷ್ಕಿ ಜಮೀನು, 4 ಜನರಿಗೆ ನೀರಾವರಿ ಜಮೀನು ಒಟ್ಟಿಗೆ 38 ಎಕರೆ ಹಂಚಿಕೆ ಮಾಡಲಾಯಿತು. 2010–11 ರಲ್ಲಿ 16 ಜನರಿಗೆ 32 ಎಕರೆ ಖುಷ್ಕಿ, 21 ಜನರಿಗೆ 21 ಎಕರೆ ನೀರಾವರಿ ಜಮೀನುಗಳನ್ನು ಹಂಚಲಾಯಿತು. 2011–12 ರಲ್ಲಿ 13 ಜನರಿಗೆ 26 ಎಕರೆ ಖುಷ್ಕಿ ಭೂಮಿ 10 ಜನರಿಗೆ 10 ಎಕರೆ ನೀರಾವರಿ ಜಮೀನುಗಳನ್ನು ಹಂಚಿಕೆ ಮಾಡಲಾಯಿತು. 2012–13ರಲ್ಲಿ 8 ಜನರಿಗೆ 16 ಎಕರೆ ಖುಷ್ಕಿ , 5 ಜನರಿಗೆ 5 ಎಕರೆ ನೀರಾವರಿ, ಮತ್ತು 2 ಜನರಿಗೆ 2 ಎಕರೆ ತೋಟದ ಜಮೀನುಗಳನ್ನು ಹಂಚಿಕೆ ಮಾಡಲಾಗಿದೆ. 2013–14ರಲ್ಲಿ 4 ಜನರಿಗೆ 7.05 ಎಕರೆ ಖುಷ್ಕಿ, 24 ಜನರಿಗೆ 23.30 ಎಕರೆ ನೀರಾವರಿ, ಮತ್ತು 9 ಜನರಿಗೆ 9 ಎಕರೆ ತೋಟದ ಜಮೀನುಗಳನ್ನು ಹಂಚಿಕೆ ಮಾಡಲಾಗಿದೆ.

**ಕೋಷ್ಟಕ–15. ಖರೀದಿಸಿದ ಭೂಮಿಯ ವಿವರಗಳು.**

| ಕ್ರಮ ಸಂಖ್ಯೆ | ಹಂಚಿಕೆ ಮಾಡಲಾದ ವರ್ಷ | ಫಲಾನು ಭವಿಗಳು | | ಖುಷ್ಕಿ ಜಮೀನು. | | ನೀರಾವರಿ ಜಮೀನು. | | ತೋಟದ ಜಮೀನು. | | ರೂಪಾಯಿಗಳು. (ಲಕ್ಷಗಳಲಿ) | | |
|---|---|---|---|---|---|---|---|---|---|---|---|---|
| | | ಸಂಖ್ಯೆ | % | ಸಂಖ್ಯೆ | ಎಕರೆ. | ಸಂಖ್ಯೆ | ಎಕರೆ | ಸಂಖ್ಯೆ | ಎಕರೆ | ಒಟ್ಟು ಬೆಲೆ | ಸಾಲ | ರಿಯಾಯತಿ |
| 1 | 2009–10 | 21 | 16 | 17 | 34.00 | 4 | 4.00 | – | – | 18.40 | 9.20 | 9.20 |
| 2 | 2010–11 | 27 | 28 | 16 | 32.00 | 21 | 21.00 | – | – | 58.14 | 29.07 | 29.07 |
| 3 | 2011–12 | 23 | 17 | 13 | 26.00 | 10 | 10.00 | – | – | 57.66 | 28.83 | 28.83 |
| 4 | 2012–13 | 15 | 11 | 8 | 16.00 | 5 | 5.00 | 2 | 2.00 | 41.42 | 20.71 | 20.71 |
| 5 | 2013–14 | 37 | 28 | 4 | 7.05 | 24 | 23.30 | 9 | 9.00 | 189.44 | 94.72 | 94.72 |
| | ಒಟ್ಟು. | 133 | 100 | 58 | 115.05 | 64 | 63.30 | 11 | 11.00 | 365 | 182.53 | 182.53 |

**ಕೋಷ್ಟಕ–16. ಜಿಲ್ಲಾವಾರು ಹಂಚಿಕೆ ಮಾಡಿದ ಭೂಮಿಯ ತರಹೆ ಮತ್ತು ವಿಸ್ತೀರ್ಣ.**

| ಕ್ರಮ ಸಂಖ್ಯೆ. | ಜಿಲ್ಲೆ. | ಖುಷ್ಕಿ. | | ನೀರಾವರಿ. | | ತೋಟ. | |
|---|---|---|---|---|---|---|---|
| | | ಸಂಖ್ಯೆ. | ಎಕರೆ. | ಸಂಖ್ಯೆ. | ಎಕರೆ. | ಸಂಖ್ಯೆ. | ಎಕರೆ. |
| 1 | ಬಾಗಲಕೋಟೆ. | 15 | 30.00 | 9 | 9.00 | 12 | 11.36. |
| 2 | ಬೆಳಗಾವಿ. | 20 | 39.11 | 6 | 6.00 | – | – |
| 3 | ಬೆಂಗಳೂರು. | 1 | 2.00 | – | – | – | – |
| 4 | ವಿಜಾಪುರ. | 9 | 18.00 | 3 | 3.00 | 11 | 11.00 |
| 5 | ಬೀದರ್. | 10 | 20.00 | – | – | – | – |
| 6 | ಚಾಮರಾಜನಗರ. | 8 | 16.00 | 2 | 2.00 | – | – |

| | | | | | | | |
|---|---|---|---|---|---|---|---|
| 7 | ಚಿಕ್ಕಮಗಳೂರು. | 3 | 6.00 | 17 | 17.00 | 1 | 1.00 |
| 8 | ಚಿತ್ರದುರ್ಗ. | 49 | 98.00 | – | – | – | – |
| 9 | ಚಿಕ್ಕಬಳ್ಳಾಪುರ. | 53 | 89.16 | 81 | 80.06 | – | – |
| 10 | ದಾವಣಗೆರೆ. | 18 | 35.26 | 3 | 3.00 | – | – |
| 11 | ದಕ್ಷಿಣ ಕನ್ನಡ. | – | – | 3 | 3.00 | – | – |
| 12 | ಧಾರವಾಡ. | 59 | 116.00 | 2 | 2.00 | – | – |
| 13 | ಗದಗ. | 29 | 57.22 | – | – | --- | – |
| 14 | ಗುಲಬರ್ಗಾ. | 36 | 72.00 | 5 | 5.00 | – | – |
| 15 | ಕೊಡಗು. | 1 | 2.00 | – | – | – | – |
| 16 | ಕೋಲಾರ. | 27 | 46.30 | 15 | 15.00 | 18 | 18.00 |
| 17 | ಕೊಪ್ಪಳ. | 43 | 85.36 | – | – | – | – |
| 18 | ಹಾಸನ. | 9 | 17.33 | 2 | 2.00 | – | – |
| 19 | ಹಾವೇರಿ. | 3 | 5.20 | – | – | – | – |
| 20 | ರಾಯಚೂರು. | 39 | 78.00 | 320 | 318.13 | – | – |
| 21 | ಶಿವಮೊಗ್ಗ. | 3 | 6.00 | 2 | 2.00 | – | – |
| 22 | ತುಮಕೂರು. | 6 | 12.00 | – | – | – | – |
| 23 | ಉತ್ತರ ಕನ್ನಡ. | – | – | – | – | 2 | 2.00 |
| 24 | ಯಾದಗಿರಿ. | 11 | 21.00 | – | – | – | – |
| | ಒಟ್ಟು. | 451 | 882.78 | 470 | 466.51 | 44 | 42.36. |

ನಿಗಮದ ಅಧಿಕಾರಿಗಳೊಡನೆ ಚರ್ಚಿಸಿದಾಗ ತಿಳಿದು ಬಂದದ್ದೇನೆಂದರೆ, ಯೋಜನೆಯಲ್ಲಿ ಮಹಿಳೆಯರನ್ನು ಹೆಚ್ಚಿಗೆ ಸೇರಿಸಿಕೊಳ್ಳದಿರುವುದು. ಇದು ಅತಿ ಅತೃಪ್ತಿಕರ. ಕಾರಣಗಳು 1) ಜಮೀನಿನ ಬೆಲೆಯು ನಿಗಮವು ನಿಗದಿ ಪಡಿಸಿದ್ದಕ್ಕಿಂತ ಹೆಚ್ಚಾಗಿರುವುದು. 2) ಫಲಾನುಭವಿಗಳು ಅವರ ಅರ್ಹತೆ ಮೀರಿ ಹೆಚ್ಚಿನ ಹಣವನ್ನು ತರಲು ವಿಫಲರಾಗುವುದು, ಜಿಲ್ಲೆಗಳಲ್ಲಿ ಒಂದೇ ಸಮನಾದ ಬೆಲೆ ನಿಗದಿ ಮಾಡಲು ಸಾಧ್ಯವಾಗದಿರುವುದು ಹೆಚ್ಚಿನ ಫಲಾನುಭವಿಗಳನ್ನು ಯೋಜನೆಯ ವ್ಯಾಪ್ತಿಯೊಳಗೆ ತರಲು ಸಾಧ್ಯವಾಗಿರುವುದಿಲ್ಲ.

ಭೂಮಿಯ ಒಟ್ಟು ಬೆಲೆ 2009–10 ರಲ್ಲಿ 18.40 ಲಕ್ಷಗಳು, 2010–11ರಲ್ಲಿ 58.14 ಲಕ್ಷಗಳು. 2011–12 ರಲ್ಲಿ 57.66 ಲಕ್ಷಗಳು, 2012–13ರಲ್ಲಿ 41.42 ಲಕ್ಷಗಳು, 2013–14ರಲ್ಲಿ 189.44 ಲಕ್ಷಗಳಾಗಿರುವುದನ್ನು ಗಮನಿಸಬಹುದು. ಈ ರೀತಿ ನಿಗಮವು ಒಟ್ಟಿಗೆ 365.06 ಲಕ್ಷಗಳನ್ನು ಫಲಾನುಭವಿಗಳಿಗೆ 2009–10 ರಿಂದ 2013–14 ರ ಐದು ವರ್ಷಗಳ ಅವಧಿಯಲ್ಲಿ ಭೂಮಿ ಹಂಚಿಕೆ ಮಾಡಲು, ಭೂಮಿಯನ್ನು ಖರೀದಿಸಲು ಖರ್ಚು ಮಾಡಿದೆ. ಅದರಲ್ಲಿ ಶೇ.50 ರಷ್ಟು ಭಾಗವನ್ನು ಶೇ.6 ರ ಬಡ್ಡಿ ದರದಲ್ಲಿ 10 ವರ್ಷಗಳ ಅವಧಿಯಲ್ಲಿ ಮರುಪಾವತಿಸುವ ಷರತ್ತಿನ ಮೇಲೆ ಸಾಲವಾಗಿಯೂ ಉಳಿದರ್ಧ ಭಾಗವನ್ನು ರಿಯಾಯತಿಯಾಗಿ ಪರಿಗಣಿಸಲಾಗಿದೆ.

ಅಧ್ಯಯನದಿಂದ ತಿಳಿದುಬಂದದ್ದೇನೆಂದರೆ, 2009–10 ರಿಂದ 2013–14 ರ ಅವಧಿಯಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಜಿಲ್ಲೆಯಿಂದ ಜಿಲ್ಲೆಗೆ ಭೂಮಿಯ ಬೆಲೆ ಒಂದೇ ರೀತಿಯಲ್ಲಿರದೇ ತುಂಬಾ ಏರು ಪೇರಾಗಿದೆ. ಉದಾಹರಣೆಗೆ ಭೂಮಿಯ ಬೆಲೆ ಎರಡು ಅವಧಿಗಳಲ್ಲಿ ಬೇರೆ ಬೇರೆ ಜಿಲ್ಲೆಗಳಲ್ಲಿ ಶೇ.150 ರಿಂದ 500 ರ ವರೆಗೆ ಏರಿದೆ. ಇದು ನಿಜವಾದಂತೆ ಕಾಣುತ್ತಿದೆ ಏಕೆಂದರೆ ಭೂಮಿಯ ಮಾರ್ಗ ಸೂಚಿ ಬೆಲೆಯು ವರ್ಷದಿಂದ ವರ್ಷಕ್ಕೆ ಜಮೀನಿನ ಗುಣ, ಅದರ ಸ್ಥಳ, ಲಭ್ಯತೆಗಳನ್ನೊಳಗೊಂಡು ಏರು ಪೇರಾಗಿದೆ. ಹಾಗೂ ಭೂಮಿಯನ್ನು ಪರಿಶಿಷ್ಟ ಪಂಗಡದ

ಮಹಿಳೆಯರಿಗೆ ಹಂಚಿಕೆ ಮಾಡಲು ಖರೀದಿಗೆ ಹೋದಾಗ ಬೆಲೆಗಳು ಏರಿಕೆಯಾಗಿವೆ. ಸರ್ಕಾರವು ಸಾಮಾನ್ಯ ಬೆಲೆಯನ್ನು ನಿಗದಿ ಮಾಡಿದರೂ ಸಹಾ ಅದನ್ನು ಯೋಜನೆ ಅನುಷ್ಠಾನಗೊಳಿಸುವಾಗ ಕಟ್ಟು ನಿಟ್ಟಾಗಿ ಅನುಸರಿಸುವುದು ಕಷ್ಟವಾಗುತ್ತದೆ.

**ಕೋಷ್ಟಕ–17 ಜಿಲ್ಲಾವಾರು, ವರ್ಷಾವಾರು ಹಂಚಿಕೆ ಮಾಡಲಾದ ಜಮೀನುಗಳ ಬೆಲೆಗಳ ವಿವರಗಳು.**

| ಕ್ರ. ಸಂ. | ಹಂಚಿಕೆ ಮಾಡಿದ ವರ್ಷ. | ಜಿಲ್ಲೆ. | ಖುಷ್ಕಿ. | | | ನೀರಾವರಿ. | | | ತೋಟ. | | | ಮಾದರಿಗಳ ಸಂಖ್ಯೆ. |
|---|---|---|---|---|---|---|---|---|---|---|---|---|
| | | | ಎಕರೆ. | ಬೆಲೆ. | ಎಕರೆಗೆ ಬೆಲೆ. | ಎಕರೆ. | ಬೆಲೆ. | ಎಕರೆಗೆ ಬೆಲೆ. | ಎಕರೆ. | ಬೆಲೆ | ಎಕರೆಗೆ ಬೆಲೆ. | |
| 1 | 2009–10 | ಬಾಗಲಕೋಟೆ. | 4.00 | 1.80 | 0.45 | – | – | – | – | – | – | 2 |
| | | ಚಾಮರಾಜ ನಗರ. | 4.00 | 1.00 | 0.25 | – | – | – | – | – | – | 2 |
| | | ದಾವಣ ಗೆರೆ. | 6.00 | 2.25 | 0.38 | – | – | – | – | – | – | 3 |
| | | ಗುಲಬರ್ಗ. | 4.00 | 1.00 | 0.25 | – | – | – | – | – | – | 2 |
| | | ಕೊಡಗು. | 4.00 | 1.00 | 0.25 | – | – | – | – | – | – | 1 |
| | | ಕೊಪ್ಪಳ. | 8.00 | 3.64 | .045 | – | – | – | – | – | – | 4 |
| | | ಹಾಸನ. | 2.00 | 1.40 | 0.70 | – | – | – | – | – | – | 1 |
| | | ರಾಯಚೂರು. | – | – | – | 4.00 | 4.00 | 1.00 | – | – | – | 4 |
| | | ಶಿವಮೊಗ್ಗ. | 2.00 | 0.70 | 0.35 | – | – | – | – | – | – | 1 |
| | | ತುಮಕೂರು. | 2.00 | 0.75 | 0.37 | – | – | – | – | – | – | 1 |
| | | | | | | | | | | | | |
| 2 | 2010–11 | ಬೆಳಗಾವಿ. | 2.00 | 1.30 | 0.65 | – | – | – | – | – | – | 1 |
| | | ಬೆಂಗಳೂರು. | 2.00 | 2.50 | 1.25 | – | – | – | – | – | – | 1 |
| | | ಬೀದರ್. | 4.00 | 2.56 | 1.28 | – | – | – | – | – | – | 2 |
| | | ಚಾಮರಾಜನಗರ. | – | – | – | 1.00 | 0.81 | 0.81 | – | – | – | 1 |
| | | ಚಿಕ್ಕಬಳ್ಳಾಪುರ. | – | – | – | 3.00 | 7.50 | 2.50 | – | – | – | 3 |
| | | ಚಿತ್ರದುರ್ಗ. | 6.30 | 3.00 | .50 | – | – | – | – | – | – | 3 |
| | | ಗದಗ. | 2.00 | 1.10 | 0.55 | – | – | – | – | – | – | 1 |
| | | ಗುಲಬರ್ಗ. | 8.00 | 2.40 | 0.30 | – | – | – | – | – | – | 4 |
| | | ಹಾಸನ. | 4.00 | 2.50 | 0.63 | – | – | – | – | – | – | 2 |
| | | ಹಾವೇರಿ. | 2.00 | 1.10 | 0.55 | – | – | – | – | – | – | 1 |
| | | ರಾಯಚೂರು. | – | – | – | 17.0 | 32.3 | 1.90 | – | – | – | 17 |
| | | ಶಿವಮೊಗ್ಗ. | 2.00 | 0.72 | 0.36 | – | – | – | – | – | – | 1 |
| | | ಬೆಳಗಾವಿ. | – | – | – | 3.00 | 7.50 | 2.50 | – | – | – | 3 |

| | | | | | | | | | | | | |
|---|---|---|---|---|---|---|---|---|---|---|---|---|
| 3 | 2011–12 | ಬಿಜಾಪುರ. | – | – | – | 2.00 | 4.68 | 2.34 | – | – | – | 2 |
| | | ಚಿಕ್ಕಬಳ್ಳಾಪುರ. | 12.00 | 15.00 | 1.25 | – | – | – | – | – | – | 6 |
| | | ಧಾರವಾಡ. | 10.00 | 15.00 | 1.50 | – | – | – | – | – | – | 5 |
| | | ಕೋಲಾರ. | – | – | – | 5.00 | 12.50 | 2.50 | – | – | – | 5 |
| | | ತುಮಕೂರು. | 2.00 | 2.16 | 1.08 | – | – | – | – | – | – | 1 |
| | | ಯಾದಗಿರಿ. | 2.00 | 0.82 | 0.41 | – | – | – | – | – | – | 1 |
| 4 | 2012–13 | ಚಿತ್ರದುರ್ಗ. | 4.00 | 14.00 | 3.50 | – | – | – | – | – | – | 2 |
| | | ಚಿಕ್ಕಮಗಳೂರು. | – | – | – | 3.00 | 3.90 | 1.30 | – | – | – | 3 |
| | | ದಕ್ಷಿಣ ಕನ್ನಡ. | – | – | – | 2.00 | 6.00 | 3.00 | – | – | – | 2 |
| | | ಗದಗ. | 8.00 | 8.80 | 1.10 | – | – | – | – | – | – | 4 |
| | | ಯಾದಗಿರಿ. | 4.00 | 3.68 | 0.92 | – | – | – | – | – | – | 2 |
| | | ಉತ್ತರಕನ್ನಡ. | – | – | – | – | – | – | – | 2.0 | 5.04 | 2.52 |

| ಕ್ರ.ಸಂ. | ಹಂಚಿಕೆ ಮಾಡಿದ ವರ್ಷ. | ಜಿಲ್ಲೆ. | ಭೂಮಿಯ ತರಹೆ. | | | | | | | | | ಮಾದರಿ ಸಂಖ್ಯೆ. |
|---|---|---|---|---|---|---|---|---|---|---|---|---|
| | | | ಖುಷ್ಕಿ. | | | ನೀರಾವರಿ. | | | ತೋಟ. | | | |
| | | | ವಿಸ್ತೀರ್ಣ. | ಬೆಲೆ. | ಎಕರೆಗೆ ಬೆಲೆ. | ವಿಸ್ತೀರ್ಣ. | ಬೆಲೆ. | ಎಕರೆಗೆ ಬೆಲೆ. | ವಿಸ್ತೀರ್ಣ. | ಬೆಲೆ. | ಎಕರೆಗೆ ಬೆಲೆ. | |
| 5 | 2011–12 | ಬಾಗಲಕೋಟೆ | – | – | – | 1.00 | 4.65 | 4.65 | – | – | – | 1 |
| | | | – | – | – | 1.32 | 9.00 | 5.00 | – | – | – | 2 |
| | | ಬೆಳಗಾವಿ. | 2.00 | 1.30 | 0.65 | – | – | – | – | – | – | 1 |
| | | ಚಿಕ್ಕಬಳ್ಳಾಪುರ. | – | – | – | 7.00 | 35.00 | 5.00 | – | – | – | 7 |
| | | ದಾವಣಗೆರೆ. | 3.25 | 7.10 | 1.96 | – | – | – | – | – | – | 2 |
| | | ಕೋಲಾರ. | – | – | – | – | – | – | 9.00 | 67.5 | 7.50 | 9 |
| | | ಹಾವೇರಿ. | 1.20 | 2.19 | 1.46 | – | – | – | – | – | – | 1 |
| | | ರಾಯಚೂರು. | – | – | – | 14.0 | 63.0 | 4.50 | – | – | – | 14 |

ಬೇರೆ ಜಿಲ್ಲೆಗಳಲ್ಲಿಯೂ ಸಹಾ ಜಮೀನುಗಳ ಬೆಲೆಗಳಲ್ಲಿ ವರ್ಷದಿಂದ ವರ್ಷಕ್ಕೆ ಗುರುತರ ಏರಿಕೆಗಳಾಗಿವೆ.

**6.19** ಯಾವುದೇ ಜಮೀನನ್ನು ಮಾರಾಟ ಮಾಡಿದಾಗ ಅಥವಾ ಖರೀದಿಸಿದಾಗ, ಮೊದಲು ಆ ಜಮೀನಿನ ಸುತ್ತ ನಾಲ್ಕೂ ದಿಕ್ಕುಗಳಲ್ಲಿ ಚಕ್ಕುಬಂದಿಗಳನ್ನು ಗುರುತಿಸುವುದು ವಾಡಿಕೆ. ಅದರಿಂದ ಆ ಜಮೀನನ್ನು ಸ್ಪಷ್ಟವಾಗಿ ಗುರುತಿಸುವುದು ಸುಲಭವಾಗುತ್ತದೆ. ಕೋಲಾರ, ಚಿಕ್ಕಬಳ್ಳಾಪುರ, ಯಾದಗಿರಿ ಕೊಪ್ಪಳ, ಮತ್ತು ರಾಯಚೂರು ಜಿಲ್ಲೆಗಳಲ್ಲಿ ಫಲಾನುಭವಿಗಳ ಗುಂಪಿಗೆ ಒಂದೇ ಕಡೆ ಇರುವ ಜಮೀನುಗಳನ್ನು ಹಂಚಿಕೆ ಮಾಡಲಾಗಿದೆ. ಯೋಜನೆಯ ಬಹು ದೊಡ್ಡ ಹಿನ್ನಡೆ ಏನೆಂದರೆ, ಎಲ್ಲೆಲ್ಲಿ ಒಟ್ಟಾಗಿ ಜಮೀನುಗಳನ್ನು ಹಂಚಿಕೆ ಮಾಡಲಾಗಿದೆಯೋ ಅಲ್ಲೆಲ್ಲಾ

ಪ್ರತಿಯೊಬ್ಬ ಫಲಾನುಭವಿಯ ಭಾಗದ ಜಮೀನನ್ನು ಪ್ರತ್ಯೇಕವಾಗಿ ಗುರುತು ಮಾಡಿರುವುದಿಲ್ಲ. ಒಟ್ಟು 133 ಫಲಾನುಭವಿಗಳ ಪೈಕಿ 63 ಪ್ರಕರಣಗಳಲ್ಲಿ (ಸುಮಾರು 47%) ಹಂಚಿಕೆ ಮಾಡಲಾದ ಫಲಾನುಭವಿಗಳ ಜಮೀನುಗಳಿಗೆ ಚಕ್ಕುಬಂದಿಗಳನ್ನು ಗುರುತುಮಾಡಿರುವುದಿಲ್ಲ. (ಕೋಷ್ಟಕ–18) ರಾಯಚೂರು ಜಿಲ್ಲೆಯ ಮಾನ್ವಿ ತಾಲೂಕಿನಲ್ಲಿ ಅಂತಹ 31 ಪ್ರಕರಣಗಳನ್ನು ಗುರುತಿಸಲಾಗಿದೆ. ಹಂಚಿಕೆದಾರ ಫಲಾನುಭವಿಗಳ ಜೊತೆ ಚರ್ಚಿಸಿದಾಗ ಅವರು ತಮಗೆ ಅಂತಹ ಯಾವುದೇ ಸಮಸ್ಯೆಯಿರುವುದಿಲ್ಲ, ಕಾರಣ ತಾವು ಪರಸ್ಪರ ತಿಳುವಳಿಕೆಯಿಂದ/ಅನ್ಯೋನ್ಯತೆಯಿಂದ ತಮ್ಮ ತಮ್ಮ ಕೃಷಿಕಾರ್ಯಗಳನ್ನು ಮಾಡಿಕೊಂಡು ಹೋಗುತ್ತಿರುವುದಾಗಿ ತಿಳಿಸಿದರು. ಅಧ್ಯಯನದಿಂದ ತಿಳಿದಿದ್ದೇನೆಂದರೆ, ಫಲಾನುಭವಿಗಳ್ಯಾರೂ ತಮ್ಮ ಪಕ್ಕದ ಜಮೀನಿನವರಿಗೇ ಆಗಲೀ ಅಥವಾ ದೊಡ್ಡ ಜಮೀನ್ದಾರರಿಗಾಗಲೀ ಹಂಚಿಕೆಯಾದ ಜಮೀನನ್ನು ಗುತ್ತಿಗೆಗೆ ಕೊಟ್ಟಿರುವ ಸಂಗತಿ ಎಲ್ಲೂ ವರದಿಯಾಗಿಲ್ಲ. ಆದರೂ ಸಹಾ ಹಂಚಿಕೆ ಮಾಡುವ ಮೊದಲು ಚಕ್ಕುಬಂದಿಗಳನ್ನು ಗುರುತಿಸುವುದು ಒಳ್ಳೆಯದು. ಕಾರಣ ಮುಂದೆ ಅದರಿಂದ ಆಗಬಹುದಾದ ಕಾನೂನು ತೊಡಕುಗಳನ್ನು ತಪ್ಪಿಸಬಹುದಾಗಿರುತ್ತದೆ.

**ಕೋಷ್ಟಕ–18 ಚಕ್ಕುಬಂದಿಗಳನ್ನು ಗುರುತು ಮಾಡಿಲ್ಲದ ಜಮೀನುಗಳು**

| ಜಿಲ್ಲೆ. | ತಾಲೂಕು. | ಗ್ರಾಮ. | ಚಕ್ಕುಬಂದಿಗಳನ್ನು ಗುರುತಿಸಿಲ್ಲದ ನೋಂದಣಿಯಾದ ಪ್ರಕರಣಗಳು. |
|---|---|---|---|
| ರಾಯಚೂರು. | ಮಾನ್ವಿ. | ಮುಸ್ಟೂರು. | 14 |
| | ಮಾನ್ವಿ. | ಚಿಕ್ಕೋತನ ಕಲ್ಲು. | 17 |
| ಕೊಪ್ಪಳ, | ಕೊಪ್ಪಳ, | ಬೆಟಗೇರಿ. | 05 |
| ಕೋಲಾರ. | ಶ್ರೀನಿವಾಸಪುರ. | ಕರಿಪಲ್ಲಿ. | 09 |
| ಚಿಕ್ಕಬಳ್ಳಾಪುರ. | ಬಾಗೇಪಲ್ಲಿ. | ದುಗ್ಗಿನಾಯಕನ ಹಳ್ಳಿ. | 06 |
| | | ಅಬ್ಬರವಾರಿಪಲ್ಲಿ. | 10 |
| ಯಾದಗೀರ. | ಸುರಪುರ. | ತೀರ್ಥ. | 02 |
| ಒಟ್ಟು. | | | 63 |

**6.20. ಕೊಳವೇ ಭಾವಿಗಳನ್ನು ಕೊರೆಸಿರುವುದು.**

965 ಫಲಾನುಭವಿಗಳ ಬಾಬ್ತು 451 ಜನರಿಗೆ ಖುಷ್ಕಿ ಜಮೀನುಗಳನ್ನು ಹಂಚಿಕೆ ಮಾಡಲಾಗಿದೆ. (47%) ಇಲ್ಲಿಯವರೆಗೆ ಕೇವಲ 8 ಕೊಳವೇ ಭಾವಿಗಳನ್ನು ಕೊರೆಸಲಾಗಿದೆ. ಅವು ಬಾಗಲಕೋಟೆಯಲ್ಲಿ 4 ಮತ್ತು ಚಿಕ್ಕಬಳ್ಳಾಪುರದಲ್ಲಿ 4. ಇನ್ನೂ ಹೆಚ್ಚಿಗೆ ಕೊಳವೇ ಭಾವಿಗಳನ್ನು ಕೊರೆಸಲು ಸೂಕ್ತ ಸ್ಥಳಗಳ ಸರ್ವೇ ಕೆಲಸ ನಡೆಯುತ್ತಿದೆ.

**ಕೋಷ್ಟಕ–19. ಕೊರೆಸಿದ ಕೊಳವೇ ಭಾವಿಗಳ ವಿವರಗಳು.**

| ಕ್ರಮ ಸಂಖ್ಯೆ. | ಜಿಲ್ಲೆ. | ಹಂಚಿಕೆ ಮಾಡಲಾದ ಖುಷ್ಕಿ ಭೂಮಿ. | | ಜಮೀನು ಹಂಚಿಕೆ ಮಾಡಿದ ವರ್ಷದಲ್ಲೇ ಕೊರೆಸಿದ ಕೊಳವೆ ಭಾವಿಗಳು. | | ಷರಾ. |
|---|---|---|---|---|---|---|
| | | ಫಲಾನುಭವಿಗಳ ಸಂಖ್ಯೆ. | ಹಂಚಿಕೆ ಮಾಡಿದ ಜಮೀನಿನ ವಿಸ್ತೀರ್ಣ. | ಎಸ್.ಟಿ.ಸಿ ಯಿಂದ | ಫಲಾನುಭವಿಯಿಂದ. | |
| 1 | ಬಾಗಲಕೋಟೆ. | 15 | 30.00 | 4 | | ಕೊಳವೆ ಭಾವಿ ನಿರರ್ಥಕ–1 |
| 2 | ಬೆಳಗಾವಿ. | 20 | 39.11 | | | |
| 3 | ಬೆಂಗಳೂರು(ಗ್ರಾ). | 1 | 2.00 | | | |
| 4 | ಬೀದರ್. | 10 | 20.00 | | | |
| 5 | ವಿಜಾಪುರ. | 9 | 18.00 | | | |
| 6 | ಚಿಕ್ಕಬಳ್ಳಾಪುರ. | 53 | 97.27 | 4 | | |
| 7 | ಚಾಮರಾಜನಗರ. | 8 | 16.00 | | | |
| 8 | ಚಿಕ್ಕಮಗಳೂರು. | 3 | 6.00 | | | |
| 9 | ಚಿತ್ರದುರ್ಗ. | 49 | 98 | | | |
| 10 | ದಾವಣಗೆರೆ. | 18 | 35.26 | | | |
| 11 | ಧಾರವಾಡ. | 58 | 116.00 | | | |
| 12 | ದಕ್ಷಿಣ ಕನ್ನಡ. | – | – | | | |
| 13 | ಗದಗ. | 29 | 57.22 | | | |
| 14 | ಗುಲಬರ್ಗಾ. | 36 | 72.00 | | | |
| 15 | ಕೊಡಗು. | 1 | 2.00 | | | |
| 16 | ಕೋಲಾರ. | 27 | 46.30 | | | |
| 17 | ಕೊಪ್ಪಳ. | 43 | 85.36 | | | |
| 18 | ಹಾಸನ. | 9 | 17.33 | | | |
| 19 | ಹಾವೇರಿ. | 3 | 5.20 | | | ಕೊಳವೆ ಭಾವಿಗೆ ಸ್ಥಳ ಆಯ್ಕೆ ಮಾಡಲಾಗಿದೆ. |
| 20 | ರಾಯಚೂರು. | 39 | 76.00. | | | |
| 21 | ಶಿವಮೊಗ್ಗ. | 3 | 6.00 | | | |
| 22 | ತುಮಕೂರು. | 6 | 12.00 | | | |
| 23 | ಉತ್ತರ ಕನ್ನಡ. | –– | ––– | | | |
| 24 | ಯಾದಗಿರಿ. | 11 | 21.00 | | | |
| | ಒಟ್ಟು. | 451 | 882.78 | | | |

**6.21 ಫಸಲು ವಿಮೆ.**

ಹೆಚ್ಚಿನ ಸಂದರ್ಭಗಳಲ್ಲಿ ಫಲಾನುಭವಿಗಳು ಫಸಲು ವಿಮೆ ಮಾಡಿಸಿರುವುದಿಲ್ಲ, ಕಾರಣ ಆ ಬಗ್ಗೆ ಅವರಿಗೆ ತಿಳುವಳಿಕೆ ಇರಲಿಲ್ಲ. ಆದರೂ ಸಹಾ ಇಂತಹ ಸವಲತ್ತು ಇರುವುದರ ಪರಿಜ್ಞಾನವಿದ್ದವರು ಅವರ ಬೆಳೆಗಳಿಗೆ ವಿಮೆ ಮಾಡಿಸಿರುತ್ತಾರ ಮತ್ತು ಪ್ರೀಮಿಯಂ ಹಣ ಪಾವತಿಸುತ್ತಾರೆ. (ಉದಾ: ಚಿಕ್ಕಬಳ್ಳಾಪುರದಲ್ಲಿ 1. ಧಾರವಾಡದಲ್ಲಿ 5 ಮತ್ತು ಗದಗದಲ್ಲಿ 5 ಜನ ವಿಮೆ ಮಾಡಿಸಿರುತ್ತಾರೆ).

**6.22 ಸಾಲ ಮರುಪಾವತಿ.**

ಯೋಜನೆಯಲ್ಲಿ ಫಲಾನುಭವಿಗೆ ಜಮೀನಿನ ಶೇ.50 ಭಾಗ ಮೌಲ್ಯವನ್ನು (ಬೆಲೆಯನ್ನು) 10 ವರ್ಷಗಳ ಅವಧಿಯಲ್ಲಿ ಮರುಪಾವತಿಸುವ ಷರತ್ತಿನ ಮೇಲೆ ಸಾಲ ಮಂಜೂರು ಮಾಡಲು ಅವಕಾಶವಿರುತ್ತದೆ.ಇತ್ತೀಚಿನ ಬೆಳವಣಿಗೆ ಏನೆಂದರೆ, ಸರ್ಕಾರವು ರೈತರ ಸಾಲಗಳನ್ನು ಮನ್ನಾ ಮಾಡುತ್ತಿರುತ್ತದೆ. ಸಾಲಗಾರ ರೈತರಿಗೆ ಇದರಿಂದ ಸಾಲದ ಹೊರೆ ಕಡಿಮೆಯಾದರೂ ಅದರಿಂದ ರೈತರು ಸಾಲ ಮನ್ನಾ ನಿರೀಕ್ಷಣೆಯಲ್ಲಿ ಸಾಲ ಮರುಪಾವತಿಸದೇ ಬೇಕೆಂದೇ ಸುಸ್ತಿದಾರರಾಗುತ್ತಿದ್ದಾರೆ. ಇದೊಂದು ಕೆಟ್ಟ ಸಂಪ್ರದಾಯಕ್ಕೆ ನಾಂದಿ ಹಾಡಿದಂತಾಗುತ್ತದೆ. ಆದರೆ ಕೆಲವು ಪ್ರಾಮಾಣಿಕ ರೈತರು ಕೆಲವು ಕಂತುಗಳನ್ನು ಪಾವತಿಸಿದ ಬಳಿಕ ಇಂತಹ ಸಾಲ ಮನ್ನಾ ಕಾರ್ಯಕ್ರಮಗಳಿಂದ ತಾವು ಪ್ರಾಮಾಣಿಕರಾಗಿ ಸಾಲದ ಕಂತುಗಳನ್ನು ಕಟ್ಟಿದ್ದಕ್ಕೆ ವ್ಯಥೆ ಪಟ್ಟುಕೊಂಡಿದ್ದಾರೆ. ಇದೊಂದು ಪ್ರಕರಣದ ಬಗ್ಗೆ ಆಲೋಚಿಸಬೇಕಾಗಿರುತ್ತದೆ ಮತ್ತು ಸೂಕ್ತ ಕ್ರಮ ತೆಗೆದುಕೊಳ್ಳಬೇಕಾಗಿರುತ್ತದೆ.

ದಾಖಲೆಗಳ ಪ್ರಕಾರ ಅಧ್ಯಯನಕ್ಕೆ ಆಯ್ದುಕೊಳ್ಳಲಾದ 133 ಜನ ಫಲಾನುಭವಿಗಳಿಗೆ ಅಧ್ಯಯನಕ್ಕೆ ಆಯ್ದುಕೊಂಡ ಅವಧಿಯಲ್ಲಿ ಬೇರೆ ಬೇರೆ ಸಮಯಗಳಲ್ಲಿ 182.53 ಲಕ್ಷ ರೂಪಾಯಿಗಳ ಸಾಲ ಮಂಜೂರು ಮಾಡಲಾಗಿದೆ. ಮೇಲಿಂದ ಮೇಲೆ ಬರ ಪರಸ್ಥಿತಿ ಉಂಟಾದ ಕಾರಣ ಹಾಗೂ ಬೆಳೆ ನಷ್ಟವುಂಟಾದ ಕಾರಣ ಕರ್ನಾಟಕ ಸರ್ಕಾರವು 2009–10 ರಿಂದ 2012–13ರ ಅವಧಿಯಲ್ಲಿ ಜಮೀನುಗಳ ಮೇಲಿನ ಸಾಲವನ್ನು ಮನ್ನಾ ಮಾಡಿದ ಕಾರಣ, ಸಾಲ ವಸೂಲಿಯಾಗಿರುವುದಿಲ್ಲ. ಆದರೂ ಸಹಾ 2 ಪ್ರಕರಣಗಳಲ್ಲಿ ಸಾಲವನ್ನು ಭಾಗಶಃ ಅಥವಾ ಪೂರ್ಣವಾಗಿ ಮರುಪಾವತಿಸಿದ ಪ್ರಕರಣಗಳು ವರದಿಯಾಗಿವೆ. ಕೊಡಗು ಜಿಲ್ಲೆಯಲ್ಲಿ ಒಬ್ಬ ಫಲಾನುಭವಿ ಮಾತ್ರ ಸಾಲವನ್ನು ಪೂರ್ಣವಾಗಿ ಮರುಪಾವತಿಸಿದ್ದಾಳೆ. ಹಾವೇರಿ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ಮೊದಲ ಕಂತನ್ನು ಕಟ್ಟಿದ್ದು ಉಳಿದದ್ದನ್ನು ಮನ್ನಾ ಮಾಡ'ಲಾಗಿದೆ. ಸಾಲ ಮನ್ನಾ ಮಾಡಿದ ಒಟ್ಟು ಮೊತ್ತ 120.501 ಲಕ್ಷ ರೂಗಳು.

2013–14 ರಲ್ಲಿ ಹಂಚಿಕೆ ಮಾಡಲಾದ ಜಮೀನುಗಳ ಪೈಕಿ ಒಬ್ಬ ಫಲಾನುಭವಿ ಮೊದಲ ಕಂತಾಗಿ 10,000/ ರೂಪಾಯಿಗಳನ್ನು ಮರುಪಾವತಿಸಿರುತ್ತಾಳೆ. ಫಲಾನುಭವಿಗಳನ್ನು ಸಾಲ ಮನ್ನಾ ಕಾರ್ಯಕ್ರಮದಲ್ಲಿ ಸೇರಿಸಿಕೊಂಡಿರುವುದಿಲ್ಲ. ಕಾರಣ ಆ ಕಾರ್ಯಕ್ರಮವು ನಿರ್ದಿಷ್ಟ ಅವಧಿಗೆ ಸೀಮಿತವಾಗಿರುತ್ತದೆ. ಅಂದರೆ ಯೋಜನೆ ಮಂಜೂರಾದಂದಿನಿಂದ 2012–13 ರವರೆಗೆ ಮಂಜೂರಾದ ಸಾಲಗಳನ್ನು ಮಾತ್ರ ಮನ್ನಾ ಮಾಡಲಾಗಿದೆ. ಸಾಲ ಮರುಪಾವತಿಯನ್ನು ಒಂದಲ್ಲಾ ಒಂದು ಕಾರಣಕ್ಕೆ, ಮುಖ್ಯವಾಗಿ ಸಾಲ ಮನ್ನಾ ನಿರೀಕ್ಷೆಯಲ್ಲಿ ಮಾಡಿರುವುದಿಲ್ಲ. ಇದರ ಮೊತ್ತ 62.50 ಲಕ್ಷ ರೂಗಳು ಅದ್ಯಯನದ ಸಮಯದಲ್ಲಿ ತಿಳಿದುಬಂದ ಸಂಗತಿ ಎಂದರೆ, ನಿಗಮವು ಸಾಲವನ್ನು ಕ್ರಮವಾಗಿ ಮರು ಪಾವತಿಸುವಂತೆ ನೋಟೀಸುಗಳನ್ನು ಫಲಾನುಭವಿಗಳಿಗೆ ಕಳುಹಿಸಿಕೊಟ್ಟಿರುತ್ತದೆ.

**ಕೋಷ್ಟಕ-20. ಫಲಾನುಭವಿಗಳಿಂದ ಸಾಲ ಮರುಪಾವತಿ ಸ್ಥಿತಿ.(ವಿವರಗಳು)**

| ಕ್ರಮ ಸಂಖ್ಯೆ. | ಜಿಲ್ಲೆ. | ಆರ್ಥಿಕ ವರ್ಷ. | ಆಯ್ಧ ಫಲಾನುಭವಿಗಳ ಸಂಖ್ಯೆ. | ಮರುಪಾವತಿಯ ಸ್ಥಿತಿ. | | | | | ಒಟ್ಟು ಸಾಲ ಬಾಕಿ ಲಕ್ಷಗಳಲ್ಲಿ . | ಷರಾ |
|---|---|---|---|---|---|---|---|---|---|---|
| | | | | ಮರುಪಾವತಿಸಿರುವವರು | ಇಲ್ಲದಿದ್ದರೆ ಕಾರಣಗಳು. | ಸಾಲ ಮನ್ನಾಕ್ಕೆ ಕಾಯುತ್ತಿರುವವರು. | ಎಷ್ಟು ಹಣ ಮನ್ನಾ ಮಾಡಲಾಗಿದೆ | ಯಾವಾಗ | | |
| 1 | ಬಾಗಲಕೋಟ | 2009-10<br>2013-14 | 2<br>1 | 10 | | | 0.0900 | 18/05/13. | -<br>2225 | 100 % |
| | | 2013-14 | 2 | | | | | | 4500 | |
| 2 | ಬೆಳಗಾವಿ. | 2010-11<br>2011-12<br>2013-14 | 1<br>3<br>1 | | | | 0.650<br>3.750 | 18/05/131<br>8/05/13 | 0.500 | |
| 3 | ಬೆಂಗಳೂರು (ಗ್ರಾ). | 2010-11 | 1 | | | | 1.250 | 18/05/13 | | ಜಮೀನನ್ನು ಹಸ್ತಾಂತರಿಸಿರುವುದಿಲ್ಲ. |
| 4 | ಬೀದರ್. | 2010-11 | 2 | | | | 1.280 | | | |
| 5 | ವಿಜಾಪುರ. | 2011-12 | | | | | 2.340 | 18/05/13 | | |
| 6 | ಚಾಮರಾಜನಗರ. | 2009-10<br>2010-11<br>2013-14 | 1<br><br>1<br>1 | | | | 0.407<br>0.250<br>- | | -<br>-<br>1.000 | |
| 7 | ಚಿಕ್ಕಮಗಳೂರು. | 2012-13 | 3 | | | | 1.950 | 18/05/13 | | |
| 8 | ಚಿಕ್ಕಬಳ್ಳಾಪುರ. | 2011-12<br>2010-11<br>2013-14 | 6<br>3<br>7 | | | | 7.500<br>3.750 | 18/05/13<br>18/05/13 | 17.500 | |
| 9 | ಚಿತ್ರದುರ್ಗ. | 2010-11<br>2012-13 | 3<br>2 | | | | 1.500<br>7.000 | 18/05/13<br>18/05/13 | | |
| 10 | ದಾವಣಗೆರೆ. | 2009-10<br>2013-14<br>2013-14 | 3<br>1<br>1 | | | | 1.125 | 18/05/13 | 1.95 | 1.599 |
| 11 | ಧಾರವಾಡ. | 2011-12 | 5 | | | | 7.500 | 18/05/13 | | |
| 12 | ದಕ್ಷಿಣ ಕನ್ನಡ. | 2012-13 | 2 | | | | 3.000 | 18/05/13 | | |
| 13 | ಗದಗ. | 2010-11<br>2012-13 | 1<br>4 | | | | 0.550<br>4.400 | 18/05/13<br>18/05/13 | | |
| 14 | ಗುಲಬರ್ಗಾ. | 2009-10<br>2010-11 | 2<br>4 | | | | 0.680<br>1.200 | 18/05/13<br>18/05/13 | | |
| 15 | ಕೊಡಗು. | 2009-10 | 1 | 0.75 | | | | | | ಪೂರ್ಣವಾಗಿ ಮರುಪಾವತಿಯಾಗಿದೆ |

| | | | | | | | | | | |
|---|---|---|---|---|---|---|---|---|---|---|
| 16 | ಕೋಲಾರ. | 2011–12<br>2012–13 | 5<br>9 | | | | 6.250<br>33.750 | 18/05/13<br>18/05/13 | | |
| 17 | ಕೊಪ್ಪಳ. | 2009–10<br>2009–10 | 3<br>1 | | | | 1.320<br>0500 | 18/05/13<br>18/05/13 | | |
| 18 | ಹಾಸನ. | 2009–10<br>2010–11 | 1<br>2 | | | | 0.700<br>1.250 | 18/05/13<br>18/05/13 | | |
| 19 | ಹಾವೇರಿ. | 2010–11<br>2013–14 | 1<br>1 | 0.06 | | | 0.66 | 18/05/13<br>18/05/13 | 1.095 | ಮೊದಲ ಕಂತು 6000 ತುಂಬಿದೆ. ಉಳಿದ ದ್ದು ಮನ್ನಾಆಗಿದೆ |
| 20 | ರಾಯಚೂ ರು. | 2010–11<br>2013–14<br>2009–10 | 17<br>14<br>4 | | | | 16.150<br>––<br>2.000 | 18/05/13<br>––<br>18/05/13 | ––<br>31.75<br>–– | |
| 21 | ಶಿವಮೊಗ್ಗ. | 2009–10<br>2010–11 | 1<br>1 | | | | 0.350<br>0.363 | 18/05/13<br>18/05/13 | | |
| 22 | ತುಮಕೂರು | 2009–10<br>2011–12 | | | | | 0.375<br>1.081 | 18/05/13<br>18/05/13 | | |
| 23 | ಉತ್ತರ ಕನ್ನಡ. | 2012–13 | 2 | | | | 2.520 | 18/05/13 | | |
| 24 | ಯಾದಗಿರಿ. | 2011–12<br>2012–13 | 1<br>2 | | | | 0.410<br>1.840 | 18/05/13<br>18/05/13 | | |
| | ಒಟ್ಟು. | | 133 | 0.91 | | | 120.501 | | 61.119 | |

### 6.23 ಹಂಚಿಕೆಯಾದ ಭೂಮಿಯನ್ನು ಗುತ್ತಿಗೆಗೆ ನೀಡುವುದು.

ಹಂಚಿಕೆಯಾದ ಭೂಮಿಯನ್ನು ಗುತ್ತಿಗೆಗೆ ನೀಡಿರುವುದು ಕೋಲಾರ ಮತ್ತು ಹಾಸನ ಜಿಲ್ಲೆಗಳಲ್ಲಿ ವರದಿಯಾಗಿದೆ. ಕೋಲಾರ ಜಿಲ್ಲೆಯಲ್ಲಿ 6 ಫಲಾನುಭವಿಗಳು ಹಾಸನ ಜಿಲ್ಲೆಯಲ್ಲಿ ಒಬ್ಬರು ತಮಗೆ ಹಂಚಿಕೆಯಾದ ಭೂಮಿಯನ್ನು ತಮ್ಮ ಪಕ್ಕದ ರೈತರಿಗೆ ಗುತ್ತಿಗೆಗೆ ನೀಡಿರುತ್ತಾರೆ. ಗುತ್ತಿಗೆಯಿಂದ ಬಂದ ಹಣದಿಂದ ಕುರಿಗಳನ್ನು, ಹಾಲು ಕೊಡುವ ಹಸುಗಳನ್ನು ಖರೀದಿಸಿರುತ್ತಾರೆ. ಉಳಿದ 22 ಜಿಲ್ಲೆಗಳಲ್ಲಿ ಹಂಚಿಕೆದಾರರು ಸ್ವತಃ ವ್ಯವಸಾಯವನ್ನು ಮಾಡಿಕೊಂಡಿರುತ್ತಾರೆ.

### 6.24 ಜಮೀನಿನ ಭೌತಿಕ ಒಡೆತನ.

ಭೂಮಿ ಹಂಚಿಕೆ ಯೋಜನೆಯು ಮುಖ್ಯವಾಗಿ ಖರೀದಿಸಿದ ಭೂಮಿಯನ್ನು ಆಯ್ದ ಫಲಾನುಭವಿಗೆ ಎಲ್ಲ ಷರತ್ತುಗಳನ್ನು ಪೂರೈಸಿದ ಬಳಿಕ ಹಸ್ತಾಂತರಿಸುವುದಾಗಿರುತ್ತದೆ. ಭೂಮಿಯನ್ನು ಖರೀದಿ ಪತ್ರ ನೋಂದಣೆ ಮಾಡಿದ ಕೂಡಲೇ ಫಲಾನುಭವಿಗೆ ಹಸ್ತಾಂತರಿಸಬೇಕಾಗಿರುತ್ತದೆ. ಹಾಗಾದರೂ ಬೆಂಗಳೂರು ಮತ್ತು ಕೋಲಾರ ಜಿಲ್ಲೆಗಳಲ್ಲಿ ಒಂದಲ್ಲಾ ಒಂದು ಕಾರಣದಿಂದ ಹಸ್ತಾಂತರಿಸಿರುವುದಿಲ್ಲ. ಶ್ರೀನಿವಾಸಪುರ ತಾಲೂಕಿನ ಕರಿಪಲ್ಲಿ ಎಂಬ ಊರಿನಲ್ಲಿ

2013–14ರಲ್ಲಿ ಖರೀದಿಸಿದ ಮಾವಿನ ಮರಗಳಿರುವ ಜಮೀನನ್ನು 9 ಮಂದಿ ಫಲಾನುಭವಿಗಳಿಗೆ ಇನ್ನೂ ಹಸ್ತಾಂತರಿಸಿರುವುದಿಲ್ಲ. ಅದೇ ರೀತಿ ದೊಡ್ಡಬಳ್ಳಾಪುರ ತಾಲೂಕಿನ ಮಲ್ಲಸಂದ್ರದಲ್ಲಿ ಹಂಚಿಕೆಯಾದ ಭೂಮಿಯನ್ನು ಫಲಾನುಭವಿಗೆ ಹಸ್ತಾಂತರಿಸಿರುವುದಿಲ್ಲ.

**6.25 ಯೋಜನೆಯ ನಂತರದ ಪರಿಣಾಮಗಳು.**

ಯೋಜನೆಯ ಅನುಷ್ಠಾನದ ತರುವಾಯ ಕುಟುಂಬಗಳ ಮೇಲೆ ಉಂಟಾದ ಆರ್ಥಿಕ ಪರಿಣಾಮಗಳನ್ನು ತಿಳಿಯಲು ಪ್ರಯತ್ನಿಸಲಾಯಿತು. ಫಲಾನುಭವಿಗಳ ನೆನಪಿನಿಂದ ತಿಳಿಸಿದ ಸಂಗತಿಗಳಿಂದ ಮತ್ತು ಪಾಟೀ ಸವಾಲುಗಳ ಮೂಲಕ ಮಾಹಿತಿಯನ್ನು ಹೊರಗೆಳೆದು ವರದಿಯಲ್ಲಿ ಉಪಯೋಗಿಸಿಕೊಳ್ಳಲಾಯಿತು.

**ಬೆಳೆ ಪದ್ದತಿ.**

ಹೆಚ್ಚಿನ ಫಲಾನುಭವಿಗಳು ನೀರಿನ ಲಭ್ಯತೆ ಮತ್ತು ಮಾರುಕಟ್ಟೆಯಲ್ಲಿನ ಬೆಲೆಗಳನ್ನು ಅನುಸರಿಸಿ ಬೆಳೆಗಳ ಆಯ್ಕೆ ಮತ್ತು ಬೆಳೆ ಪರಿವರ್ತನೆ ಅನುಸರಿಸುತ್ತಿರುವುದಾಗಿ ತಿಳಿಸಿದರು. ಆಹಾರ ಧಾನ್ಯಗಳ ಪೈಕಿ 46 ಪ್ರಕರಣಗಳಲ್ಲಿ (33%) ಜೋಳ ಮತ್ತು ದ್ವಿದಳ ಧಾನ್ಯಗಳನ್ನು, 16 ಪ್ರಕರಣಗಳಲ್ಲಿ ಭತ್ತವನ್ನು ಬೆಳೆದಿದ್ದು ವಾಣಿಜ್ಯ ಬೆಳೆಗಳ ಪೈಕಿ 37 (33%) ಫಲಾನುಭವಿಗಳು ಹೆಚ್ಚಾಗಿ ಹತ್ತಿಯನ್ನು ಬೆಳೆದಿದ್ದರು. 20 ಜನ ಫಲಾನುಭವಿಗಳು ತೋಟಗಾರಿಕೆ ಬೆಳೆಗಳಾದ ಅಂದರೆ ಹಣ್ಣುಗಳು, ತರಕಾರಿಗಳು, ಮತ್ತು ಹೂವುಗಳನ್ನು ಬೆಳೆದಿದ್ದಾರೆ. ಸಣ್ಣ ಪ್ರಮಾಣದಲ್ಲಿ ಕಬ್ಬು, ಕಾಫಿ, ಅಡಿಕೆ, ಮತ್ತು ಮೆಣಸಿನಕಾಯಿ ಬೆಳೆಗಳನ್ನು ಬೆಳೆದಿರುತ್ತಾರೆ. ವಿವರಗಳು ಈ ಕೆಳಗಿನ ಕೋಷ್ಟಕದಲ್ಲಿನಂತಿವೆ.

**ಕೋಷ್ಟಕ–21. ಹಂಚಿಕೆಯಾದ ಜಮೀನುಗಳಲ್ಲಿ ಬೆಳೆಸಿದ ಬೆಳೆಗಳ ವಿವರ.**

| ಕ್ರಮ ಸಂಖ್ಯೆ. | ಬೇಲೆಯ ಹೆಸರು. | ಬೆಳೆಸಿದ ಫಲಾನುಭವಿಗಳು. | ಶೇಕಡಾವಾರು. |
|---|---|---|---|
| | **ಆಹಾರ ಧಾನ್ಯಗಳು.** | | |
| 1 | ಜೋಳ + ಕಡಲೆ. | 12 | 9 |
| 2 | ಗೋಧಿ ಅಥವಾ ಜೋಳ. | 2 | 1 |
| 3 | ಜೋಳ ಮಾತ್ರ. | 19 | 14 |
| 4 | ತೊಗರಿ+ಹೆಸರು/ಜೋಳ. | 7 | 5 |
| 5 | ಭತ್ತ+ ಶುಂಠಿ. | 16 | 12 |
| 6 | ಸೂರ್ಯಕಾಂತಿ , ಜೋಳ. | 5 | 4 |
| 7 | ಶೇಂಗಾ (ನೆಲಗಡಲೆ), ಎಳ್ಳು. | 2 | 2 |
| 8 | ತೊಗರಿ/ಸೋಯಾ ಅವರೆ | 2 | 2 |

**ವಾಣಿಜ್ಯ ಬೆಳೆಗಳು.**

| | | | |
|---|---|---|---|
| 1 | ಕಬ್ಬು, | 3 | 1 |
| 2 | ಹತ್ತಿ. | 17 | 13 |
| 3 | ಹತ್ತಿ ಮತ್ತು ಮೆಕ್ಕೆಜೋಳ. | 20 | 15 |
| 4 | ಕಾಫಿ, | 1 | 1 |
| 5 | ಅಡಿಕೆ, + ಬಾಳೆ. | 4 | 3 |
| 6 | ಮೆಣಸಿನಕಾಯಿ/ಹತ್ತಿ. | 5 | 4 |
| 7 | ಮಾವು. | 9 | 7 |
| 8 | ದಾಳಿಂಬೆ. | 1 | 1 |
| 9 | **ತರಕಾರಿಗಳು** | 5 | 4 |
| 10 | ಹೂವು/ ಮೆಣಸಿನಕಾಯಿ. | 1 | 1 |
| III | ಬೀಳು ಜಮೀನು. | 2 | 1 |
| | ಒಟ್ಟು | 133 | 100 |

**ಪೂರಕ ವೃತ್ತಿ**

ಮುಖ್ಯ ಕಸುಬಾದ ಕೃಷಿ ಜೊತೆಗೆ ಫಲಾನುಭವಿಗಳ ಕುಟುಂಬದ ಸದಸ್ಯರು ಕುಟುಂಬದ ಆದಾಯ ಹೆಚ್ಚಿಸಬಲ್ಲ ಪೂರಕ ವೃತ್ತಿಗಳಲ್ಲಿ ತೊಡಗಿರುವುದು ಕಂಡು ಬಂತು. ಕೆಲವು ಫಲಾನುಭವಿಗಳ ಗಂಡಂದಿರು ಹಸು ಸಾಕಣೆ, ಬಟ್ಟೆ ಹೊಲಿಯುವುದು ಮತ್ತಿತರ ಕಸಬುಗಳಲ್ಲಿ ತೊಡಗಿದ್ದು ಹೆಚ್ಚಿನ ಸಂಪಾದನೆಯನ್ನು ಮಾಡುತ್ತಿರುವುದು ಕಂಡು ಬಂದಿದೆ.

**ಕೋಷ್ಟಕ– 22. ಪೂರಕ ವೃತ್ತಿ ಗಳ ವಿವರಗಳು.**

| ಕ್ರ.ಸಂ. | ಒಟ್ಟು ಮಾದರಿಗಳು. | ಹೈನುಗಾರಿಕೆ ಸಂಖ್ಯೆ. | % | ಕುರಿಸಾಕಣೆ ಸಂಖ್ಯೆ. | % | ಬಟ್ಟೆ ಹೊಲಿಯುವುದು ಸಂಖ್ಯೆ. | % | ಸೇವೆಗಳು. ಸಂಖ್ಯೆ. | % | ಆಟೋ. ಸಂಖ್ಯೆ. | % |
|---|---|---|---|---|---|---|---|---|---|---|---|
| 1 | 133 | 2 | 1 | 2 | 1 | 2 | 1 | 3 | 2 | 1 | 1 |

**ಆದಾಯ ವೃಧ್ಧಿ**

ಅಧ್ಯಯನವು ಭೂಮಿ ಹಂಚಿಕೆಯಾದ ಬಳಿಕ ಮೇಲಾದಾಯದಲ್ಲಿ ಆದ ನಿವ್ವಳ ಹೆಚ್ಚಳವನ್ನು ತುಲನೆ ಮಾಡುವುದಾಗಿತ್ತು. ಮೇಲಾದಾಯದ ಅಂದಾಜು, ಜಮೀನು ಹಂಚಿಕೆ ಮಾಡುವ ಮೊದಲು ಮತ್ತು ಆನಂತರ ಆದ ಬದಲಾವಣೆ ಬಗ್ಗೆ ಫಲಾನುಭವಿಗಳು ತಿಳಿಸಿದ ಮಾಹಿತಿಯನ್ನು ಆಧರಿಸಿದ್ದಾಗಿತ್ತು. ಜಿಲ್ಲೆ ಜಿಲ್ಲೆಗಳಲ್ಲಿ ಫಲಾನುಭವಿಗಳು ಅನುಸರಿಸಿದ ಬೆಳೆ ಪದ್ದತಿಯ ಪ್ರಕಾರ ಬಹಳ ವ್ಯತ್ಯಾಸ ಕಂಡುಬಂದಿತು.

**ಕೋಷ್ಟಕ–23. ಭೂಮಿ ಹಂಚಿಕೆ ಬಳಿಕ ಬಂದ ಸರಾಸರಿ ಮೇಲಾದಾಯ ವಿವರಗಳು.**

| ಜಿಲ್ಲೆ. | ಫಲಾನುಭವಿಗಳು. | ಹಂಚಿಕೆಗೆ ಮೊದಲು ಒಟ್ಟು ಆದಾಯ. ರೂ. ಲಕ್ಷಗಳಲ್ಲಿ. | ಹಂಚಿಕೆಯ ನಂತರ ಒಟ್ಟು ಆದಾಯ . ರೂ. ಲಕ್ಷಗಳಲ್ಲಿ. | ಮೇಲಾದಾಯ. ಲಕ್ಷ ರೂಪಾಯಿಗಳಲ್ಲಿ | ಸರಾಸರಿ ತಲಾದಾಯ. ರೂಗಳಲ್ಲಿ. |
|---|---|---|---|---|---|
| ಬಾಗಲಕೋಟೆ. | 5 | 6.18 | 8.20 | 2.02 | 40,400 |
| ಬೆಳಗಾವಿ. | 5 | 2.30 | 4.30 | 2.00 | 40,000 |
| ಬೆಂಗಳೂರು.(ಗ್ರಾ). | 1 | 1.40 | 1.40 | – | – |
| ಬೀದರ್. | 2 | 0.76 | 1.12 | 0.36 | 18,000 |
| ವಿಜಾಪುರ. | 2 | 1.08 | 1.31 | 0.23 | 11,500 |
| ಚಾಮ ರಾಜನಗರ. | 3 | 0.72 | 1.08 | 0.36 | 12,000 |
| ಚಿಕ್ಕಮಗಳೂರು. | 3 | 1.33 | 1.56 | 0.23 | 7,667 |
| ಚಿಕ್ಕಬಳ್ಳಾಪುರ. | 16 | 6.56 | 9.90 | 3.34 | 20.875 |
| ಚಿತ್ರದುರ್ಗ. | 5 | 1.76 | 2.79 | 1.03 | 20,600 |
| ದಾವಣಗೆರೆ. | 5 | 2.28 | 3.13 | 0.85 | 17,000 |
| ಧಾರವಾಡ. | 5 | 4.05 | 5.07 | 1.02 | 20.400 |
| ದಕ್ಷಿಣ ಕನ್ನಡ. | 2 | 1.56 | 2.06 | 0.50 | 25,000 |
| ಗದಗ. | 5 | 2.41 | 3.06 | 0.64 | 13,000 |
| ಗುಲಬರ್ಗಾ. | 6 | 3.30 | 5.50 | 2.20 | 36,667 |
| ಕೊಡಗು. | 1 | 0.60 | 0.90 | 0.30 | 30,000 |
| ಕೋಲಾರ. | 5<br>9 | 1.80<br>– | 2.00<br>– | 0.25<br>– | 5,000<br>– |
| ಕೊಪ್ಪಳ. | 4 | 0.76 | 1.44 | 0.68 | 17,000 |
| ಹಾಸನ. | 3 | 1.03 | 1.63 | 0.63 | 20,000 |
| ಹಾವೇರಿ. | 2 | 2.45 | 3.08 | 0.63 | 31,600 |
| ರಾಯಚೂರು. | 35 | 12.20 | 16.82 | 4.54 | 12.970 |
| ಶಿವಮೊಗ್ಗ. | 2 | 0.93 | 1.68 | 0.75 | 37,500 |
| ತುಮಕೂರು. | 2 | 1.10 | 3.10 | 2.00 | 1,00,000 |
| ಉತ್ತರ ಕನ್ನಡ. | 2 | 2.25 | 4.50 | 2.25 | 1,12,500 |
| ಯಾದಗಿರಿ. | 3 | 1.54 | 2.91 | 1.37 | 45,667 |
| ಒಟ್ಟು. | 133 | 63.59 | 91.86 | 28.52 | 23,187* |
| • 123 ಫಲಾನುಭವಿಗಳ ಸರಾಸರಿ ಮೇಲಾದಾಯ. | | | | | |

ಫಲಾನುಭವಿಗಳ ಆದಾಯದಲ್ಲಿ ಆದ ಮೇಲಾದಾಯದ ಹಂತಗಳಲ್ಲಿ ರೂ. 5000 ದಿಂದ ರೂ 1,12,500/ ವ್ಯತ್ಯಾಸ ಕಂಡುಬಂತು. ಕೆಳಗಿನ ಕೋಷ್ಟಕದಲ್ಲಿ ವಿವರಗಳನ್ನು ಕೊಟ್ಟಿದೆ.

**ಕೋಷ್ಟಕ–24. ಮೇಲಾದಾಯ.**

| ಶ್ರೇಣಿ (ರೂ). | ಫಲಾನುಭವಿಗಳು. | ಜಿಲ್ಲೆಗಳು. | % |
|---|---|---|---|
| 0–5000 | 10 | ಬೆಂಗಳೂರು, ಕೋಲಾರ. | 7.52 |
| 5000–10,000 | 08 | ಚಿಕ್ಕಮಗಳೂರು, ಕೋಲಾರ. | 6.02 |

| | | | |
|---|---|---|---|
| 10,000–25,000 | 87 | ಬೀದರ್, ವಿಜಾಪುರ, ಚಾಮರಾಜನಗರ. ಚಿತ್ರದುರ್ಗ, ಧಾರವಾಡ. ಗದಗ, ದಕ್ಷಿಣ ಕನ್ನಡ, ದಾವಣಗೆರೆ. ಹಾಸನ, ಕೊಪ್ಪಳ, ಮತ್ತು ರಾಯಚೂರು. | 65.41 |
| 25,000–50,000 | 24 | ಬಾಗಲಕೋಟೆ. ಬೆಳಗಾವಿ, ಗುಲಬುರ್ಗಾ. ಕೊಡಗು, ಶಿವಮೊಗ್ಗ, ಯಾದಗಿರಿ, ಹಾವೇರಿ | 18.05 |
| 50,000–100000 | 02 | ತುಮಕೂರು. | 1.50 |
| >100000 | 02 | ಉತ್ತರ ಕನ್ನಡ. | 1.50 |

**ಕೋಷ್ಟಕ– 25 ವರ್ಗವಾರು ಗುಂಪುಗಳ ಮೇಲಾದಾಯ.**

| ಕ್ರ.ಸಂ. | ಫಲಾನುಭವಿಗಳು. | ಭೂಮಿ ಹಂಚಿಕೆ ಬಳಿಕ ಬಂದ ಒಟ್ಟು ಆದಾಯ.ಲಕ್ಷಗಳಲ್ಲಿ. | ಸರಾಸರಿ ವಾರ್ಷಿಕ ಆದಾಯದ ಗುಂಪುಗಳು(ಲಕ್ಷಗಳಲ್ಲಿ) | | | | | | | |
|---|---|---|---|---|---|---|---|---|---|---|
| | | | ಶೂನ್ಯ * | | 0.01–0.40 | | 0.40–0.80 | | 0.80–1.2 | |
| | | | ಸಂ. | % | ಸಂ. | % | ಸಂ. | % | ಸಂ. | % |
| 1 | 133 | 78.61 | 10 | 7 | 106 | 80 | 13 | 10 | 4 | 3 |

* ಭೂಮಿ ಹಸ್ತಾಂತರಿಸಿಲ್ಲ ಆದ್ದರಿಂದ ಆದಾಯವಿಲ್ಲ.

<u>ಭಾರಿ ಗಾತ್ರದಲ್ಲಿ (ದೊಡ್ಡ ಮಟ್ಟದಲ್ಲಿ) ಪರಿಣಾಮ</u>

ಕಾರ್ಯಕ್ರಮದ ಬಗ್ಗೆ ಫಲಾನುಭವಿಗಳ ಸರ್ವೇಯಿಂದ ತಿಳಿದುಬಂದ ಮಾಹಿತಿಯನ್ನು ಉಪಯೋಗಿಸಿಕೊಂಡು ದೊಡ್ಡ ಪ್ರಮಾಣದ ಮಟ್ಟದಲ್ಲಿ ಎಲ್ಲ ಫಲಾನುಭವಿಗಳಿಗೆ ಅಗಿರಬಹುದಾದ ಪರಿಣಾಮವನ್ನು ಊಹಿಸಬಹುದು. 24 ಜಿಲ್ಲೆಗಳಲ್ಲಿ ಮೂರು ಬಗೆಯ 1)ಖುಷ್ಕಿ 2) ನೀರಾವರಿ, ಮತ್ತು 3) ತೋಟ, ಜಮೀನುಗಳಿಂದ ಬಂದ ಆದಾಯವನ್ನು ಅಂದಾಜಿಸಲು ಪ್ರಯತ್ನಿಸಲಾಗಿದೆ. ಸರಾಸರಿ ಆದಾಯವನ್ನು ಲೆಕ್ಕ ಹಾಕಿ ಅನುಬಂಧ–8 ರಲ್ಲಿ ಕೊಟ್ಟಿದೆ.

ಖುಷ್ಕಿ ಜಮೀನುಗಳಲ್ಲಿ ವಿವಿಧ ಜಿಲ್ಲೆಗಳಲ್ಲಿ ನಿರ್ದಿಷ್ಟ ವಿಸ್ತೀರ್ಣಕ್ಕೆ ನಿರ್ದಿಷ್ಟ ಆದಾಯ ಬಾರದಿರುವುದು ಕಂಡುಬಂದಿದೆ. ತುಮಕೂರು ಜಿಲ್ಲೆಯಲ್ಲಿ ಫಲಾನುಭವಿಗಳಿಗೆ ಅದೇ ವರ್ಗದ ಜಮೀನುಗಳಿಂದ ಅತಿ ಹೆಚ್ಚು ಅಂದರೆ 1,00,000/ ರೂಪಾಯಿಗಳ ಆದಾಯ ಬಂದಿದ್ದು, ಯಾದಗಿರಿಯಲ್ಲಿ 45,700/ ಶಿವಮೊಗ್ಗದಲ್ಲಿ 35,000/ ಬಂದಿರುತ್ತದೆ. ಕೋಲಾರ, ರೂ.5000/ ಚಾಮರಾಜನಗರ ರೂ.6000/ ಮತ್ತು ಹಾಸನದಲ್ಲಿ 10,000/ ಆಧಾಯ ಬಂದಿರುತ್ತದೆ. ಈ ವ್ಯತ್ಯಾಸಗಳು ಆ ಪ್ರದೇಶಗಳಲ್ಲಿ ಬೀಳುವ ಮಳೆ ಮತ್ತು ಬೆಳೆ ಪದ್ಧತಿಗಳಿಂದಾಗಿರುತ್ತವೆ.

ಎರಡನೇ ವರ್ಗ ಎಂದರೆ ನೀರಾವರಿ ಜಮೀನುಗಳಲ್ಲಿ ನಿರ್ದಿಷ್ಟ ವಿಸ್ತೀರ್ಣಕ್ಕೆ ಒಟ್ಟಾರೆ ಮೇಲಾದಾಯ ರೂ.18,100/ ರೂಪಾಯಿಗಳು ಎಂದು ತಿಳಿದುಬಂದಿದೆ. ಫಲಾನುಭವಿಯೊಬ್ಬರಿಗೆ ಈ ಆದಾಯವು ಖುಷ್ಕಿ ಜಮೀನಿನ ಆದಾಯಕ್ಕಿಂತ ಕಡಿಮೆಯಿರುವುದು, ಕಾರಣ ನಿರಾವರಿ ಜಮೀನನಲ್ಲಿ ಕೃಷಿ ಮಾಡಿದ ವಿಸ್ತೀರ್ಣವು ಕೇವಲ 1 ಎಕರೆ ಮಾತ್ರ. ಎಕರೆ

ಆದಾಯವನ್ನು ಪರಿಗಣಿಸಿದರೆ ನೀರಾವರಿ ಜಮೀನಿನ ಆದಾಯವು ಹೆಚ್ಚು ಕಡಿಮೆ ಎರಡರಷ್ಟಿರುತ್ತದೆ. ಜಿಲ್ಲೆಗಳ ಪೈಕಿ ಬಾಗಲಕೋಟೆ ಜಿಲ್ಲೆಯಲ್ಲಿ ಮೇಲಾದಾಯವು ರೂ.90,000/ ರೂಪಾಯಿಗಳಿದ್ದು ಶಿವಮೊಗ್ಗದಲ್ಲಿ ರೂ.59,000/ ಬೆಳಗಾವಿಯಲ್ಲಿ ರೂ.55,000/ ದಾವಣಗೆರೆ ರೂ.49,000/ ಧಾರವಾಡದಲ್ಲಿ ರೂ.40,000/ ಬಂದಿರುತ್ತದೆ. ಈ ವರ್ಗದಲ್ಲಿಯೂ ಸಹಾ ವ್ಯತ್ಯಾಸಗಳು ಕಂಡುಬಂದಿದ್ದು ಚಿಕ್ಕಮಗಳೂರು, ರಾಯಚೂರು, ಮತ್ತು ವಿಜಾಪುರ ಜಿಲ್ಲೆಗಳಲ್ಲಿ ಮೇಲಾದಾಯವು ರೂ.10,000/ ದಿಂದ ರೂ.15,000/ ವರದಿಯಾಗಿದೆ. ವ್ಯತ್ಯಾಸವು ನೀರಾವರಿಯಲ್ಲಿ ಕೊರತೆ, ಮಳೆ ಅಭಾವ ಮತ್ತು ವಿವಿಧ ಬೆಳೆ ಪದ್ದತಿಗಳನ್ನು ಅನುಸರಿಸಿರುವುದರಿಂದ ಉಂಟಾಗಿರುತ್ತದೆ.

ಮೂರನೇ ವರ್ಗದ ಜಮೀನುಗಳಲ್ಲಿ ಅದೇ ರೀತಿಯ ವ್ಯತ್ಯಾಸಗಳು ಕಂಡುಬಂದಿದ್ದು ಸರಾಸರಿ ನಿರ್ದಿಷ್ಟ ವಿಸ್ತೀರ್ಣಕ್ಕೆ ಸರಾಸರಿ ರೂ.68,100/ ಬಂದಿದ್ದು ಅತಿ ಹೆಚ್ಚಿನ ಆದಾಯ ಉತ್ತರ ಕನ್ನಡ ಜಿಲ್ಲೆಯಲ್ಲಿ ರೂ. 1,12,500/ ಚಿಕ್ಕಮಗಳೂರಿನಲ್ಲಿ ರೂ.90,000/ ಕೋಲಾರದಲ್ಲಿ ರೂ.72,000/ ವಿಜಾಪುರದಲ್ಲಿ ರೂ.58,000/ ಬಾಗಲಕೋಟೆಯಲ್ಲಿ ರೂ.65,000/ ಬಂದಿರುತ್ತದೆ.

955 ಫಲಾನುಭವಿಗಳಿಂದ ಪಡೆಯಲಾದ ಸಂಪತ್ತು (ಜಮೀನು ಹಕ್ಕು ದೊರೆಯದ 10 ಜನರನ್ನು ಹೊರತು ಪಡಿಸಿ) ವರ್ಷಕ್ಕೆ 2018 ಕೋಟಿಗಳಷ್ಟಾಗಿದ್ದು ಸರಾಸರಿ ರೂ.21,232 ರೂಪಾಯಿಗಳು.

**ಮಹಿಳೆಯ ಸ್ಥಾನ ಮಾನದಲ್ಲಿ ಬದಲಾವಣೆ.**

ಒಂದು ಕುಟುಂಬದಲ್ಲಿ ಒಬ್ಬ ಮಹಿಳೆಯ ಸ್ಥಾನ ಮಾನವು ಆಕೆ ತೆಗೆದುಕೊಳ್ಳುವ ತೀರ್ಮಾನಗಳು ಮತ್ತು ಆಕೆ ಚಲಾಯಿಸುವ ಅಧಿಕಾರದ ಮೇಲೆ ಅವಲಂಬಿತವಾಗಿರುತ್ತವೆ. ಫಲಾನುಭವಿಗಳ ಜೊತೆ ಪರಸ್ಪರ ಚರ್ಚೆ ನಡೆಸಿದ ಪರಿಣಾಮ, ಭೂಮಿ ದೊರೆತ ಬಳಿಕ ಅವರ ಸ್ಥಾನಮಾನವು ಹೆಚ್ಚಾಗಿರುವುದನ್ನು ಗುರುತಿಸಲಾಯಿತು. 119 ಫಲಾನುಭವಿಗಳು ಹೆಚ್ಚು ಕಡಿಮೆ ಎಲ್ಲ ವಿಷಯಗಳಲ್ಲಿ ಕುಟುಂಬದ ಸದಸ್ಯರು ತಮ್ಮ ಅಭಿಪ್ರಾಯಗಳನ್ನು, ದೃಷ್ಟಿಕೋನಗಳನ್ನು/ ತೀರ್ಮಾನಗಳನ್ನು ಗೌರವಿಸುವುದಾಗಿ ತಿಳಿಸಿದರು, ಅದರಲ್ಲಿ 13 ಜನ ಫಲಾನುಭವಿಗಳು ತೀರ್ಮಾನಗಳನ್ನು ತೆಗೆದುಕೊಳ್ಳುವ ಸ್ವತಂತ್ರವಿರುವುದಾಗಿ ತಿಳಿಸಿದರು. ತೀರ್ಮಾನಗಳ ಬಗ್ಗೆ ವಿಷಯಗಳು, ಜಮೀನು, ಹಣಕಾಸು, ಮಕ್ಕಳ ವಿದ್ಯಾಭ್ಯಾಸ, ಆರೋಗ್ಯ, ಮದುವೆ ಮುಂಜಿಗಳು, ಮತ್ತಿತರ ಮುಖ್ಯವಾದ ವಿಷಯಗಳನ್ನೊಳಗೊಂಡಿರುತ್ತವೆ. ಈ ಕೆಳಗಿನ ಕೋಷ್ಟಕವು ಮಹಿಳೆಯರ ಸ್ಥಾನ ಉನ್ನತಕ್ಕೇರಿದ್ದರ ಬಗ್ಗೆ ಮಾಹಿತಿಯನ್ನು ತೋರಿಸುತ್ತದೆ.

**ಕೋಷ್ಟಕ-26 ಜಮೀನು ದೊರೆತ ಬಳಿಕ ಮಹಿಳೆಯರ ಸ್ಥಾನ ಮಾನ, ಮತ್ತು ಅವರ ಪಾತ್ರಗಳಲ್ಲಿ ಆದ ಬದಲಾವಣೆ.**

| ಕ್ರ.ಸಂ. | ಮಾದರಿಗಳ ಸಂ. | ಅನೇಕ ಘಟನೆಗಳಲ್ಲಿ ಹೇಳಿಕೆ. | ಸ್ವತಂತ್ರ ತೀರ್ಮಾನ. | ಹೌದೆಂದಾದರೆ ಘಟನೆ/ವಿಷಯಗಳ ವಿವರಗಳು. | | | | |
|---|---|---|---|---|---|---|---|---|
| | | | | ಜಮೀನು ಸಂಬಂಧ | ಆರ್ಥಿಕ ಸಂಬಂಧ. | ವಿದ್ಯಾಭ್ಯಾಸ, ಆರೋಗ್ಯ. | ಮದುವೆ | ಇತರೆ. |
| 1 | 133 | 119 | 13 | 119 | 119 | 119 | 119 | 119 |

ಭೂಮಿ ಹಂಚಿಕೆಯಾದ ಬಳಿಕ ಗಳಿಸಿದ ಆಸ್ತಿಗಳು

ಎಲ್ಲ 133 ಫಲಾನುಭವಿಗಳು ಹಣ ಉಳಿತಾಯ ಮಾಡಿರುವುದು ಕಂಡುಬಂತು, ಮತ್ತು ಉಳಿಸಿದ ಹಣವನ್ನು ಒಂದಲ್ಲಾ ಒಂದು ಚರ ಮತ್ತು ಸ್ಥಿರ ಆಸ್ತಿ ಖರೀದಿಗೆ ಬಳಸಿಕೊಂಡಿರುತ್ತಾರೆ. ಎಲ್ಲ ಫಲಾನುಭವಿಗಳು ಚರ ಸ್ವತ್ತುಗಳಾದ ಟಿ.ವಿ ಗಳನ್ನು ಖರೀದಿಸಿದ್ದರು, ಅವರಲ್ಲಿ 120 ಜನ ತಮಗೆ ಅಥವಾ ತಮ್ಮ ಕುಟುಂಬದವರಿಗಾಗಿ ದ್ವಿಚಕ್ರ ವಾಹನಗಳನ್ನು ಖರೀದಿಸಿದ್ದರು. 9 ಜನ ಬೈಸಿಕಲ್‌ಗಳನ್ನು, ಒಬ್ಬರು ಆಟೋ ರಿಕ್ಷಾವನ್ನು ಖರೀದಿಸಿ ಬಾಡಿಗೆಗೆ ಓಡಿಸಿ ನಿರಂತರವಾಗಿ ಮೇಲು ಸಂಪಾದನೆ ಮಾಡಿಕೊಳ್ಳುತ್ತಿದ್ದರು.

ಚರ ಸ್ವತ್ತುಗಳಲ್ಲದೇ ಅವರೆಲ್ಲರೂ ಮೇಲಾದಾಯವನ್ನು ಸ್ಥಿರ ಸ್ವತ್ತುಗಳ ಖರೀದಿಗೂ ಉಪಯೋಗಿಸಿಕೊಂಡಿದ್ದರು. 71 ಜನ ಅರೆ ಪಕ್ಕಾ ಮನೆಗಳನ್ನು ನಿರ್ಮಿಸಿಕೊಂಡಿದ್ದರು, 52 ಜನ ತಮ್ಮ ಮನೆಗಳಿಗೆ ರಿಪೇರಿ ಮತ್ತು ನವೀಕರಣ ಮಾಡಿಸಿಕೊಂಡಿದ್ದರು.

**ಕೋಷ್ಟಕ–27. ಭೂಮಿ ಹಂಚಿಕೆಯಾದ ಬಳಿಕ ಗಳಿಸಿದ ಆಸ್ತಿಗಳು**

| ಕ್ರ. ಸಂ. | ಒಟ್ಟು ಮಾದರಿ. | ಚರ ಆಸ್ತಿಗಳು. | | | | | ಸ್ಥಿರ ಸ್ವತ್ತುಗಳು. | | | | | |
|---|---|---|---|---|---|---|---|---|---|---|---|---|
| | | ಟಿವಿ. | ದ್ವಿಚಕ್ರ. ವಾಹನ. | ಆಟೋ | ಬೈಸಿಕಲ್ | ಕೃಷಿ ಉಪಕರಣಗಳು. | ಪಕ್ಕಾ ಮನೆ ಸಂ. | % | ಅರೆ ಪಕ್ಕಾ ಮನೆ ಸಂ. | % | ಹಳೆ ಮನೆ ಸಂ. | % |
| 1 | 133 | 133 | 120 | 1 | 9 | 13 | 10 | 8% | 71 | 53% | 52 | 39 |

**ಕುಟುಂಬದ ಸದಸ್ಯರ ಮನೋಭಾವನೆ.**

ಇಲ್ಲಿಯವರೆಗೆ ಫಲಾನುಭವಿಗಳ ಕಡೆ ಕೊಡುತ್ತಿದ್ದ ತಿರಸ್ಕೃತ ದೃಷ್ಟಿ ಬದಲಾಗಿದ್ದು 93% ಜನ ತಮ್ಮೊಳಗೆ ಆದ ಬದಲಾವಣೆ ಬಗ್ಗೆ ಹೇಳಿಕೊಂಡರು. 6% ಜನ ತಮ್ಮ ಬಗ್ಗೆ ಬೇರೆಯವರಲ್ಲಿ ಆಗಿರುವ ಗಣನೀಯ ಬದಲಾವಣೆ ಬಗ್ಗೆ ಹೇಳಿದರು, ಜೊತೆಗೆ ತಮ್ಮ ಕೌಟುಂಬಿಕ ವಿಷಯಗಳಲ್ಲಿ ಮುಖ್ಯವಾದ ತೀರ್ಮಾನಗಳನ್ನು ತೆಗೆದುಕೊಳ್ಳುವಲ್ಲಿ ಆದ ಸುಧಾರಣೆಗಳ ಬಗ್ಗೆಯೂ ಹೇಳಿದರು.

ಪುರುಷ ಸದಸ್ಯರು ಕುಟುಂಬದ ಒಳಿತಿಗಾಗಿ ಅವರ (ಫಲಾನುಭವಿ ಮಹಿಳೆಯರ) ಒಪ್ಪಿಗೆಯನ್ನು ಪಡೆದುಕೊಳ್ಳುತ್ತಿದ್ದಾರೆ.

**ಕೋಷ್ಟಕ–29 ಕುಟುಂಬದ ಸದಸ್ಯರಲ್ಲಿ ಬದಲಾದ ದೃಷ್ಟಿಕೋನ**

| ಕ್ರ. ಸಂ. | ಸದಸ್ಯರಲ್ಲಿ ಬದಲಾದ ದೃಷ್ಟಿಕೋನ. | | ಕುಟುಂಬದ ವಿಷಯಗಳಲ್ಲಿ ಸಬಲರಾದೆವೆಂಬ ಮನೋಭಾವನೆ. |
|---|---|---|---|
| | ಕೆಲವರು. | ಪೂರ್ಣ. | ಹೌದು. |
| 1 | 124 (93%) | 8 (6%) | 132 (99%) |

ಸೂಚನೆ: ಸ್ವತ್ತುಗಳ ಸಂಪಾದನೆಗೆ ಮೂರು ಕಡೆಯ ವರಮಾನಗಳನ್ನು ಬಳಸಿಕೊಂಡಿರುವುದು ಕಂಡುಬಂದಿದೆ. 1) ಮೇಲಾದಾಯದ ಭಾಗ, 2) ಪತಿಯ ಆದಾಯ, ಮತ್ತು 3) ಬ್ಯಾಂಕ್ ಸಾಲ. ಆದ್ದರಿಂದ ಆಸ್ತಿಗಳ ಸಂಪಾದನೆಯು ಕೇವಲ ಜಮೀನಿನ ಹಂಚಿಕೆಯಾದ ಬಳಿಕವೇ ಎಂದು ಹೇಳಲಾಗದು.

**ಅಧ್ಯಾಯ–7.**

**ಅಂತಿಮ ತೀರ್ಮಾನಗಳು.**

- ಸರ್ಕಾರದಿಂದ ಸೂಚಿಸಿದ ಮಾನದಂಡಗಳಂತೆ ಫಲಾನುಭವಿಗಳನ್ನು ಆರಿಸಲಾಯಿತು. ಈ ಯೋಜನೆಯ ಸಫಲತೆಗೆ ಗ್ರಾಮ ಪಂಚಾಯತಿಗಳು ಮುಂಚೂಣಿಯಲ್ಲಿರಬೇಕಾಗಿದ್ದು ಅವರ ಪಾತ್ರವನ್ನು ಕೆಲವೇ ಕೆಲವು ಸಂದರ್ಭಗಳನ್ನು ಹೊರತು ಪಡಿಸಿ, ಯಶಸ್ವಿಯಾಗಿ ನಿರ್ವಹಿಸದಿರುವುದು ಕಂಡುಬಂದಿದೆ. ಸಾಮಾನ್ಯವಾಗಿ ಸ್ಥಳೀಯ ಶಾಸಕರ ಮಾತಿನಂತೆ ಫಲಾನುಭವಿಗಳ ಆಯ್ಕೆ ನಡೆದು ಆಯ್ದ ಫಲಾನುಭವಿಗಳ ಹೆಸರುಗಳನ್ನು ಅನುಮೋದನೆಗಾಗಿ ಜಿಲ್ಲಾ ಸಮಿತಿಗಳಿಗೆ ಕಳುಹಿಸಿರುವುದು ಕಂಡುಬಂದಿದೆ.
- ಕರ್ನಾಟಕ ಸರ್ಕಾರವು 50 ಪರಿಶಿಷ್ಟ ಪಂಗಡಗಳನ್ನು ಗುರುತಿಸಿದ್ದರೂ 11 ಉಪ ಪಂಗಡಗಳಿಗೆ ಮಾತ್ರ ಈ ಭೂ ಹಂಚಿಕೆ ಯೋಜನೆಯ ಫಲ ದೊರೆಕಿದೆ. ನಾಯಿಕೊಡ ಎಂಬ ಪಂಗಡದಲ್ಲಿ ನಾಯಕ, ನಾಯ್ಕ್, ಬೇಡರ್, ವಾಲ್ಮೀಕಿ ಜನಾಂಗದವರು 2011ರ ಜನಗಣತಿಯಂತೆ ಸೇರಿದ್ದು ಫಲಾನುಭವಿಗಳಲ್ಲಿ 95% ಆಗಿದ್ದು ಕೇವಲ 5% ನಲ್ಲಿ 10 ಪರಿಶಿಷ್ಟ ಪಂಗಡಗಳು ಸೇರಿದ್ದವು. ಆದ್ದರಿಂದ ಕರ್ನಾಟಕದ ಎಲ್ಲ ಉಪ ಪಂಗಡಗಳನ್ನು ಅವರ ಜನಸಂಖ್ಯೆ, ವಿತರಣೆಗಳು ಹೇಗೇ ಇರಲಿ ಎಲ್ಲರಿಗೂ ಯೋಜನೆಯ ಪ್ರಯೋಜನೆವನ್ನು ದೊರಕಿಸಿಕೊಡುವಂತೆ ಮಾಡಬೇಕಿರುತ್ತದೆ. ಅಲ್ಲದೇ ಪರಿಶಿಷ್ಟ ಪಂಗಡದ ಅರ್ಹ ಮಹಿಳೆಯರ ಆಯ್ಕೆ ಮಾಡಲು ಜಿಲ್ಲಾವಾರು ಬುನಾದಿಯಿಂದ ಸರ್ವೇ ಮಾಡಬೇಕಿರುತ್ತದೆ. ಇಂತಹ ಸರ್ವೇಯಿಂದ ಯೋಜನೆ ಅನುಷ್ಠಾನಕ್ಕೆ ಬೇಕಾದ ಸಮಯ ಮತ್ತು ಹಣಕಾಸಿನ ಅಗತ್ಯತೆ ಬಗ್ಗೆ ಒಂದು ಅಂದಾಜು ಸಿಗುವುದು.
- ಕುಟುಂಬದ ಗಾತ್ರ, ವಯಸ್ಸು, ವೈವಾಹಿಕ ಸ್ಥಿತಿಗತಿ, ಮತ್ತು ಅವರ ವೃತ್ತಿಯು ಯೋಜನೆಯ ಗುರಿಗಳ ಮೇಲೆ ಬಹುಮುಖ್ಯ ಪ್ರಭಾವ ಬೀರುತ್ತದೆ. ಕೆಲವು ಸಂದರ್ಭಗಳಲ್ಲಿ ಫಲಾನುಭವಿಗಳು 60 ವರ್ಷ ಮೀರಿದವರಾಗಿದ್ದು ಫಲಾನುಭವಿಗಳ ಆಯ್ಕೆಯಲ್ಲಿ ಮತ್ತೊಮ್ಮೆ ಯೋಚಿಸಬೇಕಾಗಿರುತ್ತದೆ. ಈ ಪಂಗಡಗಳಲ್ಲಿ ಹೆಚ್ಚಾಗಿ ಅನಕ್ಷರಸ್ಥರೇ ತುಂಬಿರುವುದರಿಂದ ಹಾಗೂ ಕೃಷಿ ಕೂಲಿ ಕಾರ್ಮಿಕರಾಗಿರುವುದರಿಂದ ಅವರಿಗೆ ವಿಸ್ತರಣಾ ಶಿಕ್ಷಣ ನೀಡುವುದು ಅಗತ್ಯವಿರುತ್ತದೆ. ಅದರಿಂದ ಅವರು ತಮಗೆ ಹಂಚಿಕೆ ಮಾಡಲಾದ ಜಮೀನುಗಳಲ್ಲಿ ಆಧುನಿಕ ಕೃಷಿ ತಾಂತ್ರಿಕತೆಗಳನ್ನು ಅನುಸರಿಸಲು ಅನುಕೂಲವಾಗುತ್ತದೆ.
- ಬಹಳಷ್ಟು ಫಲಾನುಭವಿಗಳಿಗೆ ಖುಷ್ಕಿ ಮತ್ತು ನೀರಾವರಿ ಜಮೀನುಗಳನ್ನು ಸಮನಾಗಿ ಹಂಚಿಕೆ ಮಾಡಿರುವುದು ಕಂಡುಬಂದಿದೆ. ತೋಟದ ಜಮೀನುಗಳನ್ನು ಕೇವಲ 8% ಜನರಿಗೆ ಮಾತ್ರ ಹಂಚಿಕೆ ಮಾಡಿರುವುದು ಕಂಡುಬಂದಿದೆ. ಖುಷ್ಕಿ ಜಮೀನಿಗೆ ನೀರಾವರಿ ಜಮೀನಿಗಿಂತ ಬೆಲೆ ಕಡಿಮೆಯಿದ್ದು, ಹೆಚ್ಚಿನ ವಿಸ್ತೀರ್ಣ ದೊರೆಯುವುದರಿಂದ ಹಾಗೂ ಸರ್ಕಾರದಿಂದ ಸವಲತ್ತುಗಳು ಸಿಗುವ ದೃಷ್ಟಿಯಿಂದ ಖುಷ್ಕಿ ಜಮೀನುಗಳಿಗೆ ಬೇಡಿಕೆ ಹೆಚ್ಚಾಗಿರುವುದು ಕಂಡುಬಂದಿದೆ. ಹೆಚ್ಚಿನ ಜಮೀನುಗಳು ಕೃಷಿಯೋಗ್ಯವಾದ್ದರಿಂದ ಹಾಗೂ 21 % ಫಲಾನುಭವಿಗಳು 2 ಕಿಲೋಮೀಟರುಗಳೊಳಗೇ ಇದ್ದಿದ್ದರಿಂದ ಜಮೀನುಗಳ ಬಗ್ಗೆ ಯಾರದ್ದೂ ತಕರಾರಿರಲಿಲ್ಲ. 65% ಫಲಾನುಭವಿಗಳು ತಮ್ಮ ಜಮೀನುಗಳು 2ರಿಂದ 5 ಕಿಲೋಮೀಟರು ದೂರದಲ್ಲಿದ್ದು, 14%, 5 ಕಿಮೀ ಗಳಿಗಿಂತ ದೂರದಲ್ಲಿರುವುದು ಕಂಡುಬಂದಿದೆ. ಆದರೆ ಅವರ ಮುಖ್ಯವಾದ

ತೊಂದರೆಯೆಂದರೆ ಕೃಷಿಮಾಡುವುದು ಮತ್ತು ಬೇಕಾದ ಬೀಜ ಗೊಬ್ಬರಗಳ ಲಭ್ಯತೆ. ಹಾಗಿದ್ದರೂ ನಿಯಮಗಳಲ್ಲಿ ಈಚೆಗೆ ಮಾಡಿದ ಬದಲಾವಣೆಗಳು ಅಂದರೆ ತಾಲೂಕಿನ ಯಾವುದೇ ಭಾಗದಲ್ಲಿಯಾದರೂ ಜಮೀನನ್ನು ಹಂಚಿಕೆ ಮಾಡಿದರೂ ಅವರನ್ನು ಅವರ ವಾಸಸ್ಥಳದಿಂದ ಅವರಿಗೆ ನೀಡಿದ ಜಮೀನಿದ್ದಲ್ಲಿಗೆ ವರ್ಗಾಯಿಸುವುದು ಅಷ್ಟು ಸುಲಭವಲ್ಲ. ಇಂತಹ ಪರಿಸ್ಥಿತಿಯಿಂದ ಜಮೀನನ್ನು ಗುತ್ತಿಗೆಗೆ ನೀಡುವ ಪ್ರಸಂಗ ಬರಬಹುದು.

- ಫಲಾನುಭವಿಗಳು ತಮಗೆ ಹಂಚಿಕೆ ಮಾಡಿದ ಭೂಮಿಯನ್ನು ಶ್ರದ್ಧೆಯಿಂದ ಕೃಷಿ ಮಾಡುತ್ತಿರುವುದು ಕಂಡುಬಂತು. ಅವರು ಆ ಪ್ರದೇಶದಲ್ಲಿ ವ್ಯಾಪಕವಾಗಿ ಬೆಳೆಯುತ್ತಿರುವ ಬೆಳೆಗಳನ್ನೇ ಆರಿಸಿಕೊಂಡಿರುತ್ತಾರೆ. 133 ಫಲಾನುಭವಿಗಳ ಪೈಕಿ ಇಬ್ಬರು ಮಾತ್ರ ತಮ್ಮ ಜಮೀನುಗಳನ್ನು ಬೀಳು ಬಿಟ್ಟಿರುತ್ತಾರೆ. ಶೇ. 50 ರಷ್ಟು ಫಲಾನುಭವಿಗಳು ವಾಣಿಜ್ಯ ಬೆಳೆಗಳನ್ನು ಆರಿಸಿಕೊಂಡಿದ್ದಾರೆ. ಇದರಿಂದ ಅವಕಾಶ ಒದಗಿಸಿದಾಗ ಮಹಿಳೆಯರೂ ಆರ್ಥಿಕ ಬೆಳೆಗಳನ್ನು ಬೆಳೆದು ತಮ್ಮ ಆದಾಯವನ್ನು ಹೆಚ್ಚಿಸಿಕೊಳ್ಳಬಲ್ಲರೆಂದು ತಿಳಿದುಬರುತ್ತದೆ.
- ಫಲಾನುಭವಿಗಳು ಸಾಮಾನ್ಯವಾಗಿ ತಮಗೆ ಹಂಚಿಕೆಯಾದ ಜಮೀನುಗಳಲ್ಲಿ ಬದುಗಳನ್ನು ಹಾಕುವುದು, ಮಟ್ಟ ಮಾಡುವುದು, ಅಂಚುಗಳಲ್ಲಿ ಗಿಡ ನೆಡುವುದು ಭಾವಿಗಳನ್ನು ತೋಡುವುದು ಇಂತಹ ಅಭಿವೃದ್ಧಿ ಕಾರ್ಯಗಳನ್ನು ಜೇವರ್ಗಿ, ಔರಾದ್, ಅರಸೀಕೆರೆ, ಮತ್ತು ಶಿಕಾರಿಪುರ ತಾಲೂಕುಗಳಲ್ಲಿ ಒಂದೊಂದು ಪ್ರಸಂಗವನ್ನು ಹೊರತು ಪಡಿಸಿ ಮಾಡಿಸಿರುವುದಿಲ. ಭೂಮಿಯ ಅಭಿವೃದ್ಧಿ ಅಗತ್ಯವಾಗಿ ಆಗಬೇಕಾಗಿತ್ತೆಂದು ಅವರಿಗೆ ಪೂರ್ಣವಾಗಿ ತಿಳಿದಿದ್ದರೂ ಬೇರೆ ಇಲಾಖೆಗಳಿಂದ ಸಹಾಯ ಬಂದರೆ ಮಾಡಿಸಲು ಮನಸುಳ್ಳವರಾಗಿದ್ದರು. ಸಂಬಂಧಪಟ್ಟ ಇಲಾಖೆಗಳವರು 28% ಜಮೀನುಗಳಲ್ಲಿ ಬದುಹಾಕಿಸುವ ಕೆಲಸವನ್ನು, ಶೇ.5% ಜಮೀನುಗಳಲ್ಲಿ ಕೊಳವೇ ಭಾವಿ ಕೊರೆಸುವುದನ್ನು ಮಾಡಿಸಿರುತ್ತಾರೆ. ಇಂತಹ ಕಾರ್ಯಗಳನ್ನು ಫಲಾನುಭವಿಗಳು ಸಂತೋಷದಿಂದ ಸ್ವಾಗತಿಸಿದ್ದು ಉಳಿದವರೂ ಸಂಬಂಧ ಪಟ್ಟ ಇಲಾಖೆಗಳಿಂದ ಅಂತಹ ಸಹಾಯಕ್ಕಾಗಿ ನಿರೀಕ್ಷಿಸುತ್ತಿದಾರೆ.
- ಜಮೀನಿನ ಭೌತಿಕ ಒಡೆತನದ ಬಗ್ಗೆ ಎರಡು ಜಿಲ್ಲೆಗಳ ಫಲಾನುಭವಿಗಳಿಗೆ ಜಮೀನನ್ನು ಒಂದಲ್ಲಾ ಒಂದು ಕಾರಣಕ್ಕೆ ಹಸ್ತಾಂತರಿಸಿರುವುದಿಲ್ಲ. ಉದಾ: ಶ್ರೀನಿವಾಸಪುರ ತಾಲೂಕಿನ ಕರಿಪಲ್ಲಿ ಗ್ರಾಮದ 9 ಫಲಾನುಭವಿಗಳಿಗೆ 2013–14ರಲ್ಲೇ ಭೂಮಿ ಹಂಚಿಕೆಯಾಗಿದ್ದರೂ ಸಹಾ ಅವರಿಗೆ ಜಮೀನನ್ನು ಹಸ್ತಾಂತರಿಸಿರುವುದಿಲ್ಲ. ಹಾಗೆಯೇ ದೊಡ್ಡಬಳ್ಳಾಪುರ ತಾಲೂಕು ಮಲ್ಲಸಂದ್ರ ಗ್ರಾಮದಲ್ಲಿ 2010–11 ರಲ್ಲೇ ಭೂಮಿ ಹಂಚಿಕೆಯಾಗಿದ್ದರೂ ಒಬ್ಬ ಫಲಾನುಭವಿಗೆ ಜಮೀನನ್ನು ಹಸ್ತಾಂತರಿಸಿರುವುದಿಲ್ಲ. ಇಂತಹ ಪ್ರಸಂಗವು ಅತಿ ಚಿಕ್ಕದಾಗಿ ಕಂಡರೂ ಅದನ್ನೊಂದು ಲೋಪವೆಂದು ಬಹಳ ಗಂಭೀರವಾಗಿ ಗಮನಿಸಬೇಕಾಗಿರುತ್ತದೆ.
- ಮತ್ತೊಂದು ಲೋಪವೆಂದರೆ ಫಲಾನುಭವಿಗಳಿಗೆ ಹಂಚಿಕೆಯಾದ ಜಮೀನುಗಳ ಚಕ್ಕುಬಂದಿಗಳನ್ನು ಸರಿಯಾಗಿ ಗುರುತಿರುವುದಿಲ್ಲ. ಇಂತಹ ಸ್ಥಿತಿ 63 ಫಲಾನುಭವಿಗಳ ಪ್ರಕರಣಗಳಲ್ಲಿ ಕಂಡುಬಂದು ಯೋಜನೆಯ ಅನುಷ್ಠಾನದಲ್ಲಿ ಇದೊಂದು ಗಂಭೀರ ಲೋಪವಾಗಿದೆ. ಆದ್ದರಿಂದ ಜಮೀನಿನ ಖರೀದಿಯು ಮುಗಿದ ಕೂಡಲೇ ಚಕ್ಕುಬಂದಿಗಳನ್ನು ಗುರುತಿಸಿ ಫಲಾನುಭವಿಗಳಿಗೆ ಹಸ್ತಾಂತರಿಸುವ ಜವಾಬ್ದಾರಿಯನ್ನು ಒಟ್ಟಿಗೆ ನಿಗಮವು ಪೂರೈಸಬೇಕು.

- ಭೂಮಿಯನ್ನು ಗುರುತಿಸುವುದು ಮತ್ತು ಫಲಾನುಭವಿಗಳ ಅನುಮೋದನೆಗೆ 1 ರಿಂದ 2 ವರ್ಷಗಳ ಕಾಲಾವಧಿಯನ್ನು ತೆಗೆದುಕೊಂಡಿರುವುದು ಕಂಡುಬಂದಿದೆ. ಕೆಲವು ಪ್ರಸಂಗಗಳಲ್ಲಿ ಪ್ರಸ್ತಾವನೆಯನ್ನು ನಿಗಮದಿಂದ ಜಿಲ್ಲಾಧಿಕಾರಿಗಳಗೆ ಶಿಫಾರಸ್ಸು ಮಾಡಿ ಸಲ್ಲಿಸಿದಮೇಲೂ 3 ರಿಂದ 4 ವರ್ಷಗಳ ಅವಧಿಯನ್ನು ತೆಗೆದುಕೊಳ್ಳಲಾಗಿದೆ. ಜಮೀನಿನ ನಿರೀಕ್ಷೆಯಲ್ಲಿ ಧೀರ್ಘ ಕಾಲದವರೆಗೆ ಕಾಯುವಂತೆ ಮಾಡುವುದರಿಂದ ಫಲಾನುಭವಿಗೆ ಯೋಜನೆ ಬಗ್ಗೆ ಜಿಗುಪ್ಸೆ/ಅಸಹನೆ ಹುಟ್ಟಿಸುತ್ತದೆ.
- ರಾಜ್ಯದ ದಕ್ಷಿಣದ ಹೆಚ್ಚಿನ ಜಿಲ್ಲೆಗಳಲ್ಲಿ ಖರೀದಿಗೆ ಜಮೀನು ಸಿಗುವುದಿಲ್ಲವೆಂದು ವರದಿಯಾಗಿದೆ. ಆದರೆ ಉತ್ತರದ ಜಿಲ್ಲೆಗಳಲ್ಲಿ ನಿಗಮಕ್ಕೆ ಬೇಕಾದ್ದಕ್ಕಿಂತ ಹೆಚ್ಚಿಗೆ ಮಾರಾಟಗಾರಿದ್ದಾರೆ. ಇದೊಂದು ವಿರೋಧಾಭಾಸದ ಪರಿಸ್ಥಿತಿಯಾಗಿದ್ದು ಮಾರಾಟಗಾರರೇ ನಿಗಮಕ್ಕೆ ತಮ್ಮ ಜಮಿನುಗಳನ್ನು ಕೊಂಡುಕೊಳ್ಳಿರೆಂದು ಒತ್ತಾತಿಸುತ್ತಿದ್ದಾರೆ. ವಾಸ್ತವವಾಗಿ ಇದೊಂದು ಸದವಕಾಶವಾಗಿದ್ದು ಭೂಮಿಯ ಬ್ಯಾಂಕ್ ಸ್ಥಾಪಿಸಿ ಅಗತ್ಯಬಿದ್ದಾಗ ಯೋಜನೆಯ ಫಲಾನುಭವಿಗಳಿಗೆ ಹಂಚಿಕೆ ಮಾಡಬಹುದಾಗಿರುತ್ತದೆ. ಮತ್ತೊಂದು ಪ್ರಕರಣದಲ್ಲಿ ಮಾರಾಟಗಾರರು ಮತ್ತು ಖರೀದಿದಾರರು ತಾವೇ ವ್ಯವಹಾರ ಕುದುರಿಸಿಕೊಂಡು ಆರ್ಥಿಕ ಸಹಾಯಕ್ಕಾಗಿ ನಿಗಮದ ಬಳಿಗೆ ಬಂದಿರುವುದೂ ಕಂಡುಬಂದಿದೆ. ಇದರಿಂದ ನಿಗಮದ ಕೆಲಸ ಹಗುರವಾಗುತ್ತದೆ.
- ಒಂದು ಕುಟುಂಬದ ಆದಾಯದಲ್ಲಿ ಏರಿಕೆಯಾದಾಗ ಅವರ ಜೀವನ ಶೈಲಿಯಲ್ಲಿ ಬದಲಾವಣೆ ಯಾಗುತ್ತದೆ. ಆಸ್ತಿಗಳನ್ನು ಹೊಂದುವುದು, ಆಹಾರ ಪದ್ದತಿಯಲ್ಲಿ ಬದಲಾವಣೆ, ಸಾಮಾಜಿಕ ಸ್ಥಾನ ಮಾನದಲ್ಲಿ ಬದಲಾವಣೆ ಕಾಣಬಹುದು. ಈಗಿನ ಅಧ್ಯಯಯನವು ಕುಟುಂಬದ ಆದಾಯ ಹೆಚ್ಚಾಗಿರುವುದರ ಕಡೆ ಗಮನವನ್ನು ಕೇಂದ್ರೀಕರಿಸಿದ್ದು ಸುಮಾರು 70.73% ಪ್ರಕರಣಗಳಲ್ಲಿ ಮೇಲಾದಾಯವು ರೂ. 10,000/ ದಿಂದ 25,000/ ವರೆಗೆ ಹೆಚ್ಚಾಗಿರುವುದು, 19.51% ಪ್ರಕರಣಗಳಲ್ಲಿ ಮೇಲಾದಾಯವು ರೂ. 25,000/ ದಿಂದ 50,000/ ವರೆಗೆ, ಹೆಚ್ಚಾಗಿರುವುದು ಕಂಡುಬಂದಿದೆ. ಫಲಿತಾಂಶವಾಗಿ ಫಲಾನುಭವಿಗಳು ಚರಾಸ್ತಿಗಳಾದ ಟಿ.ವಿ, ದ್ವಿಚಕ್ರ ವಾಹನ, ಬೈಸಿಕಲ್ ಇತ್ಯಾದಿಗಳನ್ನು ಕೊಂಡು ತಮ್ಮ ಅಂತಸ್ತನ್ನು ಹೆಚ್ಚಿಸಿಕೊಂಡಿರುವುದು ಕಂಡುಬಂದಿದೆ.
- ಫಲಾನುಭವಿಗಳ ಪೈಕಿ ಶೇ.60 ರಷ್ಟು ಮಂದಿ ಪಕ್ಕಾ ಅಥವಾ ಅರೆ ಪಕ್ಕಾ ಮನೆಗಳಲ್ಲಿ ವಾಸಿಸುತ್ತದ್ದರು. ಸಾಮಾಜಿಕ ಸ್ಥಾನ ಮಾನದಲ್ಲಿ, ಹೆಚ್ಚಿನ ಎಲ್ಲ ಫಲಾನುಭವಿಗಳು ಕುಟುಂಬದ ವ್ಯವಹಾರಗಳಲ್ಲಿ ಅಂದರೆ ಹಣಕಾಸಿನ ವ್ಯವಹಾರ, ಮದುವೆ, ಭೂ ಸಂಬಂಧಿ ವಿಷಯಗಳು, ಮಕ್ಕಳ ವಿದ್ಯಾಭ್ಯಾಸ ಇತ್ಯಾದಿಗಳಲ್ಲಿ ತಮ್ಮ ಗಂಡಂದಿರೊಡಗೂಡಿ ತಮ್ಮ ಅಭಿಪ್ರಾಯಗಳನ್ನು/ ತೀರ್ಮಾನಗಳನ್ನು ತಿಳಿಸುವ ಹಕ್ಕನ್ನು ಹೊಂದಿದ್ದರು. ಅಧ್ಯಯನದ ತಂಡವು ಫಲಾನುಭವಿ ಮಹಿಳೆಯರಲ್ಲಿ ಹೊಸ ವಿಷಯಗಳನ್ನು ನೋಡುವ ರೀತಿಯಲ್ಲಿ, ಮನೋಭಾವದಲ್ಲಿ ತಮ್ಮ ಮಾನಸಿಕ ಬದಲಾವಣೆಯನ್ನು ಗಮನಿಸಿದರು, ಈ ಬದಲಾವಣೆಯನ್ನು ಯೋಜನೆಯ ಅನುಷ್ಠಾನದಿಂದ ಮಾತ್ರವಲ್ಲದೇ ಅನೇಕ ಮಹಿಳೆಯರ ಸಬಲೀಕರಣ ಯೋಜನೆಗಳ ಅನುಷ್ಠಾನದಿಂದ ಸಾಧ್ಯವಾಗಿದೆ. ಈ ಸಂಧರ್ಭದಲ್ಲಿ ಪರಿಶಿಷ್ಟ ಪಂಗಡದ ಜನಾಂಗದಲ್ಲಿ ಮಹಿಳೆಯರೇ ಕುಟುಂಬ ನಿರ್ವಹಣೆ ಮಾಡಿಕೊಂಡು ಹೋಗುತ್ತಿರುವುದನ್ನು ಗಮನಿಸಬೇಕು.

- ಸಾಲ ಮರುಪಾವತಿ ವಿಚಾರದಲ್ಲಿ, ಫಲಾನುಭವಿಗಳು ಅದನ್ನೊಂದು ಸಮಸ್ಯೆ ಎಂದೇ ಪರಿಗಣಿಸಿರುವುದಿಲ್ಲ. ಕಾರಣ ಸರಕಾರ ಸಾಲವನ್ನು ಮುಂದೊಂದು ದಿನ ಮನ್ನಾ ಮಾಡಬಹುದೆಂಬ ನಿರೀಕ್ಷೆಯಲ್ಲಿ ಸಾಲ ಮರುಪಾವತಿಗೆ ಹೆಚ್ಚಿನ ಮಹತ್ವ ನೀಡುವುದಿಲ್ಲ. ಒಟ್ಟು 133 ಫಲಾನುಭವಿಗಳ ಪೈಕಿ ಕೇವಲ 3 ಮಂದಿ ಮಾತ್ರ ಪೂರ್ಣವಾಗಿ ಅಥವಾ ಭಾಗಶಃ ಮರುಪಾವತಿಸಿರುತ್ತಾರೆ. ಉಳಿದವರು ತಮ್ಮ ಸಾಲವನ್ನೂ ಒಂದಲ್ಲಾ ಒಂದು ದಿನ ಮನ್ನಾ ಮಾಡಬಹುದೆಂದು ನಿರೀಕ್ಷಿಸುವುದು ಸ್ವಾಭಾವಿಕ.
- ಸಂಬಂಧಿಸಿದ ಇಲಾಖೆಗಳು ಈ ಯೋಜನೆಯ ಅನುಷ್ಠಾನದಲ್ಲಿ ಹೆಚ್ಚಿಗೆ ಭಾಗವಹಿಸಿರುವುದು ಕಂಡುಬಂದಿರುವುದಿಲ್ಲ. ಕಾರಣ ಆ ಬಗ್ಗೆ ಸರ್ಕಾರದಿಂದ ಸೂಕ್ತ ನಿರ್ದೇಶನಗಳೂ ಇಲ್ಲದಿರುವುದು ಒಂದು ಕಾರಣ.
- ಹಂಚಿಕೆಯಾದ ಭೂಮಿಯನ್ನು ರಿಜಿಸ್ಟರ್ ಮಾಡಿಸಿಕೊಟ್ಟ ಬಳಿಕ ನಿಗಮದಿಂದ ಯೋಜನೆಯ ಕಾರ್ಯಗಳನ್ನು ಉಸ್ತುವಾರಿ (ಫಾಲೋ ಅಪ್) ಮಾಡುವ ವ್ಯವಸ್ಥೆಯಿರುವುದಿಲ್ಲ. ಫಲಾನುಭವಿಗಳೂ ಜಮೀನನ್ನು ಪಡೆದುಕೊಂಡ ಬಳಿಕ ತೆದುಕೊಂಡ ಕ್ರಮಗಳ ಬಗ್ಗೆ ನಿಗಮಕ್ಕೆ ಮಾಹಿತಿ ನೀಡುವುದಿಲ್ಲ. ಕೆಲ ಸಂದರ್ಭಗಳಲ್ಲಿ ತಮಗೆ ಕೊಳವೆ ಭಾವಿ ತೆಗೆಸಲು ಆರ್ಥಿಕ ಸಹಾಯ ಬೇಕಾದಾಗ ನೇರವಾಗಿ ನಿಗಮಕ್ಕೆ ಭೇಟಿ ನೀಡಿ ಹೆಚ್ಚಿನ ಸಹಾಯಕ್ಕಾಗಿ ಮನಿವಿ ಸಲ್ಲಿಸಿರುತ್ತಾರೆ.

> ಹಂಚಿಕೆಯಾದ ಜಮೀನುಗಳಲ್ಲಿ ಏನಾದರೂ ಅಭಿವೃದ್ಧಿ ಕೆಲಸಗಳನ್ನು ಕೈಗೊಳ್ಳಲಾಗಿದೆಯೇ ಎಂಬ ಪ್ರಶ್ನೆಗೆ ಫಲಾನುಭವಿಗಳು ಯಾವುದೇ ಅಭಿವೃದ್ಧಿ ಕೆಲಸಗಳನ್ನು ಕೈಗೊಂಡಿರುವುದಿಲ್ಲ, ಕಾರಣ ಹೆಚ್ಚಿನ ಜಮೀನುಗಳಿಗೆ ಬದುಗಳನ್ನು ಹಾಕುವುದಾಗಲೀ, ಜಮೀನು ಮಟ್ಟ ಮಾಡುವುದಾಗಲೀ ಅಗತ್ಯವಿರಲಿಲ್ಲ. ಆದರೂ ಸಹಾ ಕೆಲವು ಸಂದರ್ಭಗಳಲ್ಲಿ ಜಮೀನುಗಳನ್ನು ಮಟ್ಟಮಾಡಿ ಅಕ್ಕ ಪಕ್ಕದವರ ಕೊಳವೇ ಭಾವಿಗಳಿಂದ ನೀರು ಪಡೆದು ನೀರಾವರಿ ಮಾಡಿಕೊಂಡಿತ್ತಾರೆ. ಉದಾ: ಚಾಮರಾಜನಗರ, ಚಿತ್ರದುರ್ಗ, ಬಾಗೇಪಲ್ಲಿ ತಾಲೂಕಿನ ಅಬ್ರವಾರಿ ಪಲ್ಲಿ ಮಡಿಕೇರಿ ತಾಲೂಕಿನ ಮಾಧೇ. ಅರಸೀಕೆರೆ ತಾಲೂಕಿನ ಕೆಲವು ಕಡೆ ಫಲಾನುಭವಿಗಳು ತಮಗೆ ಹಂಚಿಕೆಯಾದ ಜಮೀನಿನ ಸುತ್ತ ಮುಳ್ಳು ತಂತಿ ಬೇಲಿಯನ್ನು ಹಾಕದ್ದಲ್ಲದೇ ಅದರಲ್ಲಿ ವಿದ್ಯುತ್ ಹರಿಸಿರುವುದು ಕಂಡು ಬಂತು. (ಅರಸೀಕೆರೆ ತಾಲೂಕಿನ ಚಿಕ್ಕಲ್ಲೂರು ಹಳ್ಳಿ) ಇನ್ನೊಂದು ಸಂದರ್ಭದಲ್ಲಿ ಫಲಾನುಭವಿಗಳ ಉದ್ಯಮಶೀಲತೆ ಕಂಡು ಬಂತು. ಅವರಲ್ಲಿ ಕೆಲವರು ಕೊರಟಗೆರೆ ತಾಲೂಕಿನ ಮೋರಗಾನಹಳ್ಳಿ ಮತ್ತು ಮಧುಗಿರಿ ತಾಲೂಕಿನ ನಿತ್ರಹಳ್ಳಿಯಲ್ಲಿ ಫಲಾನುಭವಿಗಳು ಜಮೀನನ್ನು ಮಟ್ಟಮಾಡಿ ಕೊಳವೆ ಭಾವಿಯ ನೀರನ್ನು ಬಳಸಿ ಕೊರಟಗೆರೆ ತಾಲೂಕಿನಲ್ಲಿ ಅತಿ ಲಾಭದಾಯಕವಾದ ಮಲ್ಲಿಗೆ ಹೂವು ಮತ್ತು ಮಧುಗಿರಿಯಲ್ಲಿ ಮೆಣಸಿನ ಕಾಯಿ ಬೆಳೆದರು.

**ಅಧ್ಯಾಯ–8.**

**ಶಿಫಾರಸ್ಸುಗಳು.**

**ಅಲ್ಪಾವಧಿ.**

- ಈ ಯೋಜನೆಯ ಸಾಧನೆ ತೃಪ್ತಿದಾಯಕವಾಗಿಲ್ಲ, ಕಾರಣ 5 ವರ್ಷಗಳ ಅವಧಿಯಲ್ಲಿ ಪರಿಶಿಷ್ಟ ಜನಾಂಗದ ಒಟ್ಟು ಜನಸಂಖ್ಯೆಯನ್ನು ಗಮನದಲ್ಲಿಟ್ಟುಕೊಂಡು ಪರಿಶೀಲಿಸಿದಾಗ 1000ಕ್ಕೂ ಕಡಿಮೆ ಮಹಿಳೆಯರಿಗೆ ಯೋಜನೆಯ ಫಲ ದೊರಕಿದೆ. ಕೆಲವು ಜಿಲ್ಲೆಗಳಲ್ಲಿ ಸಾಧಿಸಿದ ಪ್ರಗತಿ ತೀರಾ ಅತೃಪ್ತಿದಾಯಕವಾಗಿರುವುದರಿಂದ ಅಲ್ಲಿ ಸುಧಾರಣೆಯಾಗಬೇಕಿರುತ್ತದೆ. ಕರ್ನಾಟಕದ ದಕ್ಷಿಣ ಜಿಲ್ಲೆಗಳಲ್ಲಿ ಭೂಮಿಯ ಆಲಭ್ಯತೆಯಿಂದಾಗಿ ಅನುಷ್ಠಾನದ ಪ್ರಗತಿ ಕುಂಠಿತವಾಗಿದೆ. ನಿಗಮವು ದಿನಪತ್ರಿಕೆಗಳಲ್ಲಿ, ವಾರ್ತಾ ಮಾಧ್ಯಮಗಳ ಮೂಲಕ ಹೆಚ್ಚಿನ ಪ್ರಚಾರ ಮಾಡುವುದರ ಮೂಲಕ ಪ್ರಚುರ ಪಡಿಸಿ ಜಮೀನುಗಳನ್ನು ಖರೀದಿಸಿ ಹೊಸ ಅರ್ಜಿದಾರರಿಗೆ ಹಂಚಿಕೆ ಮಾಡಬೇಕು. ಉತ್ತರ ಕರ್ನಾಟಕದಲ್ಲಿ ಜಮೀನು ದೊರೆಯುತ್ತದೆ, ಆದರೆ ಅರ್ಜಿದಾರರು ಕಡಿಮೆ, ಹಾಗಾಗಿ ಹೆಚ್ಚುವರಿಯಾಗಿ ದೊರೆಯುವ ಭೂಮಿಯನ್ನು ಖರೀದಿಸಿ ಪರಿಶಿಷ್ಟ ಜನಾಂಗದವರಿಗಾಗಿಯೇ ಭೂಮಿ ಬ್ಯಾಂಕ್ ಸ್ಥಾಪಿಸುವುದರ ಮೂಲಕ ಹೊಸ ಅರ್ಜಿದಾರರಿಗೆ ಹಂಚಬಹುದು. ಯೋಜನೆ ಬಗ್ಗೆ ಪ್ರಚಾರ ನೀಡಿ ಅರ್ಜಿದಾರರ ಸಂಖ್ಯೆಯನ್ನು ಹೆಚ್ಚಿಸಬೇಕು.
- ಫಲಾನುಭವಿಗಳ ಆಯ್ಕೆ ಗ್ರಾಮಸಭೆಗಳಿಂದ ಆಗಬೇಕು ಮತ್ತು ಆ ಬಗ್ಗೆ ತೆಗೆದುಕೊಂಡ ನಿರ್ಣಯವನ್ನು ಜಿಲ್ಲಾ ಸಮಿತಿಗೆ ಪರಿಶೀಲನೆಗಾಗಿ/ಅನುಮೋದನೆಗಾಗಿ ಕಳುಹಿಸಿಕೊಡಬೇಕು. ಗ್ರಾಮ ಪಂಚಾಯತಿಗಳು ಆ ಬಗ್ಗೆ ನಿರ್ಣಯಗಳ ದಾಖಲೆಗಳನ್ನು ಪಂಚಾಯತಿ ಕಛೇರಿಯಲ್ಲಿ ಇಟ್ಟಿರಲು ಮತ್ತು ಅವು ಪರಿಶೀಲನೆಗೆ ಎಲ್ಲರಿಗೂ ದೊರೆಯುವಂತೆ ಇಡಲು ಅವರಿಗೆ ತಿಳುವಳಿಕೆ ನೀಡಬೇಕು.
- ಈ ಕಾರ್ಯಕ್ರಮದಲ್ಲಿ ಸರ್ಕಾರೇತರ ಸಂಸ್ಥೆಗಳನ್ನು ಸೇರಿಸಿಕೊಳ್ಳಲು ಅವಕಾಶವಿದೆ. ದೇಶದ ಎಲ್ಲ ಭಾಗಗಳಲ್ಲಿ ಸರ್ಕಾರೇತರ ಸಂಸ್ಥೆಗಳು ಅಂತಹ ಕಾರ್ಯಕ್ರಮಗಳ ಯಶಸ್ಸಿಗೆ ತಮ್ಮಲ್ಲಿ ದಾಖಲೆಗಳನ್ನಿಟ್ಟುಕೊಂಡಿದ್ದಾರೆ. ವಾಸ್ತವವಾಗಿ ಪರಿಶಿಷ್ಟ ಪಂಗಡದ ಜನರ ಕಲ್ಯಾಣ ಕಾರ್ಯಕ್ರಮಗಳಲ್ಲಿ ಸರ್ಕಾರಕ್ಕಿಂತ ಮೊದಲೇ ಸರ್ಕಾರೇತರ ಸಂಸ್ಥೆಗಳು ಅವರ ಸಾಮಾಜಿಕ ಆರ್ಥಿಕ ಸ್ಥಿತಿ ಗತಿಗಳನ್ನು ಸುಧಾರಿಸಲು ಕ್ರಮ ಕೈಗೊಂಡಿದ್ದುಂಟು.
- ಫಲಾನುಭವಿಗಳನ್ನು ಆಯ್ಕೆ ಮಾಡುವಾಗ ಅವರ ವಯಸ್ಸು ಮತ್ತು ವೈವಾಹಿಕ ಸ್ಥಿತಿಗಳನ್ನು ಗಣನೆಗೆ ತೆಗೆದುಕೊಳ್ಳ:ಬೇಕು. ಉದಾ: ಭೂಮಿಯನ್ನು 50 ವರ್ಷಗಳಿಗಿಂತ ಕಡಿಮೆ ವಯಸ್ಸಿನರಿಗೆ ಹಂಚಲು ಆಯ್ಕೆ ಮಾಡಬೇಕು ಅದರಲ್ಲೂ ವಿಧವೆಯರಿಗೆ ಪ್ರಾಶಸ್ತ್ಯ ನೀಡಬೇಕು.

**ಧೀರ್ಘ ಕಾಲೀನ ಕಾರ್ಯಕ್ರಮ :**

- ಉಸ್ತುವಾರಿ ಮತ್ತು ಮಾರ್ಗದರ್ಶನ ವ್ಯವಸ್ಥೆಯನ್ನು ನಿಗಮವು ರಚಿಸಬೇಕು. ಅದರಿಂದ ಭೂ ಹಂಚಿಕೆ ಪಡೆದ ಫಲಾನುಭವಿ ಅದರ ಸದುಪಯೋಗ ಮಾಡಿಕೊಳ್ಳುವ ಬಗ್ಗೆ ಖಾತರಿ ಯಾಗುವುದು.
- ಫಲಾನುಭವಿಗಳು ಪರಿಶಿಷ್ಟ ಪಂಗಡಗಳಿಂದ ಬಂದವರಾದ್ದರಿಂದ, ಇತರೆ ಯೋಜನೆ ಕಾರ್ಯಕ್ರಮಗಳಲ್ಲಿ ದೊರೆಯುವ ಸೌಲಭ್ಯಗಳು, ರಿಯಾಯತಿಗಳು ಅವರಿಗೆ ತಿಳಿದಿರಲಾರವು. ಆಧ್ದರಿಂದ ನಿಗಮದಲ್ಲಿ

ಅಂತರ್ಗತವಾಗಿ ಒಂದು ವಿಭಾಗವಿದ್ದು ಅದು ಫಲಾನುಭವಿಗಳಿಗೆ ಕೊಳವೆ ಭಾವಿ ಕೊರೆಸುವುದು, ಅಂಚುಗಳಲ್ಲಿ ಮರಗಿಡಗಳನ್ನು ನೆಡಿಸುವುದು, ತುಂತುರು ನೀರಾವರಿ ಉಪಕರಣಗಳ ಸ್ಥಾಪನೆ ಮತ್ತು ಬಳಕೆ, ಬೀಜ ಗೊಬ್ಬರ ಸರಬರಾಜು, ತರಬೇತಿ, ಪ್ರಗತಿಪರ ರೈತರ ಜಮೀನುಗಳಿಗೆ ಭೇಟಿ, ರೈತರ ಆಸಕ್ತಿ ಚರ್ಚಾ ಗುಂಪುಗಳನ್ನು ಆಯೋಜಿಸುವುದು ಇತ್ಯಾದಿ ಕಾರ್ಯ ಕ್ರಮಗಳನ್ನು ಆಯೋಜಿಸುವುದರಿಂದ ಫಲಾನುಭವಿಗಳ ಜ್ಞಾನ ವೃದ್ದಿಯಾಗಿ ಹೆಚ್ಚಿನ ಪ್ರಗತಿ ಸಾಧ್ಯವಾಗುವುದು.

- ಭೂ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಹೆಚ್ಚಿನ ಸಂದರ್ಭಗಳಲ್ಲಿ ಕೊಳವೆ ಭಾವಿಗಳನ್ನು ಕೊರೆಸಲು ಅವಕಾಶವಿರುತ್ತದೆ.

**ನೀತಿ/ಧೋರಣೆ.**

ಈಗಿನ ಮಾರ್ಗಸೂಚಿಗಳ ಪ್ರಕಾರ ನೀರಾವರಿ ಜಮೀನುಗಳನ್ನು, ಅವುಗಳಿಗೆ ನೀರು ಸರಿಯಾಗಿ ದೊರೆಯತ್ತದೋ ಇಲ್ಲವೋ ಅಥವಾ ಕಾಲುವೆಗಳ ಕೊನೆ ಹಂತಲ್ಲಿದ್ದಾಗ ಸರಿಯಾಗಿ ನೀರು ಸರಬರಾಜಾಗದಿದ್ದಾಗಲೂ ಸಹಾ, ಅಥವಾ ಬರ ಪರಿಸ್ಥಿತಿಯಿಂದ ಸರಿಯಾಗಿ ನೀರು ಸರಬರಾಜಾಗದಿದ್ದರೂ ಸಹ ಆವುಗಳನ್ನು ನೀರಾವರಿ ಜಮೀನುಗಳೆಂದು ನಮೂದಿಸಿರುವುದು ಸರಿಯಲ್ಲ. ಈ ವಿಚಾರದಲ್ಲಿ ನಿಯಮಗಳನ್ನು ಸ್ವಲ್ಪ ಸಡಿಲ ಮಾಡಿ 1 ಎಕರೆ ಬದಲು 2 ಎಕರೆ ಜಮೀನು ಹಂಚಿಕೆ ಮಾಡಿದರೆ, ಸ್ವಲ್ಪ ಹೆಚ್ಚು ಜಮೀನು ದೊರೆತು ಹೆಚ್ಚಿನ ಉತ್ಪಾದನೆ ಪಡೆಯುವದರ ಮೂಲಕ ಫಲಾನುಭವಿ ಹೆಚ್ಚು ಆದಾಯ ಗಳಿಸಬಹುದು.

- ಭೂ ಹಂಚಿಕೆಯ ಜೊತೆ ಕನಿಷ್ಠ 2 ವರ್ಷ ಕೃಷಿ ಮಾಡಲು ಬೇಕಾದ ಬೀಜ ಗೊಬ್ಬರ ಇತ್ಯಾದಿ ಕೃಷಿ ಪರಿಕರಗಳನ್ನು (ಇನ್ ಪುಟ್ಸ್) ಕೊಡಬೇಕು. ಇಂತಹ ಕಾರ್ಯಕ್ರಮಕ್ಕೆ ಕೃಷಿ ಮತ್ತು ಸಂಬಂಧಿಸಿದ ಇಲಾಖೆಗಳು ಒಂದು ಕಡೆ ಸೇರಿ ತಮ್ಮ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಸಹಾಯವಾಗುವುದರಿಂದ ಇಂತಹ ಕಾರ್ಯಕ್ರಮಕ್ಕೆ ಸರ್ಕಾರದ ಸ್ಪಷ್ಟ ಸೂಚನೆ ಬೇಕಾಗಿರುತ್ತದೆ. ಇದು ಜಿಲ್ಲಾ ಅಭಿವೃದ್ಧಿ ಯೋಜನೆಯಲ್ಲಿ ಸೇರಿಸುವುದು ಅಗತ್ಯವೆಂದು ಸಲಹೆ ಮಾಡಲಾಗಿದೆ.

# ಅನುಬಂಧಗಳು

# ಅನುಬಂಧ–1

## ಭೂರಹಿತ ಪರಿಶಿಷ್ಟ ಪಂಗಡ ಮಹಿಳೆಯರಿಗಾಗಿ ಭೂ ಖರೀದಿ ಮತ್ತು ಭೂ ಹಂಚಿಕೆ ಮೌಲ್ಯಮಾಪನ ಸಮಾಲೋಚನಾ ಸಂಸ್ಥೆಯ ಆಯ್ಕೆಗೆ ವಿನಂತಿ

ಅನುಬಂಧಗಳು.

<u>ಭಾಗ 3.</u>

ಮಹರ್ಷಿ ವಾಲ್ಮೀಕಿ ಪರಿಶಿಷ್ಠ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತದಿಂದ 2009–10 ರಿಂದ 2013–14 ರ ಅವಧಿಯಲ್ಲಿ ಭೂರಹಿತ ಪರಿಶಿಷ್ಠ ಪಂಗಡದ ಮಹಿಳೆಯರಿಗಾಗಿ ಭೂ ಖರೀದಿ ಮತ್ತು ಭೂ ಹಂಚಿಕೆ ಯೋಜನೆಯ ಅನುಷ್ಠಾನದ ಬಗ್ಗೆ ಮೌಲ್ಯಮಾಪನದ ವಿಚಾರಣಾ ನಿಬಂಧನೆಗಳು.

1. ಅಧ್ಯಯನದ ಶೀರ್ಷಿಕೆ.

   ಅಧ್ಯಯನದ ಶೀರ್ಷಿಕೆಯು "ಮಹರ್ಷಿ ವಾಲ್ಮೀಕಿ ಪರಿಶಿಷ್ಠ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತದಿಂದ 2009–10 ರಿಂದ 2013–14 ರ ಅವಧಿಯಲ್ಲಿ ಭೂರಹಿತ ಪರಿಶಿಷ್ಠ ಪಂಗಡದ ಮಹಿಳೆಯರಿಗಾಗಿ ಭೂ ಖರೀದಿ ಮತ್ತು ಭೂ ಹಂಚಿಕೆ ಯೋಜನೆಯ ಅನುಷ್ಠಾನದ ಬಗ್ಗೆ ಮೌಲ್ಯಮಾಪನ" ಆಗಿರುತ್ತದೆ.

2. ಹಿನ್ನೆಲೆ ಮಾಹಿತಿ.

   ಕರ್ನಾಟಕದಲ್ಲಿ ಪರಿಶಿಷ್ಠ ಪಂಗಡಗಳ ಜನಸಂಖ್ಯೆಯು ಒಟ್ಟು ಜನಸಂಖ್ಯೆಯ ಶೇ. 6.95 ರಷ್ಟಿದೆ. ಗ್ರಾಮೀಣ ಕೃಷಿ ಸಂಸ್ಕೃತಿಯಲ್ಲಿ, ಒಬ್ಬ ವ್ಯಕ್ತಿಯ ಸ್ಥಾನ ಮಾನವು ಆತನು ಹೊಂದಿರುವ ಜಮೀನು ಮತ್ತು ಅದರ ಸ್ವಾಧಿನತೆಯ ಮೇಲೆ ಅವಲಂಬಿತವಾಗಿರುತ್ತದೆ. ಜಮೀನಿಲ್ಲದ ವ್ಯಕ್ತಿ ಅಥವಾ ಕುಟುಂಬದ ಸಾಮಾಜಿಕ ಸ್ಥಾನಮಾನವು ಜಮೀನು ಹೊಂದಿರುವವರ ಸ್ಥಾನಮಾನಕ್ಕಿಂತ ಕಡಿಮೆ ಮಟ್ಟದಲ್ಲಿರುತ್ತದೆ. ಪರಿಶಿಷ್ಠ ಜನಾಂಗಕ್ಕೆ ಸೇರಿದವರು 1) ಜಾತಿ ವ್ಯವಸ್ಥೆಯಲ್ಲಿ ಕೆಳ ಮಟ್ಟದಲ್ಲಿರುವುದು, ಮತ್ತು 2) ತಮ್ಮದೇ ಸ್ವಂತ ಭೂಮಿಯನ್ನು ಹೊಂದಿಲ್ಲದಿರುವುದು, ಈ ಪ್ರಕಾರ ಎರಡು ರೀತಿಯಲ್ಲಿ ಅವರು ಪ್ರತಿಕೂಲ ಸ್ಥಿತಿಯಲ್ಲಿರುತ್ತಾರೆ. ಮತ್ತು ಅವರ ಆರ್ಥಿಕ ಸ್ಥಿತಿಗತಿಯಿಂದಾಗಿ ಶೈಕ್ಷಣಿಕವಾಗಿಯೂ ಹಿಂದುಳಿದವರಾಗಿರುತ್ತಾರೆ. ಆದ್ದರಿಂದ ಗ್ರಾಮಗಳಲ್ಲಿ ವಾಸಿಸುತ್ತಿರುವ ಅನೇಕ ಪರಿಶಿಷ್ಠ ಜನಾಂಗದವರು ಸಣ್ಣ ರೈತರು ಅಥವಾ ಭೂ ರಹಿತ ಕೃಷಿ ಕಾರ್ಮಿಕರಾಗಿದ್ದು ತಮ್ಮ ಜೀವನೋಪಾಯಕ್ಕೆ ಮೇಲ್ವರ್ಗದ ಜಮೀನ್ದಾರರನ್ನವಲಂಭಿಸಿರುತ್ತಾರೆ. ಪರಿಶಿಷ್ಠ ಜನಾಂಗದೊಳಗೇ

ಪರಿಶಿಷ್ಠ ಮಹಿಳೆಯರು ತಾವು ಭೂ ಮಾಲೀಕರಲ್ಲದ ಕಾರಣಕ್ಕೆ ಸಾಮಾಜಿಕವಾಗಿ ಇನ್ನೂ ಕೆಳ ಮಟ್ಟದಲ್ಲಿರುತ್ತಾರೆ. ಪರಿಶಿಷ್ಠ ಮಹಿಳೆಯರಿಗೆ ಭೂ ಮಾಲೀಕತ್ವವಿಲ್ಲದ್ದಕ್ಕೂ ಅವರ ಮೇಲಿನ ದೌರ್ಜನ್ಯಕ್ಕೂ ಸಂಬಂಧವಿದೆಯೆಂದು, ತೀರಾ ಬಡವರಿಗೆ ಭೂ ಹಕ್ಕುಗಳಿಗಾಗಿ ಶ್ರಮಿಸುತ್ತಿರುವ 'ಲ್ಯಾಂಡ್' ಎಂಬ ಅಂತರ ರಾಷ್ಟ್ರೀಯ ಸರ್ಕಾರೇತರ ಸಂಸ್ಥೆ ಮತ್ತು ಮಾನವ ಅಭಿವೃದ್ಧಿ ಪ್ರತಿಷ್ಠಾನವೆಂಬ ಮತ್ತೊಂದು ಅಂತರರಾಷ್ಟ್ರೀಯ ಸಂಸ್ಥೆ ಜಂಟಿಯಾಗಿ ನಡೆಸಿದ ಭೂಮಿ ಮತ್ತು ಮಹಿಳೆಯರ ಆಸ್ತಿ ಮಾಲೀಕತ್ವ ಮತ್ತು ಲೈಂಗಿಕ ಹಿಂಸಾಚಾರದ ಬಗ್ಗೆ ಅಧ್ಯಯನದಲ್ಲಿ ಕಂಡುಬಂದಿದೆ.

ಕೃಷಿ ಭೂಮಿಯನ್ನು ಖರೀದಿಸಿ ಭೂರಹಿತ ಪರಿಶಿಷ್ಠ ಮಹಿಳೆಯರಿಗೆ ಹಂಚುವ ಯೋಜನೆ ಮೊದಲಿಗೆ 1990–91 ರಲ್ಲಿ ಪ್ರಾರಂಭಿಸಲಾಯಿತು. ಯೋಜನೆಯ ವೆಚ್ಚವನ್ನು ಸಮಾಜ ಕಲ್ಯಾಣ ಇಲಾಖೆಯ ಕೂಡುನಿಧಿಯಿಂದ ಭರಿಸಲಾಯಿತು. 2006 ರ ವರೆಗೆ ಈ ಯೋಜನೆಯನ್ನು ಪ್ರಾರಂಭದಲ್ಲಿ ಕರ್ನಾಟಕ ಪ.ಜಾ/ಪ.ಪಂ ಗಳ ಅಭಿವೃದ್ಧಿ ನಿಗಮ ನಿಯಮಿತದಿಂದ ಅನುಷ್ಠಾನಗೊಳಿಸಲಾಯಿತು. ಕನಾಟಕ ಸರ್ಕಾರದ ದಿನಾಂಕ 27–05–2006ರ ಆದೇಶ ಸಂ.ಎಸ್.ಡಬ್ಲ್ಯ.ಡಿ 65.ಎಸ್‌ಡಿಸಿ 2004 ರ ಪ್ರಕಾರ ಕಂಪನಿ ಕಾಯಿದೆ 1956 ರ ಪ್ರಕಾರ ಪರಿಶಿಷ್ಠ ಪಂಗಡಗಳ ಅಭಿವೃದ್ಧಿಗಾಗಿ ಪ್ರತ್ಯೇಕವಾಗಿ ಪರಿಶಿಷ್ಠ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತ ಎಂಬ ಹೆಸರಿನಲ್ಲಿ ಪ್ರಾರಂಭಿಸಲಾಯಿತು. ಸದರಿ ನಿಗಮದ ಹೆಸರನ್ನು ದಿನಾಂಕ 18–03–2013 ರ ಸರ್ಕಾರೀ ಆದೇಶ ಸಂ.ಎಸ್.ಡಬ್ಲ್ಯ.ಡಿ 36.ಎಸ್‌ಡಿಸಿ 2013 ರ ಆದೇಶದಂತೆ ನಿಗಮದ ಹೆಸರನ್ನು "ಮಹರ್ಷಿ ವಾಲ್ಮೀಕಿ ಪರಿಶಿಷ್ಠ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತ" ಎಂದು ಬದಲಾಯಿಸಲಾಯಿತು. ಯೋಜನೆಯಂತೆ ಭೂ ರಹಿತ ಪರಿಶಿಷ್ಠ ಪಂಗಡದ ಕೃಷಿಕಾರ್ಮಿಕ ಕುಟುಂಬದ ಮಹಿಳೆಗೆ ಎರಡು ಎಕರೆ ಖುಷ್ಕಿ, ಅಥವಾ ಒಂದು ಎಕರೆ ನೀರಾವರಿ ಅಥವಾ ತರಿ ಜಮೀನು, ಅಥವಾ ಅರ್ಧ ಎಕರೆ ತೋಟದ ಜಮೀನನ್ನು ಒದಗಿಸುವುದಾಗಿರುತ್ತದೆ. ಯೋಜನೆಯಂತೆ ಭೂ ರಹಿತ ಪರಿಶಿಷ್ಠ ಪಂಗಡದ ಕೃಷಿಕಾರ್ಮಿಕ ಕುಟುಂಬದ ಮಹಿಳೆಗೆ ಭೂಮಿ ಖರೀದಿಸಲು ಆರ್ಥಿಕ ಸಹಾಯ ಒದಗಿಸುತ್ತದೆ. ನಿಗಮವು ಭೂಮಿಯನ್ನು ಖರೀದಿಸಿ ಫಲಾನುಭವಿ ಮಹಿಳೆಯ ಹೆಸರಿನಲ್ಲಿ ರಿಜಿಸ್ಟರ್ ಮಾಡಿಸಿಕೊಡಲಾಗುತ್ತದೆ. ಎರಡು ಎಕರೆ ಖುಷ್ಕಿ, ಅಥವಾ ಒಂದು ಎಕರೆ ನೀರಾವರಿ ಅಥವಾ ತರಿ ಜಮೀನು, ಅಥವಾ ಅರ್ಧ ಎಕರೆ ತೋಟದ ಜಮೀನನ್ನು ಅವುಗಳ ಫಲವತ್ತತೆ, ಮಾರುಕಟ್ಟೆ ದರ ಇತ್ಯಾದಿಗಳನ್ನು ಪರಿಶೀಲಿಸಿ, ಖರೀದಿಸಲಾಗುವುದು. ಜಮೀನಿನ ಕ್ರಯದಲ್ಲಿ 50% ರಿಯಾಯತಿಯಾಗಿದ್ದು ಅದನ್ನು ಸರ್ಕಾರವೇ ಭರಿಸುತ್ತದೆ, ಉಳಿದರ್ಧವನ್ನು

ರಾಷ್ಟ್ರೀಯ ಕಾರ್ಪೋರೇಷನ್ ಅಥವಾ ಷೇರು ಬಂಡವಾಳದಿಂದ ಸಾಲ ಪಡೆದು ಭರಿಸಲಾಗುವುದು. ಸಾಲದ ಹಣವನ್ನು ಶೇ. 6 ರ ಬಡ್ಡಿ ದರದಲ್ಲಿ 10 ವರ್ಷಗಳಲ್ಲಿ 20 ಕಂತುಗಳಲ್ಲಿ ನಿಗಮಕ್ಕೆ ಫಲಾನುಭವಿಗಳು ಮರುಪಾವತಿಸಬೇಕಾಗುತ್ತದೆ.

3. ಯೋಜನೆಯ ಉದ್ದೇಶಗಳು ಮತ್ತು ಇಲ್ಲಿಯವರೆಗೆ ಆಗಿರುವ ಪ್ರಗತಿ.

ಯೋಜನೆಯ ಮುಖ್ಯ ಉದ್ದೇಶವು ಪರಿಶಿಷ್ಠ ಫಲಾನುಭವಿ ಮಹಿಳೆಯರಿಗೆ ಭೂಮಿಯ ಒಡೆತನ ಕೊಡಿಸಿ ಅವರನ್ನು ಆರ್ಥಿಕವಾಗಿ ಸಬಲರನ್ನಾಗಿಸುವುದಾಗಿರುತ್ತದೆ. ಇದರಿಂದ ಆಕೆಯನ್ನು ತನ್ನ ಜೀವನೋಪಾಯಕ್ಕಾಗಿ ಅವಲಂಭಿಸಿದ ಭೂ ಮಾಲೀಕರಿಂದ ಸ್ವತಂತ್ರವಾಗಿಸಿ ತನ್ನ ಕುಟುಂಬ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಉನ್ನತ ಸ್ಥಾನ ಪಡೆಯುವಂತಾಗುತ್ತದೆ.

2007–08 ರಿಂದ (ಕಾರ್ಯಕ್ರಮದ ಆರಂಭದ ವರ್ಷದಿಂದ) 2013–14 ರವರೆಗೆ ಮಹರ್ಷಿ ವಾಲ್ಮೀಕಿ ಪರಿಷಿಷ್ಠ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತದ ಮೂಲಕ್ಲ 925 ಪರಿಶಿಷ್ಠ ಪಂಗಡದ ಮಹಿಳೆಯರಿಗೆ 20.92 ಕೋಟಿ ರೂಗಳ ವೆಚ್ಚದಲ್ಲಿ 1367.72 ಎಕರೆ ಭೂಮಿಯನ್ನು ಹಂಚಿಕೆ ಮಾಡಲಾಗಿದೆ.

4. ಮಣ್ಣಿನ ತರಹೆ, ಮೌಲ್ಯ, ಮತ್ತು ವಿಸ್ತೀರ್ಣಗಳನ್ನು ನಿಗದಿ ಪಡಿಸಿ ಜಮೀನುಗಳ ಖರೀದಿಗಾಗಿ ಹೊರಡಿಸಿದ ಸರ್ಕಾರಿ ಆದೇಶಗಳು.

1.ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ ಎಸ್.ಡಬ್ಲ್ಯೂ.ಡಿ. 80 ಎಸ್.ಡಿ.ಸಿ. 2007 ದಿನಾಂಕ 05–08–2009 ರಂತೆ ಭೂ ಖರೀದಿಗೆ ಘಟಕಕ್ಕೆ 2.50 ಲಕ್ಷಗಳ ಮಿತಿಗೊಳಪಟ್ಟು ಮಾರ್ಗಸೂಚಿ ಬೆಲೆಗಿಂತ ಎರಡು ಪಟ್ಟು ಹೆಚ್ಚಿನ ಬೆಲೆಗೆ ಖರೀದಿಸಲು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲು ಸರ್ಕಾರ ಒಪ್ಪಿಗೆ ನೀಡಿತು. ಒಂದು ವೇಳೆ ಜಮೀನಿನ ಮಾರ್ಗಸೂಚಿ ದರಕ್ಕಿಂತರ ಎರಡು ಪಟ್ಟು ಅಥವಾ 2.50 ಲಕ್ಷಕಿಂತ ಹೆಚ್ಚಿದ್ದರೆ, ಅಂತಹ ಪ್ರಕರಣಗಳನ್ನು ಸರ್ಕಾರದ ಕಂದಾಯ ಇಲಾಖೆಯಿಂದ ಒಪ್ಪಿಗೆ ಪಡೆದುಕೊಳ್ಳಲು ಸಮಾಜ ಕಲ್ಯಾಣ ಇಲಾಖೆಗೆ ಪ್ರಸ್ತಾವನೆಯನ್ನು ಕಳುಹಿಸಬೇಕು.

2. ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ ಎಸ್.ಡಬ್ಲ್ಯೂ.ಡಿ. 79 ಎಸ್.ಡಿ.ಸಿ. 2012 ದಿನಾಂಕ 13–06–2012 ರಂತೆ ಈ ಕೆಳಗಿನ ಷರತ್ತುಗಳಿಗೊಳಪಡಿಸಿ ಘಟಕ ಬೆಲೆಯನ್ನು 5 ಲಕ್ಷಗಳಿಗೆ ಹೆಚ್ಚಿಸಲಾಯಿತು.

ಏ. ಕೇವಲ ಕೃಷಿ ಭೂಮಿಯನ್ನು ಮಾತ್ರ ಖರೀದಿಸಬೇಕು. ಫಲಾನುಭವಿಗಳು ತಮಗೆ ನೀಡಿದ ಜಮೀನನ್ನು ಬೇರೆಯವರಿಗೆ ಮಾರುವುದಾಗಲೀ ಗುತ್ತಗೆಗೆ ನೀಡುವುದಾಗಲೀ ಕೂಡದು.

ಬಿ. ಜಮೀನಿನ ಅರ್ಧ ಬೆಲೆಯು ಶೇ. 6 ರ ಬಡ್ಡಿದರದಲ್ಲಿ ಸಾಲ ರೂಪದಲ್ಲಿರುತ್ತದೆ. ಸಾಲವನ್ನು 20 ಕಂತುಗಳಲ್ಲಿ ತೀರಿಸಬೇಕಾಗಿರುತ್ತದೆ. ಜಮೀನಿನ ಉಳಿದರ್ಧ ಬೆಲೆ ರಿಯಾಯತಿಯಾಗಿರುತ್ತದೆ.

ಸಿ. 2 ಎಕರೆ ಖುಷ್ಕಿ, ಒಂದು ಎಕರೆ ತರಿ,(ನೀರಾವರಿ) ಅಥವಾ ಅರ್ಧ ಎಕರೆಗೆ ಕಡಿಮೆಯಿಲ್ಲದಂತೆ ತೋಟದ ಜಮೀನುಗಳನ್ನು ಘಟಕಕ್ಕೆ 5.00 ಲಕ್ಷ ರೂಪಾಯಿಗಳಿಗೆ ಮೀರದಂತೆ ಪ್ರತಿ ಫಲಾನುಭವಿಗೆ ಒದಗಿಸತಕ್ಕದ್ದು. ಬೆಲೆ ಹೆಚ್ಚಾದ ಸಂದರ್ಭದಲ್ಲಿ ಪ್ರಸ್ತಾವನೆಗಳನ್ನು ಮಂಜೂರಾತಿಗಾಗಿ ಸರ್ಕಾರಕ್ಕೆ ಕಳುಹಿಸಿಕೊಡಬೇಕು.

3 ಸರ್ಕಾರದ ಪತ್ರ ಸಂಖ್ಯೆ ಎಸ್.ಡಬ್ಲ್ಯೂ.ಡಿ. 173 ಎಸ್.ಡಿ.ಸಿ. 2012 ದಿನಾಂಕ 30–01–2013 ರಂತೆ ಖರೀದಿಸಬೇಕಾದ ಜಮೀನಿನ ಬೆಲೆಯು ಮಾರ್ಗದರ್ಶಿ ಬೆಲೆಯ ಮೂರು ಪಟ್ಟು ಇರಬಹುದಾದರೂ ಘಟಕಕ್ಕೆ 5.00 ಲಕ್ಷಗಳನ್ನು ಮೀರತಕ್ಕದ್ದಲ್ಲ. ಇದಕ್ಕಿಂತ ಹೆಚ್ಚಾದ ಪ್ರಕರಣಗಳಲ್ಲಿ ಮಂಜೂರಾತಿಗಾಗಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸಬೇಕು.

4. ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ ಎಸ್.ಡಬ್ಲ್ಯೂ.ಡಿ. 88 ಎಸ್.ಡಿ.ಸಿ. 2013 ದಿನಾಂಕ 14–09–2013 ರಂತೆ ಘಟಕದ ಬೆಲೆಯನ್ನು 5.00 ಲಕ್ಷಗಳಿಂದ 7.50 ಲಕ್ಷಗಳಿಗೆ ಹೆಚ್ಚಿಸಲಾಯಿತು.

5. ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ ಎಸ್.ಡಬ್ಲ್ಯೂ.ಡಿ. 91 ಎಸ್.ಡಿ.ಸಿ. 2014 ದಿನಾಂಕ 20–06–2014 ರಂತೆ ಘಟಕದ ಬೆಲೆಯನ್ನು 7.50 ಲಕ್ಷಗಳಿಂದ 10.00 ಲಕ್ಷಗಳಿಗೆ ಹೆಚ್ಚಿಸಲಾಯಿತು.

5. <u>ಭೂಮಿ ಖರೀದಿ ಯೋಜನೆಗೆ ಅರ್ಹತೆ ಮತ್ತು ಮಂಜೂರಾತಿ ಕಾರ್ಯ ವಿಧಾನ.</u>

1. ಗ್ರಾಮಪಂಚಾಯತಿಗಳು ಆಯ್ಕೆ ಮಾಡಿದ ಕೃಷಿ ಕಾರ್ಮಿಕ ಕುಟುಂಬಕ್ಕೆ ಸೇರಿದ ಭೂ ರಹಿತ ಪರಿಶಿಷ್ಠ ಮಹಿಳೆಯರು ಅರ್ಹತೆ ಪಡೆಯುತ್ತಾರೆ.
2. ಭೂಮಿ ಮಾರುವ ಭೂ ಮಾಲೀಕರು ಪ.ಜಾ/ಪ.ಪಂ ಗಳಿಗೆ ಸೇರಿರಬಾರದು.
3. ಖರೀದಿಸುವ ಭೂಮಿ ಸಾಗುವಳಿ ಮಾಡುವಂತಿರಬೇಕು. ಹಂಚಿಕೆ ಮಾಡಲು ಖರೀದಿಸುವ ಭೂಮಿ ಕಾನೂನು ತೊಡಕುಗಳಿಂದ ಮುಕ್ತವಾಗಿರಬೇಕು. ಕೆಲವು ಭೂಮಿಗಳ ವರ್ಗಾವಣೆ ನಿಷೇಧ ಕಾಯಿದೆ 1978, ಭೂ ಸುಧಾರಣಾ ಮಸೂದೆ, ಕರ್ನಾಟಕ ಅರಣ್ಯ ಮಸೂದೆ, ಮತ್ತು ಭೂ ಮಂಜೂರಾತಿ ನಿಯಮಗಳಡಿಯಲ್ಲಿ ಉಲ್ಲಂಘನೆಯಾಗಿರಬಾರದು.
4. ಖರೀದಿಸಿದ ಜಮೀನನ್ನು ಖರೀದಿಸಿದ ಜಮೀನಿನ ಸುತ್ತ 5 ಕಿಮೀ ವ್ಯಾಪ್ತಿಯೊಳಗೆ

ವಾಸವಿರುವ ಫಲಾನುಭವಿಗೆ ಕೊಡಬಹುದು.

5. ಮಂಜೂರಾತಿಗೆ ಬೇಕಾದ ಮುಖ್ಯ ದಾಖಲಾತಿಗಳು, ಪಹಣಿ, ಋಣಭಾರ ಪತ್ರ, ಬ್ಯಾಂಕ್‌ಗಳಿಂದ ಬೇಬಾಕಿ ಪ್ರಮಾಣ ಪತ್ರ, ಖರೀದಿ ಪತ್ರ /ಹಕ್ಕು ಪತ್ರ.(ಖಾತೆ) ಮತ್ತು ಮಾರಾಟಗಾರನಿಂದ ಭೂಮಿ ಮಾರಾಟ ಮಾಡುವ ಬಗ್ಗೆ ಒಪ್ಪಂದ ಪತ್ರ.– ಸಂಬಂಧ ಪಟ್ಟ ಅಧಿಕಾರಿ ಇವೆಲ್ಲವನ್ನೂ ಪರಿಶೀಲಿಸಬೇಕು ಮತ್ತು ಸ್ಥಳ ಪರಿಶೀಲನೆ ಮಾಡಬೇಕು. ನಂತರ ಜಿಲ್ಲಾಧಿಕಾರಿಗಳು ಅಧ್ಯಕ್ಷರಾಗಿರುವ ಜಿಲ್ಲಾ ಅನುಷ್ಠಾನ ಸಮಿತಿಗೆ ಸಲ್ಲಿಸಬೇಕು.

6. ಜಿಲ್ಲಾ ಸಮಿತಿಯು ಎಲ್ಲ ಅನುಮೋದಿತ ಪ್ರಸ್ತಾವನೆಗಳನ್ನು ಧೃಢೀಕೃತ ದಾಖಲೆಗಳೊಡನೆ ಅನುಮೊದನೆಗಾಗಿ ಕೇಂದ್ರ ಕಛೇರಿಗೆ ಕಳುಹಿಸಬೇಕು.

7. ಫಲಾನುಭವಿಗೆ ಖರೀದಿಸುವ ಜಮೀನನ್ನು ತೋರಿಸಬೇಕು ಮತ್ತು ಅದನ್ನು ಎಷ್ಟು ಕ್ರಯಕ್ಕೆ ಖರೀದಿಸಲಾಗುತ್ತಿದೆ ಎಂದು ತಿಳಿಸಬೇಕು.

8. ಫಲಾನುಭವಿಗೆ ಜಮೀನನ್ನು ರಿಜಿಸ್ಟರ್ ಮಾಡಿಸುವ ಸಮಯದಲ್ಲಿ ಅದನ್ನು ಮಹರ್ಷಿ ವಾಲ್ಮೀಕಿ ಪರಿಶಿಷ್ಠ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತದ ಹೆಸರಿನಲ್ಲಿ ಅಡಮಾನ ಮಾಡಿಸಿಕೊಳ್ಳಬೇಕು ಮತ್ತು ಪಹಣಿಯಲ್ಲಿ ದಾಖಲಿಸಬೇಕು. ಆ ಪಹಣಿಯ ಒಂದು ಪ್ರತಿಯನ್ನು ಫಲಾನುಭವಿಗೆ ಸಂಬಂಧಿಸಿದ ಕಡತದಲ್ಲಿ ರಕ್ಷಿಸಿಡಬೇಕು.

9. ಫಲಾನುಭವಿ ಹೆಸರಿನಲ್ಲಿ ರಿಜಿಸ್ಟರ್ ಮಾಡಿದ ಜಮೀನನ್ನು ಸರ್ವೇಯರ್ ಅವರಿಂದ ಅಳತೆ ಮಾಡಿಸಿ ಹಸ್ತಾಂತರಿಸಬೇಕು. ಈ ಎಲ್ಲ ಕಾರ್ಯವನ್ನು ಒಂದು ಮಹಜರಿನಲ್ಲಿ ಬರೆಯಿಸಿ ಕಡತದಲ್ಲಿಡಬೇಕು.

10. ನಿಗಮವು ಇತರ ಇಲಾಖೆಗಳಾದ ನೀರಾವರಿ, ಕೃಷಿ, ತೋಟಗಾರಿಕೆ, ಜಲಾನಯನ ಪ್ರದೇಶಾಭಿವೃದ್ಧಿ, ಇಲಾಖೆಗಳ ಸಮನ್ವಯತೆಯನ್ನು ಸಾಧಿಸಿ ಫಲಾನುಭವಿಗೆ ಹೆಚ್ಚು ಲಾಭವಾಗುವಂತೆ ಸಹಕರಿಸಬೇಕು.

6. <u>ಭೂಮಿ ಖರೀದಿ ಯೋಜನೆಯಲ್ಲಿ ಕೊಡಬೇಕಾದ ದಾಖಲೆಗಳು.</u>

1. ಜಿಲ್ಲಾ ಅನುಷ್ಠಾನ ಸಮಿತಿಯ ಸಭೆಯ ನಡವಳಿಕೆಗಳು.
2. ಫಲಾನುಭವಿಗಳು ಭೂರಹಿತರು ಮತ್ತು ಕೃಷಿ ಕೂಲಿಕಾರರೆಂಬ ದೃಢೀಕರಣ ಪತ್ರ..
3. ಫಲಾನುಭವಿಗಳ ಮತ್ತು ಭೂಮಾಲೀಕರ ಜಾತಿ ದೃಢೀಕರಣ ಪತ್ರಗಳು.
4. ಪ್ರಪತ್ರ–1 ರಲ್ಲಿ ತಹಸೀಲ್ದಾರ್ ಅಥವಾ ಅಸಿಸ್ಟಂಟ್ ಕಮೀಷನರ್ ಅವರಿಂದ ಪ್ರಮಾಣ ಪತ್ರ.
5. ಭೂಮಿಯನ್ನು ತಪಾಸಣೆ ಮಾಡಿದ ಬಗ್ಗೆ ತಾಲೂಕು ಅಭಿವೃದ್ಧಿ ಅಧಿಕಾರಿ/ನಿಗಮದ ಜಿಲ್ಲಾ ವ್ಯವಸ್ಥಾಪಕರಿಂದ/ಮೇನೇಜರ್ ಅವರಿಂದ ಪ್ರಪತ್ರ–2 ರಲ್ಲಿ ಪ್ರಮಾಣ ಪತ್ರ.

6. ಸಬ್ ರಿಜಿಸ್ಟ್ರಾರ್ ಅವರಿಂದ ಭೂಮಿಯ ರಿಜಿಸ್ಟರ್ ಮೌಲ್ಯದ ಬಗ್ಗೆ ಪಟ್ಟಿ.
7. ಫಲಾನುಭವಿಯನ್ನು ಆಯ್ಕೆ ಮಾಡಿದ ಬಗ್ಗೆ ಗ್ರಾಮಸಭೆಯ ನಿರ್ಣಯ.
8. ಸೇವೆ ಪಡೆಯುತ್ತಿರುವ ಬ್ಯಾಂಕುಗಳಿಂದ ಬೇಬಾಕಿ ಪ್ರಮಾಣ ಪತ್ರ.
9. ಭೂಮಿಯ ಒಂದು ಕಚ್ಚಾ ನಕ್ಷೆ.
10. ಕಳೆದ 13 ವರ್ಷಗಳಿಂದ ಋಣಭಾರ ಪತ್ರ.
11. ಭೂ ಮಾಲೀಕರಿಂದ ಜಮೀನು ಮಾರುವ ಬಗ್ಗೆ ಕರಾರು ಪತ್ರ.
12. ಕಾನೂನು ಸಲಹಾಗಾರರಿಂದ ಅಭಿಪ್ರಾಯ.
13. ಭೂ ಪರಿಶೀಲನೆಯ ಸಮಯದ ವೀಡಿಯೋ ರಿಕಾರ್ಡಿಂಗ್‌ನ ಸಿ.ಡಿ.
14. ಖುಷ್ಕಿ ಜಮೀನಾಗಿದ್ದಲ್ಲಿ ಬೇಸಾಯ ಯೋಗ್ಯವೇ ಎಂದು ಕೃಷಿ ಇಲಾಖೆಯಿಂದ ಪ್ರಮಾಣ ಪತ್ರ, ನೀರಾವರಿ/ತೋಟದ ಜಮೀನಾಗಿದ್ದರೆ, ನೀರಿನ ಮೂಲದ ಬಗ್ಗೆ ನೀರಾವರಿ ಇಲಾಖೆಯಿಂದ ಪ್ರಮಾಣ ಪತ್ರ.

7. <u>ಕೆಲಸದ ಮರು ಪರಿಶೀಲನೆ.</u>

ಯೋಜನೆಯ ಪ್ರಗತಿಯನ್ನು ಪ್ರತಿ ತಿಂಗಳೂ ತಾಲೂಕಿನ/ ಜಿಲ್ಲಾ ಮಟ್ಟದ, ರಾಜ್ಯಮಟ್ಟದ ಅಧಕಾರಿಗಳು, ಕಾರ್ಯನಿರ್ವಹಣಾಧಿಕಾರಿಗಳು, ನಿಗಮದ ಆಡಳಿತ ನಿರ್ದೇಶಕರು ಪರಿಶೀಲಿಸುವರು. ಜೊತೆಗೆ ಸರ್ಕಾರದ ಕಾರ್ಯದರ್ಶಿಯವರು ಎಂ.ಪಿ.ಐ.ಸಿ. ಸಭೆಗಳಲ್ಲಿ ಪರಿಶೀಲಿಸುವರು. 2009–10 ರಿಂದ 2013–14 ರ ಅವಧಿಯಲ್ಲಿ ಭೂಮಿ ಖರೀದಿ ಯೋಜನೆಯ ಭೌತಿಕ ಹಾಗೂ ಆರ್ಥಿಕ ಪ್ರಗತಿಯು ಈ ಕೆಳಗಿನಂತಿದೆ.

| ವರ್ಷ. | ಖರೀದಿಸಿ ಭೂಮಿ ಎಕರೆಗಳಲ್ಲಿ. | | | ಭೂಮಿಯ ಬೆಲೆ. ಲಕ್ಷ ರೂಗಳಲ್ಲಿ. | ಫಲಾನುಭವಿಗಳ ಸಂಖ್ಯೆ. |
|---|---|---|---|---|---|
| | ನೀರಾವರಿ | ಖುಷ್ಕಿ. | ತೋಟ. | | |
| 2009–10 | 32 | 178 | 0 | 125.42 | 121 |
| 2010–11 | 94 | 241.07 | 0 | 331.02 | 221 |
| 2011–12 | 50.13 | 163.15 | 0 | 291.54 | 134 |
| 2012–13 | 142.31 | 137.58 | 4 | 509.48 | 217 |
| 2013–14 | 84.29 | 48.23 | 39.36 | 774.94 | 151 |
| ಒಟ್ಟು. | 402.73 | 768.03 | .43.96 | 2032.40 | 844 |

ಜಿಲ್ಲಾವಾರು ವರ್ಷಾವಾರು ಫಲಾನುಭವಿಗಳ ಪಟ್ಟಿ ಮತ್ತು ಹಂಚಿಕೆ ಮಾಡಲಾದ ಭೂಮಿಯ ವಿಸ್ತೀರ್ಣದ ವಿವರಗಳನ್ನು ಅನುಬಂಧ 1 ರಿಂದ 5 ರಲ್ಲಿ ಕೊಡಲಾಗಿದೆ.

8. <u>ಮೌಲ್ಯಮಾಪನ ವ್ಯಾಪ್ತಿ ಮತ್ತು ಉದ್ದೇಶ.</u>

ಮೌಲ್ಯ ಮಾಪನವನ್ನು ಅನುಬಂಧ 1ರಿಂದ 5 ರಲ್ಲಿ ತೋರಿಸಲಾದ ಜಿಲ್ಲೆಗಳಲ್ಲಿ 2009–10 ರಿಂದ 2013–14 ರ 5 ವರ್ಷಗಳ ಅವಧಿಗೆ ಮಾಡಲಾಗಿದೆ. ಅಧ್ಯಯನದ ಉದ್ದೇಶವು ಯೋಜನೆಯಲ್ಲಿ ಸಾಧಿಸಲು ಉದ್ದೇಶಿಸಿದ ಗುರಿಗಳನ್ನು ತಲುಪಲಾಗಿದೆಯೋ ಇಲ್ಲವೋ ಎಂದು ತಿಳಿಯುವುದಾಗಿದೆ. ಯೋಜನೆಗೆ ಸಂಬಂಧಿಸದಂತೆ ಈ ಕೆಳಗೆ ತೋರಿಸಿದ ತೊಡಕುಗಳೇನಾದರೂ ಉದ್ಭವಿಸಿದವೇ :

ಏ) ಹಂಚಿಕೆ ಮಾಡಲಾದ ಜಮೀನು ಫಲವತ್ತಾಗಿಲ್ಲ/ಕೃಷಿಗೆ ಯೋಗ್ಯವಾಗಿಲ್ಲ.

ಬಿ) ಫಲಾನುಭವಿಗಳಿಗೆ ಹಂಚಿಕೆ ಮಾಡಲಾದ ಭೂಮಿಯು ಸಮತಟ್ಟಾಗಿಲ್ಲದೇ ಮಟ್ಟ ಮಾಡಲು ಹಣ ಖರ್ಚು ಣಮಾಡಬೇಕಾಗಿರುವುದು,

ಸಿ)ಫಲಾನುಭವಿಗಳಿಗೆ ಹಂಚಿಕೆ ಮಾಡಲಾದ ಭೂಮಿಯಲ್ಲಿ ತಕ್ಷಣವೇ ಸಾಗುವಳಿ ಪ್ರಾರಂಭಿಸಿರುವುದಿಲ್ಲ.

ಡಿ) ಸಾಲ ವಸೂಲಾತಿ ಕ್ರಮಬದ್ಧವಾಗಿರುವುದಿಲ್ಲ.

ಇ) ಉತ್ತಮ ಬೆಳೆ ಬೆಳೆಯಲು ಬೇಕಾದ ಸೂಕ್ತ ತಾಂತ್ರಿಕತೆಯ ಅಲಭ್ಯತೆ.

ಎಫ್) ಇತರೆ ಇಲಾಖೆಗಳು ಅಂದರೆ ಕೃಷಿ, ತೋಟಗಾರಿಕೆ, ಜಲಾನಯನ ಅಭಿವೃದ್ಧಿ ಇಲಾಖೆಗಳು ಒಟ್ಟುಗೂಡದಿರುವುದು.

ಪರಿಶಿಷ್ಠ ಪಂಗಡದ ಮಹಿಳೆಯರ ಸಾಮಾಜಿಕ ಮತು ಆರ್ಥಿಕ ಸ್ಥಿತಿ ಉತ್ತಮವಾಗಿದೆಯೇ ಎಂದು ತಿಳಿಯುವುದೂ ಆಗಿರುತ್ತದೆ. ಯೋಜನೆಯ ಮಾರ್ಗದರ್ಶನಗಳ ಅಥವಾ ಅನುಷ್ಠಾನದಲ್ಲಿ ಸುಧಾರಣೆಗಳ ಬಗ್ಗೆ ಸುಧಾರಣೆಗಳಾಗಬೇಕಿದ್ದಲ್ಲಿ ಅವುಗಳಿಗೆ ಸ್ವಾಗತ ಏಕೆಂದರೆ ಅದರಿಂದ ಯೋಜನೆಯ ಅನುಷ್ಠಾನದಿಂದ ಉತ್ತಮ ಫಲಿತಾಂಶ ನಿರೀಕ್ಷಿಸಬಹುದು.

9.<u>ಹಿಂದಿನ ಮೌಲ್ಯಮಾಪನಗಳು.</u>

ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು ಈ ಯೋಜನೆ ಬಗ್ಗೆ ಹಿಂದೆ ಮೌಲ್ಯಮಾಪನ ಮಾಡಿದ್ದರ ಬಗ್ಗೆ ತಿಳಿದಿಲ್ಲವೆಂದು ಹೇಳುತ್ತಾರೆ. ಆದರೂ 2007–08 ಮತ್ತು 2008–09 ರಲ್ಲಿ ಮೈಸೂರು ವಿಶ್ವವಿದ್ಯಾಲಯದ ಡಾ. ಎಂ.ಆರ್. ಗಂಗಾಧರ್ ಅವರು ಪರಿಶಿಷ್ಠ ಪಂಗಡದ ಭೂ ರಹಿತ ಕೂಲಿ ಕಾರ್ಮಿಕ ಮಹಿಳೆಯರಿಗಾಗಿ ಜಾರಿ ಮಾಡಲಾದ ಭೂ ಒಡೆತನ ಯೋಜನೆಯ ಮೌಲ್ಯಮಾಪನ

ಮಾಡಿರುತ್ತಾರೆ. ಅದರಲ್ಲಿ ಅವರು ಅನೇಕ ಪ್ರಾಮುಖ್ಯವಾದ ಅಂಶಗಳನ್ನು ಕಂಡುಹಿಡಿದಿರುತ್ತಾರೆ ಮತ್ತು ಅನೇಕ ಒಳ್ಳೆಯ ಸಲಹೆಗಳನ್ನು ನೀಡಿದ್ದು ಅವು ಇಂದಿನ ಯೋಜನೆಯ ಅಧ್ಯಯನದಲ್ಲೂ ಅಳವಡಿಸಿಕೊಳ್ಳಲಾಗಿದೆ.

10. ಮೌಲ್ಯಮಾಪನದ ಬಗ್ಗೆ ಪ್ರಶ್ನೆಗಳು(ಎಲ್ಲವೂ ಸೇರಿದ ಆದರೆ ಪರಿಪೂರ್ಣವಲ್ಲದ)

1. ಯೋಜನೆಯ ಅನುಷ್ಠಾನದಲ್ಲಿ ಫಲಾನುಭವಿಯ ಅರ್ಹತೆಗಳನ್ನು ಪಾಲಿಸಲಾಗಿದೆಯೇ? ಇಲ್ಲದಿದ್ದರೆ, ತಪ್ಪಾಗಿ ಆಯ್ಕೆ ಮಾಡಲಾದ ಫಲಾನುಭವಿಯ ಹೆಸರು, ವಿಳಾಸ ಜಿಲ್ಲೆ ಮತ್ತು ವರ್ಷ ತಿಳಿಸಿ.( ಹಿಂದಿನ ಪ್ಯಾರಾದಲ್ಲಿ ಅಧ್ಯಯನ ಮಾಡಿದ ಫಲಿತಾಂಶದಲ್ಲಿ ಒಬ್ಬರು ಪುರುಷ ಮಾಜಿ ಸೈನಿಕ ಮತ್ತು ಒಬ್ಬರು ಪರಿಶಿಷ್ಠ ಜಾತಿ ಎಂ.ಬಿ.ಬಿ.ಎಸ್. ಓದಿದ ಮಹಿಳೆಯನ್ನು ಫಲಾನುಭವಿಗಳಾಗಿ ತಪ್ಪಾಗಿ ಆರಿಸಿರುವುದು ಕಂಡುಬಂದಿದೆ)
2. ಖರೀದಿಸಲಾದ ಜಮೀನಿನ ಮಾಲೀಕರ ಅರ್ಹತೆಯ ಮಾನದಂಡಗಳನ್ನು ಪಾಲಿಸಲಾಗಿದೆಯೇ? ಇಲ್ಲದಿದ್ದರೆ, ತಪ್ಪಾಗಿ ಆಯ್ಕೆ ಮಾಡಿದ ಭೂಮಿಯ ಸರ್ವೇ ನಂ. ಗ್ರಾಮ, ತಾಲೂಕು, ಜಿಲ್ಲೆ ಮತ್ತು ವರ್ಷಗಳನ್ನು ತಿಳಿಸಿರಿ.
3. ಫಲಾನುಭವಿಗಳನ್ನು ಗ್ರಾಮಸಭೆಯಲ್ಲಿ ಆರಿಸಲಾಗಿದೆ, ಈ ಅರ್ಹ ಮತ್ತು ಅಗತ್ಯವಿರುವ ಫಲಾನುಭವಿಗಳ ಆಯ್ಕೆಯಲ್ಲಿ ಪಾರದರ್ಶಕತೆಯನ್ನು ಎಷ್ಟರ ಮಟ್ಟಿಗೆ ಪಾಲಿಸಲಾಗಿದೆ? ಈ ಕಾರ್ಯವಿಧಾನವನ್ನು ಹೆಚ್ಚು ಪಾರದರ್ಶಕವಾಗಿರುವಂತೆ ಮಾಡಲು ಏನಾದರೂ ಸಲಹೆಗಳಿವೆಯೇ? ಅದರಿಂದ ಹೆಚ್ಚಿನ ಸಂಖ್ಯೆಯ ಮಹಿಳಾ ಕೃಷಿ ಕೂಲಿಕಾರರನ್ನು ಯೋಜನೆಯಲ್ಲಿ ಸೇರಿಸಿಕೊಳ್ಳಬಹುದೇ?
4. ಫಲಾನುಭವಿಗಳು ಯಾವ ಜಾತಿ/ಪಂಗಡಗಳಿಗೆ ಸೇರಿದವರಾಗಿದ್ದರು?
5. ಸಮಾಜದಲ್ಲಿ, ಈ ಯೋಜನೆಯಲ್ಲಿ ಜಮೀನು ಖರೀದಿಗೆ ನೀಡಿದವರ ಸ್ಥಾನ ಮಾನ ಏನು?
6. ಈ ಯೋಜನೆಯಲ್ಲಿ ಜಮೀನು ಹಂಚಿಕೆ ಮಾಡುವ ಮೊದಲು ಎಷ್ಟು ಫಲಾನುಭವಿಗಳ ಕುಟುಂಬದವರು ಜಮೀನನ್ನು ಹೊಂದಿದ್ದರು?
7. ಹಂಚಿಕೆ ಮಾಡುವ ಜಮೀನನ್ನು ವಾಸ್ತವವಾಗಿ ಯಾರು ಗುರುತಿಸುವರು. ಅದು ಜಮೀನು ಪಡೆದುಕೊಳ್ಳುವ ನಿರೀಕ್ಷಿತ ಫಲಾನುಭವಿಯೇ? ನಿಗಮದ ಅಧಿಕಾರಿಗಳೇ, ಅಥವಾ ಮದ್ಯವರ್ತಿಯೇ? ದಯವಿಟ್ಟು ಮದ್ಯವರ್ತಿಗಳು ಭಾಗಿಗಳಾಗಿದ್ದಲ್ಲಿ ಅವರು ಹಾಗೆ ಮದ್ಯಸ್ತಿಕೆ ವಹಿಸಲು ಕಾರಣವಾದ ಹಣ, ಪ್ರೋತ್ಸಾಹ ಇತ್ಯಾದಿ ವಿವರಗಳನ್ನು ದಾಖಲಿಸಿ.

8. ಒಬ್ಬ ಫಲಾನುಭವಿಯನ್ನು ಗ್ರಾಮಸಭೆಯಲ್ಲಿ ಆಯ್ಕೆಮಾಡಿದ ಬಳಿಕ, ಆಕೆಗೆ ಭೂಮಿ ಹಂಚಿಕೆ ಮಾಡಲು ಎಷ್ಟು ಸಮಯ ತೆಗೆದು ಕೊಳ್ಳಲಾಗಿದೆ. ಹಂಚಿಕೆ ಮಾಡುವ ಕಾರ್ಯವಿಧಾನಗಳಲ್ಲಿ ಯಾವ ಭಾಗ ಅತಿ ಹೆಚ್ಚು ಸಮಯ ತೆಗೆದುಕೊಂಡಿದೆ? ಹಂಚಿಕೆ ಕಾರ್ಯವಿಧಾನದಲ್ಲಿ ವಿಳಂಬವನ್ನು ಹೇಗೆ ಕಡಿಮೆ ಮಾಡಬಹುದು?
9. ಫಲಾನುಭವಿಗಳು ತಮಗೆ ಹಂಚಿಕೆ ಮಾಡಲಾದ ಭೂಮಿಯನ್ನು ತಮ್ಮ ಸುಫರ್ದಿಗೆ ತೆದುಕೊಳ್ಳುವುದರಲ್ಲಿ ಏನಾದರೂ ವಿಳಂಬವಾಗುತ್ತಿದೆಯೇ. ಹಾಗಾದರೆ ಅದಕ್ಕೆ ಕಾರಣಗಳೇನು?
10. ಭೂಮಿಯನ್ನು ಹಂಚಿಕೆ ಮಾಡಿದ ಋತುವಿನಲ್ಲೇ/ವರ್ಷದಲ್ಲೇ ಫಲಾನುಭವಿಯೇ ಸಾಗುವಳಿ ಮಾಡುತ್ತಿದ್ದಾರೆಯೇ ಅಥವಾ ಗುತ್ತಿಗೆ ಆಧಾರದ ಮೇಲೆ ಸಾಗುವಳಿ ಮಾಡುತ್ತಿದ್ದಾರೆಯೇ? ಹಾಗಿಲ್ಲದಿದ್ದರೆ ತಡವಾಗಿದ್ದಕ್ಕೆ ಜಿಲ್ಲಾವಾರು ಕಾರಣಗಳನ್ನು ಕೊಡಿ.
11. ಖುಷ್ಕಿ, ನೀರಾವರಿ ಮತ್ತು ತೋಟದ ಜಮೀನುಗಳಲ್ಲಿ ಫಲಾನುಭವಿಗಳು ಯಾವ ಬಗೆಯ ಜಮೀನುಗಳನ್ನು ಪಡೆಯಲು ಇಷ್ಟ ಪಡುತ್ತಾರೆ? ಏಕೆ ಹಾಗೆ? ಬೇರೆ ಬೇರೆ ಜಿಲ್ಲೆಗಳಲ್ಲಿ ಬೇರೆ ಬೇರೆ ಬಗೆಯ ಜಮೀನುಗಳಿಗೆ ಇಷ್ಟ ಪಡುತ್ತಾರೆಯೇ, ಹೌದಾದರೆ ಅವರ ಇಷ್ಟಗಳನ್ನು ಜಿಲ್ಲಾವಾರು ದಾಖಲಿಸಿ.
12. ಎಷ್ಟು ಪ್ರಕರಣಗಳಲ್ಲಿ ತಮಗೆ ಹಂಚಿಕೆಯಾದ ಖುಷ್ಕಿ ಜಮೀನುಗಳಲ್ಲಿ ಹಂಚಿಕೆಯಾದ ಒಂದು ವರ್ಷದೊಳಗೇ ನಿಗಮದಿಂದ ಅಥವಾ ಫಲಾನುಭವಿಯೇ ಕೊಳವೆ ಭಾವಿಗಳನ್ನು ಕೊರೆಸಿರುತ್ತಾರೆ.?
13. ಯೋಜನೆಯ ಅನುಷ್ಠಾನದಿಂದ ಫಲಾನುಭವಿಯ ಅಥವಾ ಆಕೆಯ ಕುಟುಂಬದ ಸಾಮಾಜಿಕ ಆರ್ಥಿಕ ಸ್ಥಾನಮಾನ ಕಣ್ಣಿಗೆ ಕಾಣುವಂತೆ ಸುಧಾರಣೆಯಾಗಿದೆಯೇ? ಹೌದಾದರೆ ಬದಲಾವಣೆಗೆ ಕಾರಣವಾದ ಅಂಶಗಳೇನು?
14. ಫಲಾನುಭವಿಗಳನ್ನು ನೈಸರ್ಗಿಕ ವಿಪತ್ತುಗಳಿಂದ ರಕ್ಷಣೆ ಪಡೆದುಕೊಳ್ಳಲು ಫಸಲು ವಿಮಾ ಯೋಜನೆಯ ಪ್ರಯೋಜನಗಳನ್ನು ಪಡೆದುಕೊಳ್ಳುತ್ತಿದ್ದಾರೆಯೇ ಇಲ್ಲದಿದ್ದರೆ ಏಕೆ ಪಡೆದುಕೊಳ್ಳಬಾರದು.?
15. ಹಂಚಿಕೆ ಮಾಡಲಾದ ಭೂಮಿಯನ್ನು ಗುತ್ತಿಗೆಗೆ ನೀಡಲಾಗಿದೆಯೇ, ಅಥವಾ ಮಾರಾಟ ಮಾಡಲಾಗಿದೆಯೇ, ಆಥವಾ ಕೃಷಿಯೇತರ ಜಮೀನಾಗಿ ಪರಿವರ್ತಿಸಲಾಗಿದೆಯೇ? ಹೌದಾದರೆ ಎಷ್ಟು ಭಾಗ? ಜಿಲ್ಲಾವಾರು, ಫಲಾನುಭವಿ/ಜಮೀನುಗಳ ವಿವರಗಳನ್ನು ಕೊಡಿ.
16. ಡಾ. ಎಂ.ಆರ್, ಗಂಗಾಧರ್ ಅವರು ಪರಿಶಿಷ್ಠ ಪಂಗಡದ ಮಹಿಳೆಯರ ಭೂ ಒಡೆತನ

ಯೋಜನೆಯ ಅನುಷ್ಠಾನದ ಮೌಲ್ಯಮಾಪನವನ್ನು 2007–08 ರಿಂದ 2008–09 ರ ಅವಧಿಗೆ ಮಾಡಿದ್ದರಲ್ಲಿ ಶೇ.89.67 ಪ್ರಕರಣಗಳಲ್ಲಿ ಸಾಲ ವಸೂಲಾತಿಯು ಕೇವಲ ಶೇ.47.62 ಇರುವುದು ಕಂಡುಬಂದಿದೆ, ಸಾಲ ಮರುಪಾವತಿ ಮಾಡದಿರಲು ಅಥವಾ ತಡಮಾಡಲು ಮಳೆಯಿಲ್ಲದೇ ಹೋಗಿದ್ದು ಕಾರಣವೆಂದು ಫಲಾನುಭವಿಗಳು ಹೇಳಿರುತ್ತಾರೆ. ಈ ಯೋಜನೆಯಲ್ಲಿ ಸಾಲ ವಸೂಲಾತಿ ವಿಷಯದಲ್ಲಿ ಜಿಲ್ಲಾವಾರು ಪರಿಸ್ಥಿತಿ ಏನು? ಅತೃಪ್ತಿಕರ ಸಾಲ ವಸೂಲಾತಿಗೆ ಕಾರಣಗಳೇನು?

17. ಮೇಲಿನ ಪ್ರಶ್ನೆಗಳಿಗೆ ಕೊಟ್ಟ ಉತ್ತರಗಳ ಆಧಾರದ ಮೇಲೆ ಯೋಜನೆಯನ್ನು ಉತ್ತಮ ಪಡಿಸಲು ನಿಮ್ಮ ಸಲಹೆಗಳೇನು?

## 11. ಮೌಲ್ಯಮಾಪನಕ್ಕೆ ಫಲಾನುಭವಿಗಳ ಮಾದರಿ ಆಯ್ಕೆ ವಿಧಾನ

ಮೌಲ್ಯಮಾಪನ ಅಧ್ಯಯನವನ್ನು 2009–10ರಿಂದ 2013–14 ರ 5 ವರ್ಷಗಳ ಅವಧಿಗೆ ಮಾಡಬೇಕಾಗಿರುತ್ತದೆ. ಖುಷ್ಕಿ, ನೀರಾವರಿ, ಮತ್ತು ತೋಟದ ಜಮೀನುಗಳನ್ನು ಹಂಚಿಕೆ ಮಾಡಿದ ಜಿಲ್ಲಾವಾರು ವಿಸ್ತೀರ್ಣ ಮತ್ತು ಫಲಾನುಭವಿಗಳ ಸಂಖ್ಯೆಯನ್ನು 2009–10ರಿಂದ 2013–14 ರ 5 ವರ್ಷಗಳ ಅವಧಿಗೆ ಅನುಬಂಧ 1 ರಿಂದ 5 ರಲ್ಲಿ ಕೊಡಲಾಗಿದೆ. ಮಾದರಿ ಆಯ್ಕೆಯನ್ನು ಸ್ಟ್ರಾಟಿಫೈಡ್ ರ್‍ಯಾಂಡಮ್ ವಿಧಾನದಿಂದ ಖುಷ್ಕಿ, ನೀರಾವರಿ, ಮತ್ತು ತೋಟದ ಜಮೀನುಗಳನ್ನು ಒಳಗೊಂಡಂತೆ ಇಡೀ ರಾಜ್ಯಕ್ಕೆ ಅನ್ವಯಿಸುವ ಹಾಗೆ ವರ್ಷಂಪ್ರತಿ ಮಾಡಲಾಗಿದೆ. ಪ್ರತಿ ಹಂತದಲ್ಲಿ ಪ್ರತಿ ವರ್ಷ ಶೇ.10 ರಷ್ಟು ಫಲಾನುಭವಿಗಳನ್ನು ಮಾದರಿಗೆ (ಮುಂದಿನ ಹೆಚ್ಚಿನ ಪೂರ್ಣಾಂಕಕ್ಕೆ ರೌಂಡ್ ಆಫ್ ಮಾಡಿದೆ) ಆರಿಸಿಕೊಳ್ಳಲಾಗಿದೆ. ಮಾದರಿ ಆಯ್ಕೆ ಮಾಡುವಾಗ ಯೋಜನೆ ಅನುಷ್ಠಾನ ಮಾಡಿದ ಎಲ್ಲ ಜಿಲ್ಲೆಗಳನ್ನು ಗಣನೆಗೆ ತೆಗೆದುಕೊಳ್ಳಲಾಗಿದೆ. ಮಾದರಿಯ ಫಲಾನುಭವಿಗಳು 85 ಆಗಿದ್ದು ಒಟ್ಟು ಫಲಾನುಭವಿಗಳು 844 ಇರುತ್ತಾರೆ.

ಮೌಲ್ಯಮಾಪನಕ್ಕೆ ಫಲಾನುಭವಿಗಳನ್ನು ವೈಯುಕ್ತಿಕವಾಗಿ ಸಂದರ್ಶನ ನಡೆಸಬೇಕಾಗುತ್ತದೆ ಮತ್ತು ತಾಲೂಕು ಜಿಲ್ಲಾ ಮಟ್ಟದ ಮತ್ತು ರಾಜ್ಯಮಟ್ಟದ ನಿಗಮದ ಅಧಿಕಾರಿಗಳೊಡನೆ ಫಲಾನುಭವಿಗಳ ಸಮಸ್ಯೆಗಳು ಮತ್ತು ಅವರ ಅಗತ್ಯಗಳ ಬಗ್ಗೆ ವಿಷಯವನ್ನು ಕೇಂದ್ರವಾಗಿಸಿಕೊಂಡು ಗುಂಪು ಚರ್ಚೆ ನಡೆಸಬೇಕಗುತ್ತದೆ. ವೈಯುಕ್ತಿಕವಾಗಿ ಸಂರ್ಶನ ನಡೆಸಿದ ಫಲಾನುಭವಿಗಳ ಫೋಟೋಗಳನ್ನು ಅವರ ಜಮೀನುಗಳಲ್ಲಿ ತೆಗೆದುಕೊಂಡು ಅದನ್ನು ವರದಿಯ ಒಂದು ಭಾಗವಾಗಿ ಬಳಸಿಕೊಳ್ಳಬೇಕು. (ಅದರ ಮೃದು ಪ್ರತಿ ಸಾಕಾಗುತ್ತದೆ) ಇದರಿಂದ ಅವರಿಗೆ ಕೊಟ್ಟ ಜಮೀನುಗಳನ್ನು ಪೂರ್ಣ ಅಧ್ಯಯನ ಮಾಡಿದಂತಾಗುತ್ತದೆ.

ಪ್ರಶ್ನೆ 3, 4, 7 ಮತ್ತು 14 ರ ಉತ್ತರಗಳನ್ನು ಜನಸಂಖ್ಯೆ ಆಧಾರದ ಮೇಲೆ ಮಾಡುವುದಾಗಿದ್ದು ಅಧ್ಯಯನಕ್ಕಾಗಿ ಆರಿಸಿದ ಮಾದರಿ ಫಲಾನುಭವಿ ಸಂಖ್ಯೆಯ ಮೇಲಿಂದಲ್ಲ.

12. ವೇಳಾ ಪಟ್ಟಿ.

ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕರು ಎಲ್ಲ ಜಿಲ್ಲಾ ಅಧಿಕಾರಿಗಳಿಗೆ, ಬ್ಯಾಂಕುಗಳಿಗೆ ಮತ್ತು ಸಂಬಂಧ ಪಟ್ಟವರಿಗೆಲ್ಲಾ ಮೌಲ್ಯಮಾಪನ ಸಮಾಲೋಚನಾ ಸಂಸ್ಥೆಯವರಿಗೆ ಬೇಕಾದ ಮಾಹಿತಿ ನೀಡಿ ಅಧ್ಯಯನವನ್ನು ಸಕಾಲದಲ್ಲಿ ಪೂರ್ಣಗೊಳಿಸಲು ಸಹಕರಿಸಲು ಕೋರಿದೆ. ಜಿಲ್ಲಾವಾರು ಫಲಾನುಭವಿಗಳ ಮಾಹಿತಿ, ಮಾರ್ಗದರ್ಶನಗಳು, ಮತ್ತು ಯೋಜನೆಗೆ ಸಂಬಂಧಪಟ್ಟ ಸರ್ಕಾರಿ ಆದೇಶಗಳನ್ನು ಮೌಲ್ಯಮಾಪನ ಸಮಾಲೋಚನಾ ಸಂಸ್ಥೆಯವರಿಗೆ ನಿಗಮದ ವ್ಯವಸ್ಥಾಪಕ ನಿರ್ದೇಶಕರು ಒದಗಿಸಿಕೊಡುವರು.

ವೈಯುಕ್ತಿಕ ಸಂದರ್ಶನ ಮತ್ತು ಗುಂಪು ಚರ್ಚೆಗಳನ್ನು ತಾಲೂಕು, ಜಿಲ್ಲಾ ಮತ್ತು ರಾಜ್ಯ ಮಟ್ಟದಲ್ಲಿ ಎಲ್ಲ ಹೂಡಿಕೆದಾರರು ಯೋಜನೆಯ ಅನಷ್ಠಾನದ ಕಾರ್ಯವಿಧಾನಗಳನ್ನು ಸರಳಗೊಳಿಸಲು ಮತ್ತು ಸುಧಾರಣೆ ತರಲು ಸಲಹೆಗಳನ್ನು ನೀಡುವುದು. ಈ ಅಧ್ಯಯನವನ್ನು 6 ತಿಂಗಳೊಳಗೆ, (ಅನುಮೋದನೆಗಾಗಿ ತೆಗೆದುಕೊಳ್ಳುವ ಸಮಯವನ್ನು ಹೊರತು ಪಡಿಸಿ) ಮುಗಿಸಲು ಅಂದಾಜಿಸಲಾಗಿದೆ.

ಮೌಲ್ಯಮಾಪನ ಸಂಸ್ಥೆಯವರು ಈ ಕೆಳಗೆ ಸೂಚಿಸಿದ ಕಾಲ ಮಿತಿಯನ್ನು ಅನುಸರಿಸಿ ಅಧ್ಯಯನವನ್ನು ಮುಕ್ತಾಯಗೊಳಿಸುವುದಾಗಿ ನಿರೀಕ್ಷಿಸಲಾಗಿದೆ.

1. ಕಾರ್ಯವಿಧಾನದ ಯೋಜನೆಯನ್ನು ಸಲ್ಲಿಸುವುದು : ಕರಾರು ಪತ್ರ ಸಹಿ ಮಾಡಿದ ಒಂದು ತಿಂಗಳ ಒಳಗೆ.
2. ಕ್ಷೇತ್ರ ಮಾಹಿತಿ ಸಂಗ್ರಹಣೆ. ಕಾರ್ಯ ಯೋಜನೆ ಅನುಮೋದಿಸಿದ 3 ತಿಂಗಳೊಳಗೆ.
3. ಕರಡು ವರದಿ ಸಲ್ಲಿಕೆ. ಕ್ಷೇತ್ರ ಮಾಹಿತಿ ಸಂಗ್ರಹಣೆ ಬಳಿಕ ಒಂದು ತಿಂಗಳೊಳಗೆ.
4. ಅಂತಿಮ ವರದಿ ಸಲ್ಲಿಕೆ: ಕರಡು ವರದಿ ಸಲ್ಲಿಸಿದ ಒಂದು ತಿಂಗಳೊಳಗೆ.
5. ಒಟ್ಟು ಅವಧಿ. 6 ತಿಂಗಳು.

13. ಸಮಾಲೋಚಕರ ವಿದ್ಯಾರ್ಹತೆ.

ಸಮಾಲೋಚನ ಮೌಲ್ಯಮಾಪನ ಸಂಸ್ಥೆಯವರು ಮೌಲ್ಯಮಾಪನ ತಂಡದವರ ತಾಂತ್ರಿಕ ವಿದ್ಯಾರ್ಹತೆಯನ್ನು ಈ ಕೆಳಗಿನಂತೆ ತಮ್ಮಲ್ಲಿಟ್ಟುಕೊಂಡಿರತಕ್ಕದ್ದು ಮತ್ತು ಸಲ್ಲಿಸಬೇಕು.

1. ಸಾಮಾಜಿಕ ವಿಜ್ಞಾನಿ.
2. ಕೃಷಿ ವಿಜ್ಞಾನಿ,
3. ಸಂಖ್ಯಾ ಸಂಗ್ರಾಹಕರು,/ಸಂಶೋಧನಾ ಸಹಾಯಕರು, ಮತ್ತು ಮಾಹಿತಿ ಸಂಗ್ರಾಹಕರು.

ಯೋಜನೆಯ ಗುರಿಯು ಮಹಿಳೆಯರಾದ್ದರಿಂದ ಕಡೆಯ ಗುಂಪು ಮಹಿಳೆಯರಾಗಿರತಕ್ಕದ್ದು.

ಮೌಲ್ಯಮಾಪನ ಸಮಾಲೋಚನಾ ಸಂಸ್ಥೆಯವರಲ್ಲಿ ಈ ತರಹದ ಸಿಬ್ಬಂದಿ ಇಲ್ಲದಿದ್ದ ಪಕ್ಷದಲ್ಲಿ ಮೌಲ್ಯಮಾಪನಕ್ಕೆ ಸಮರ್ಥರೆಂದು ಪರಿಗಣಿಸಲಾಗುವುದಿಲ್ಲ.

14. ಮೌಲ್ಯಮಾಪನ ವರದಿಯಿಂದ ನಿರೀಕ್ಷಿಸಿದ ಗುಣಗಳು.

ಮೌಲ್ಯಮಾಪನ ವರದಿ ತಯಾರಿಸಲು ಈ ಕೆಳಗಿನ ಅಂಶಗಳನ್ನು ಒಳಗೊಂಡ ಆದರೆ ಸಂಪೂರ್ಣವಲ್ಲ, ಕಡ್ಡಾಯವಾಗಿ ಪಾಲಿಸಬೇಕು.

1. ಮೌಲ್ಯಮಾಪನ ವರದಿಯನ್ನು ನೋಡಿದ ತಕ್ಷಣ ಅದು ಸಮಾಲೋಚಕರಿಂದ ತಯಾರಿಸಲಾಗಿದ್ದರೂ ಸಹಾ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಅಧ್ಯಯನವೆಂದು ತಿಳಿಯುವಂತಿಬೇಕು. ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದಿಂದ / ಮಹರ್ಷಿ ವಾಲ್ಮೀಕಿ ಪರಿಶಿಷ್ಠ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತದಿಂದ ಹಣಕಾಸಿನ ಸೌಲಭ್ಯ ಕೊಟ್ಟ ಮಾತ್ರಕ್ಕೆ ಅಧ್ಯಯನವು ಸಮಾಲೋಚಕರಿಂದ ಪ್ರಸ್ತಾಪಿಸಲ್ಪಟ್ಟಿದ್ದು ಮತ್ತು ಸಮಾಲೋಚಕರದ್ದೆಂದು ತಿಳಿಸುವಂತದ್ದಾಗಿರಬಾರದು.

2. ಅಧ್ಯಯನದ ವ್ಯಾಪ್ತಿ ವಿಷಯಗಳು (ಟಿ.ಓ.ಆರ್) ವರದಿಯ ಮೊದಲನೆ ಪರಿಶಿಷ್ಟದಿಂದ ಕೂಡಿರಬೇಕು.

3. ಫಲಿತಾಂಶಗಳು ಮೊದಲಿಗೆ (ಟಿ.ಓ.ಆರ್) ನಲ್ಲಿನ ವಿಷಯಗಳಿಗೆ ತಾಳೆ ಹೊಂದುವಂತಿರಬೇಕು. ಫಲಿತಾಂಶಗಳ ಅಧ್ಯಾಯದಲ್ಲಿ ಪ್ರತಿಯೊಂದು ಪ್ರಶ್ನೆಯನ್ನೂ ಪ್ರತ್ಯೇಕವಾಗಿ ಉತ್ತರಿಸಿರಬೇಕು. ಉತ್ತರಗಳನ್ನು ವಿಷದೀಕರಿಸಬೇಕು.

4. ಶಿಫಾರ್ಸ್ ವಿಷಯದಲ್ಲಿ ಶಿಫಾರ್ಸುಗಳ ಸಂಖ್ಯೆಯು ಮೌಲ್ಯಮಾಪನದ ಗುಣಮಟ್ಟವನ್ನು ತೋರಿಸುವುದಿಲ್ಲ. ಮೌಲ್ಯಮಾಪನದ ಶಿಫಾರ್ಸ್‌ಗಳನ್ನು ಕಾರ್ಯಗತಗೊಳಿಸುವಂತಿರಬೇಕು. ವರದಿಯಲ್ಲಿ ಶಿಫಾರ್ಸುಗಳನ್ನು ಈ ಕೆಳಗಿನಂತೆ ಮಾಡಿರಬೇಕು.

ಏ) ಅಲ್ಪಾವಧಿಯಲ್ಲಿ ಕಾರ್ಯಗತಗೊಳಿಸಬಹುದಾದ ಶಿಫಾರ್ಸುಗಳು.

ಇವು ಸಂಖ್ಯೆಯಲ್ಲಿ 5 ಕ್ಕಿಂತ ಹೆಚ್ಚಿಲ್ಲದಿರಬಹುದು. ಇವು ದೊಡ್ಡಪ್ರಮಾಣದಲ್ಲಿ ನೀತಿ ಬದಲಾವಣೆ ಮಾಡದೇ ಹೆಚ್ಚು ಹಣ ವಿನಿಯೋಗಿಸದೇ ಒಂದು ವರ್ಷದೊಳಗೇ ಅನುಷ್ಠಾಗೊಳಿಸುವಂತಿರೇಕು.

ಬಿ) ಧೀರ್ಘಾವಧಿಯಲ್ಲಿ ಕಾರ್ಯಗತಗೊಳಿಸಬಹುದಾದ ಶಿಫಾರ್ಸುಗಳು.

ಇವು ಸಂಖ್ಯೆಯಲ್ಲಿ ಹತ್ತಕ್ಕಿಂತ ಹೆಚ್ಚಿಲ್ಲದಿರಬಹುದು. ಇವು ಮುಂದಿನ 4 ರಿಂದ 5 ಆರ್ಥಿಕ ವರ್ಷಗಳ ಅವಧಿಯಲ್ಲಿ ದೊಡ್ಡಪ್ರಮಾಣದಲ್ಲಿ ಹಣ ಹೂಡಿಕೆ ಮಾಡಿ ಅಥವಾ ಎರಡೂ ರೀತಿ ಕಾರ್ಯಗತಗೊಳಿಸುವಂತಿರಬೇಕು. ಆದರೆ ನೀತಿಯಲ್ಲಿ ಬದಲಾವಣೆ ಮಾಡುವಂತಿರಬಾರದು.

ಸಿ) ನೀತಿಯಲ್ಲಿ ಬದಲಾವಣೆ ಬಯಸುವ ಶಿಫಾರ್ಸುಗಳು.

ಇವುಗಳ ಅನುಷ್ಠಾನಕ್ಕೆ ಅತಿ ಹೆಚ್ಚು ಸಮಯ, ಸಂಪನ್ಮೂಲಗಳು ಮತ್ತು ಕಾರ್ಯ ವಿಧಾನಗಳು ಬೇಕಾಗುತ್ತವೆ.

15. ಮೌಲ್ಯ, ಹಣ ಬಿಡುಗಡೆ ಹಂತಗಳು.

ಉತ್ಪಾದನೆ ಆಧಾರಿತ ಆಯವ್ಯಯದಿಂದ ಹಣಕಾಸು ಬಿಡುಗಡೆ ಈ ಕೆಳಗಿನಂತಿದೆ.

ಏ. ಮೊದಲ ಕಂತು: ಸಮಾಲೋಚನಾ ಒಟ್ಟು ಶುಲ್ಕದ 30% ಅನ್ನು ಆರಂಬಿಕ ವರದಿಯ ಅನುಮೋದನೆ ಬಳಿಕ ಸಮಾಲೋಚಕರಿಗೆ ಮುಂಗಡವಾಗಿ ಕೊಡಲಾಗುವುದು. ಆದರೆ ಅದಕ್ಕೆ ಒಂದು ಷೆಡ್ಯೂಲ್ಡ್ ರಾಷ್ಟ್ರೀಕೃತ ಬ್ಯಾಂಕ್‌ನಿಂದ ಪಡೆದ ಒಂದು ವರ್ಷ ವಾಯಿದೆಯುಳ್ಳ ಬ್ಯಾಂಕ್ ಖಾತರಿ ಒದಗಿಸುವ ಷರತ್ತಿಗೆ ಒಳಪಟ್ಟಿರುತ್ತದೆ.

ಬಿ. ಎರಡನೇ ಕಂತು : ಸಮಾಲೋಚನಾ ಒಟ್ಟು ಶುಲ್ಕದ 50% ಅನ್ನು ಕರಡು ಪ್ರತಿ ಅನುಮೋದನೆ ಬಳಿಕ ಸಮಾಲೋಚಕರಿಗೆ ಪಾವತಿಸಲಾಗುವುದು.

ಸಿ. ಮೂರನೇ ಮತ್ತು ಅಂತಿಮ ಕಂತು ಸಮಾಲೋಚನಾ ಒಟ್ಟು ಶುಲ್ಕದ 20% ಅನ್ನು ಸಮಾಲೋಚಕರಿಂದ ಕರಾರಿನಲ್ಲಿ ತಿಳಿಸಿದಷ್ಟು ಪ್ರತಿಗಳ ಅಂತಿಮ ವರದಿ ಮತ್ತು ಅದರ ಹಾರ್ಡ್ ಮತ್ತು ಸಾಫ್ಟ್ ಕಾಪಿಗಳು ಬಂದ ಬಳಿಕ ಸಮಾಲೋಚಕರಿಗೆ ಪಾವತಿಸಲಾಗುವುದು. ಅವುಗಳ ಜೊತೆಗೆ ಪ್ರಾಥಮಿಕ ಮತ್ತು ದ್ವಿತೀಯ ಮಾಹಿತಿಗಳನ್ನೊಳಗೊಂಡ ಎಲ್ಲ ಮೂಲ ದಾಖಲೆಗಳು, ಪರಿಷ್ಕರಿಸಿದ ಮಾಹಿತಿ ಫಲಿತಾಂಶಗಳು, ಅಧ್ಯಯನದ ವರದಿ ಸಹಿತ ಅಂತಿಮ ವರದಿಯಲ್ಲಿ ಉಪಯೋಗಿಸಿದ ಎಲ್ಲ ದಾಖಲೆಗಳ ಸಾಫ್ಟ್ ಪ್ರತಿಗಳನ್ನು ಸಲ್ಲಿಸುವುದು.

ಪ್ರತಿ ಪಾವತಿಯಿಂದ ಚಾಲ್ತಿಯಲ್ಲಿರುವ ದರಗಳಂತೆ ತೆರಿಗೆಗಳನ್ನು ಕಡಿತ ಮಾಡಿಕೊಳ್ಳಲಾಗುವುದು. ಕಡೆಯಲ್ಲಿ ಸಮಾಲೋಚಕರು ಸೇವಾ ತೆರಿಗೆ ನೀಡುವರೆಂದು ನಿರೀಕ್ಷಿಸಲಾಗಿದೆ.

16. ಮೌಲ್ಯಮಾಪನಕ್ಕೆ ಸಂಸ್ಥೆಯ ಆಯ್ಕೆ.

ಮೌಲ್ಯಮಾಪನ ಸಂಸ್ಥೆಯನ್ನು ಕೆ.ಟಿ.ಪಿ.ಪಿ ಕಾಯಿದೆ ಮತು ನಿಯಮಗಳಂತೆ, ಗುಣಮಟ್ಟಕ್ಕೆ ಆಧ್ಯತೆ ನೀಡಿ ಅಂತಿಮಗೊಳಿಸುವುದು.

17. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ವ್ಯಕ್ತಿ.

ಶ್ರೀ. ಕೆ.ಎಸ್. ಮೃತ್ಯುಂಜಯ ಮೂರ್ತಿ, ಮಹರ್ಷಿ ವಾಲ್ಮೀಕಿ ಪರಿಶಿಷ್ಠ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು, ಫೋ: 080–22250018, ಮೊ. 9449029959, ಶ್ರೀಮತಿ. ಟಿ.ಎನ್ . ಮಂಜುಳಾ, ಏ.ಜಿ.ಎಂ, ಫೋ: 080–22250017, ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಠ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತ, ರವರು ಈ ಅಧ್ಯಯನಕ್ಕೆ ಬೇಕಾದ ಮಾಹಿತಿ ಮತ್ತು ವಿವರಗಳನ್ನು ನೀಡುವರು.

ಮೌಲ್ಯಮಾಪನದ ಪೂರ್ಣ ಕಾರ್ಯವಿಧಾನವನ್ನು ಕಟ್ಟು ನಿಟ್ಟಾಗಿ ಕರ್ನಾಟಕ ಸರ್ಕಾರದ ಆದೇಶ ಸಂ. ಪಿ.ಡಿ./8/ಇ.ವಿ.ಎನ್(2)/2011 ದಿನಾಂಕ 11–07–2011 ಮತ್ತು ನಂತರದ ಆದೇಶಗಳಂತೆ ಮಾಡತಕ್ಕದ್ದು.

ವಿಚಾರಣಾ ನಿಬಂಧನೆಗಳನ್ನು ಕರ್ನಾಟಕ ಮೌಲ್ಯಮಾಪನಾ ಸಂಸ್ಥೆಯ ತಾಂತ್ರಿಕ ಸಮಿತಿಯ ದಿನಾಂಕ 04–05–2015ರ ತನ್ನ 18 ನೇ ಸಭೆಯಲ್ಲಿ ಅನುಮೋದಿಸಿದೆ.

ಸಹಿ/

ಮುಖ್ಯ ಮೌಲ್ಯಮಾಪನಾಧಿಕಾರಿ,
ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ.

ಅನುಬಂಧ–1

| 2009–10 ನೇವರ್ಷದ ಭೂಮಿ ಖರೀದಿ ಯೋಜನೆಯ ಜಿಲ್ಲಾವಾರು ಫಲಾನುಭವಿಗಳು. | | | | | | |
|---|---|---|---|---|---|---|
| ಕ್ರಮ ಸಂ | ಜಿಲ್ಲೆ | ಹಂಚಿಕೆ ಮಾಡಲಾದ ಭೂಮಿಯ ತರಹೆ ವಿಸ್ತೀರ್ಣ ಎಕರೆಗಳಲ್ಲಿ. | | | ಭೂಮಿಯ ಬೆಲೆ. ಲ ರೂಗಳಲ್ಲಿ. | ಫಲಾನುಭವಿಗಳ ಸಂಖ್ಯೆ. |
| | | ಖುಷ್ಕಿ | ನೀರಾವರಿ | ತೋಟ | | |
| 1 | ಕೋಲಾರ | 0–00 | 4–00 | 0–00 | 1.20 | 2 |
| 2 | ರಾಯಚೂರು. | 24–00 | 2–00 | 0–00 | 1.20 | 25 |
| 3 | ಕೊಪ್ಪಳ. | 0–00 | 12–00 | 0–00 | 2.4 | 6 |
| 4 | ಚಿತ್ರದುರ್ಗ | 0–00 | 10–00 | 0–00 | 3.60 | 5 |
| 5 | ದಾವಣಗೆರೆ. | 1–00 | 34–00 | 0–00 | 18.75 | 18 |
| 6 | ಚಿಕ್ಕಬಳ್ಳಾಪುರ. | 4–00 | 26–00 | 0–00 | 24.95 | 17 |
| 7 | ಚಾಮರಾಜನಗರ. | 1–00 | 4–00 | 0–00 | 1.81 | 3 |

ಭೂ ರಿಹಿತ ಪರಿಶಿಷ್ಟ ಪಂಗಡ ಮಹಿಳೆಯರಿಗೆ ಭೂಮಿ ಖರೀದಿ ಮತ್ತು ಭೂಮಿ ಹಂಚಿಕೆ ಯೋಜನೆ. ಮೌಲ್ಯ ಮಾಪನೆ.

ಅನುಬಂಧ–2.

ಪ್ರಶ್ನಾವಳಿ–1

ಇಂಡಿಯನ್ ರಿಸೋರ್ಸ್‌ಸ್ ಇನ್ಫರ್ಮೇಷನ್ ಅಂಡಗ ಮೇಮನೇಜ್‌ಮೆಂಟ್ ಟೆಕ್ನಾಲಜೀಸ್ ಲಿಮಿಟೆಡ್. ಬೆಂಗಳೂರು.

ಪ್ರತಿಕ್ರಿಯಿಸುವವರು: ಜಿಲ್ಲಾ ವ್ಯವಸ್ಥಾಪಕರು. ಕ.ರಾ.ಮ.ವಾ.ಪ.ಪಂ.ಅ.ನಿ.ನಿ.

---

1) ಜಿಲ್ಲೆ.
2) ಹೆಸರು.
3) ಹುದ್ದೆ.
4) ನಿಮಗೇನಾದರೂ ನಿಗದಿತ ವಾರ್ಷಿಕ ಗುರಿ ಇದೆಯೇ? ಹೌದು/ಇಲ್ಲ.
1) ಹೌದು ಎಂದಾದರೆ, ಹಿಂದಿನ 5 ವರ್ಷಗಳ ವಿವರಗಳನ್ನು ನೀಡಿರಿ.

| ವರ್ಷ. | ಗುರಿ. | ಸಾಧನೆ. |
|---|---|---|
| 2009–10 | | |
| 2010–11 | | |
| 2011–12 | | |
| 2012–13 | | |
| 2013–14 | | |

5) ಫಲಾನುಭವಿಯನ್ನು ಹೇಗೆ ಗುರುತಿಸಲಾಗುವುದು?
6) ಭೂಮಿಗಾಗಿ ಒಬ್ಬ ಅರ್ಜಿದಾರರನ್ನು ಫಲಾನುಭವಿಯೆಂದು ಸೇರಿಸಿಕೊಳ್ಳಲು ಏನಾದರೂ ಮಾನದಂಡೆಗಳಿವೆಯೇ? ಹೌದು/ಇಲ್ಲ.
7) ಯಾವುದೇ ಮಾನದಂಡಗಳಿಲ್ಲದಿದ್ದಲ್ಲಿ ದಯವಿಟ್ಟು ಫಲಾನುಭವಿಯನ್ನಾರಿಸಲು ಸೂಕ್ತ ಮಾನದಂಡಗಳನ್ನು ಸೂಚಿಸಿರಿ.
8) ಖರೀದಿಸಲು ಉದ್ದೇಶಿಸಿದ ಭೂಮಿಯನ್ನು ಯಾರು ಗುರುತಿಸುತ್ತಾರೆ.

9) ಫಲಾನುಭವಿಯನ್ನು ಗ್ರಾಮಸಭೆಯಲ್ಲಿ ಆರಿಸುವುದರಿಂದ, ಆಯ್ಕೆಯು ಪಾರದರ್ಶಕವಾಗಿರುತ್ತದೆಂದು ನೀವು ಖಾತರಿ ಪಡಿಸಬಲ್ಲಿರಾ? ಹೌದು/ಇಲ್ಲ.

10) ಅರ್ಜಿದಾರಳು ಅಥವಾ ಅಕೆಯ ಪತಿಯ ಹೆಸರಿನಲ್ಲಿ ಯಾವುದೇ ಜಮೀನಿಲ್ಲವೆಂದು ತಿಳಿದುಕೊಳ್ಳಲು ನೀವು ಯಾವ ಕ್ರಮವನ್ನು ಅನುಸರಿಸುವಿರಿ.

ಏ) ಸಂಬಂಧಿಸಿದ ಗ್ರಾಮಕ್ಕೆ ಖುದ್ದಾಗಿ ಭೇಟಿ ನೀಡುವುದು.

ಬಿ) ಸಂಬಂಧ ಪಟ್ಟ ಗ್ರಾಮಪಂಚಾಯತಿ ಮೂಲಕ.

ಸಿ) ಭವಿಷ್ಯದ ಫಲಾನುಭವಿಯಿಂದ ಪ್ರಮಾಣ ಪತ್ರ ಬರೆಯಿಸಿಕೊಳ್ಳುವುದು.

11) ಭೂಮಿಯ ತರಹೆಯಲ್ಲಿ ಸಾಮಾನ್ಯವಾಗಿ ಫಲಾನುಭವಿಗಳು ಯಾವ ರೀತಿಯ ಜಮೀನಿಗೆ ಹೆಚ್ಚಿಗೆ ಇಷ್ಟ ಪಡುತ್ತಾರೆ.

ಏ) ಖುಷ್ಕಿ.

ಬಿ) ನೀರಾವರಿ.

ಸಿ) ತೋಟದ ಜಮೀನು.

12) ಹಂಚಿಕೆ ಮಾಡಿದ ವರ್ಷದಲ್ಲೇ ನಿಗಮ ಅಥವಾ ಫಲಾನುಭವಿ ಕೊಳವೆ ಭಾವಿ ಕೊರೆಸಿದ್ದಾರೆ. (ಎಲ್ಲ 5 ವರ್ಷಗಳಿಗೂ)

| ವರ್ಷ. | ಫಲಾನುಭವಿಯಿಂದ. | ನಿಗಮದಿಂದ. |
|---|---|---|
| 2009–10 | | |
| 2010–11 | | |
| 2011–12 | | |
| 2012–13 | | |
| 2013–14 | | |

ಷರಾ.

13) ನಿಮ್ಮ ಜಿಲ್ಲೆಯಲ್ಲಿ ತಮಗೆ ಹಂಚಿಕೆಯಾದ ಜಮೀನನ್ನು ಎಷ್ಟು ಪ್ರಕರಣಗಳಲ್ಲಿ ಗುತ್ತಿಗೆಗೆ ನೀಡಿದ್ದಾರೆ ? ಅಥವಾ ವ್ಯವಸಾಯೇತರ ಜಮೀನಾಗಿ ಪರಿವರ್ತಿಸಿಕೊಂಡಿದ್ದಾರೆ.

| ವರ್ಷ. | ಗುತ್ತಿಗೆಗೆ ನೀಡಿರುವವರು. | ಭೂ ಪರಿವರ್ತನೆ ಮಾಡಿಸಿರುವವರು. |
|---|---|---|
| 2009–10 | | |
| 2010–11 | | |
| 2011–12 | | |
| 2012–13 | | |
| 2013–14 | | |

14) ಒಂದು ವೇಳೆ ಫಲಾನುಭವಿಗಳು ತಮಗೆ ಹಂಚಿಕೆಯಾದ ಭೂಮಿಯನ್ನು ತಮ್ಮ ಅಕ್ಕ ಪಕ್ಕದವರಿಗೆ, ಗ್ರಾಮದವರಿಗೆ/ಸಂಬಂಧಿಗಳಿಗೆ ಗುತ್ತಿಗೆಗೆ ನೀಡಿದ್ದರೆ, ಹಂಚಿಕೆಯ ನಿಯಮಗಳನ್ನು/ಷರತ್ತುಗಳನ್ನು ಮೀರಿದ್ದಕ್ಕೆ ನಿಗಮದಿಂದ ಯಾವ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ.

15) ನಿಮ್ಮ ಜಿಲ್ಲೆಯಲ್ಲಿ ಫಲಾನುಭವಿಗಳಿಂದ ಸಾಲ ವಸೂಲಾತಿಯ ಪರಿಸ್ಥಿತಿ ಏನು?

(ದಯವಿಟ್ಟು ಪ್ರತ್ಯೇಕ ಹಾಳೆಯಲ್ಲಿ ವಿವರಗಳನ್ನು ನೀಡಿರಿ.)

ಏ) 100% ಬಿ) 75% ನಿಂದ 100%. ಸಿ) 50% ರಿಂದ 75%. ಡಿ) 25% ನಿಂದ 50%

ಇ) 25% ಗೂ ಕಡಿಮೆ.

16) ಸಾಲಗಾರರು ಸಾಲದ ಕಂತು ಮತ್ತು ಬಡ್ಡಿಯನ್ನು ಕ್ರಮವಾಗಿ ಮರುಪಾವತಿಸುತ್ತಾರೆಂದು ಮತ್ತು ಸುಸ್ತಿದಾರರಾಗುವುದಿಲ್ಲವೆಂದು ಖಾತ್ರಿ ಮಾಡಿಕೊಳ್ಳಲು ಯಾವ ಕ್ರಮ ಅನುಸರಿಸುತ್ತೀರಿ.

ಏ) ಕಳೆದ 5 ವರ್ಷಗಳಲ್ಲಿ ಎಷ್ಟು ಸಾಲಗಾರರು ಸಾಲ ಮರುಪಾವತಿಸದೇ ಸುಸ್ತಿದಾರರಾಗಿದ್ದಾರೆ? (ವಿವರಗಳನ್ನು ಕೊಡಿ)

ವರ್ಷ. ಸಂಖ್ಯೆ.

2009–10

2010–11

2011–12

2012–13

2013–14

ಬಿ) ಸಾಲ ಮತ್ತು ಬಡ್ಡಿಯನ್ನು ವಸೂಲು ಮಾಡಲು ಯಾವ ಕ್ರಮಗಳನ್ನು ಅನುಸರಿಸಿದಿರಿ.

ಸಿ) ನೀವು ಅಂತಹ ಸುಸ್ತಿದಾರರ ಮೇಲೆ ಕಾನೂನು ಕ್ರಮ ತೆಗೆದುಕೊಂಡಿದ್ದೀರಾ. ಹೌದು/ಇಲ್ಲ.

ಹೌದಾದರೆ, ಅಂತಹ ಪ್ರಕರಣಗಳ ವಿವರಗಳನ್ನು ನೀಡಿ, ಮತ್ತು ನ್ಯಾಯಾಲಯಗಳಲ್ಲಿ ಬಾಕಿಯಿವೆ/ತಕರಾರಿನಲ್ಲಿವೆ?

17) ಭೂಮಿ ಪಡೆದವರಲ್ಲಿ ಮೇಲ್ನೋಟಕ್ಕೆ ಕಾಣುವಂತಹ ಸಾಮಾಜಿಕ/ಆರ್ಥಿಕ ಬದಲಾವಣೆಗಳನ್ನು ಗಮನಿಸಿದ್ದೀರಾ. ಹೌದು/ಇಲ್ಲ.

18. ನಿಮಗೇನಾದರೂ ಸಲಹೆಗಳಿವೆಯೇ? ಹಾಗಿದ್ದರೆ ಈ ಕೆಳಗಿನವನ್ನು ವಿಸ್ತರಿಸಿ.

(1) ಯೋಜನೆಯ ಅಂಶಗಳು.

(2) ವಿಧಾನಗಳು ಮತ್ತು ಕ್ರಮಗಳು.

(3) ಉದ್ದೇಶಗಳು ಮತ್ತು ಸಂಬಂಧಿಸಿದ ಸನ್ನಿವೇಶಗಳು.

(4) ಫಲಾನುಭವಿಗಳ ಆಯ್ಕೆ.

(5) ಅನುಷ್ಠಾನ ಮತ್ತು ಮೇಲುಸ್ತುವಾರಿ ವ್ಯವಸ್ಥೆಗಳು.

(6) ಸಾಲದ ಮೊತ್ತ ಮತ್ತು ಬಡ್ಡಿ.

(7) ಇತರೆ, ವಿವರಿಸಿ.

ಹೆಸರು: ಹುದ್ದೆ. ಸ್ಥಳ. ದಿನಾಂಕ.

## ಅನುಬಂಧ–3.

## ಪ್ರಶ್ನಾವಳಿ–2

ಇಂಡಿಯನ್ ರಿಸೋರ್ಸಸ್ ಇನ್ಫರ್ಮೇಷನ್ ಅಂಡಗ ಮೇಮನೇಜ್‌ಮೆಂಟ್ ಟೆಕ್ನಾಲಜೀಸ್ ಲಿಮಿಟೆಡ್. ಬೆಂಗಳೂರು.

ಪ್ರತಿಕ್ರಿಯಿಸುವವರು: ಭೂಮಿ ಪಡೆದವರು.

ಫಲಾನುಭವಿಯ ಸಾಮಾಜಿಕ ಆರ್ಥಿಕ ಜೀವನ ಚಿತ್ರ.

ಜಿಲ್ಲೆ.. ತಾಲೂಕು. ಹಳ್ಳಿ (ಗ್ರಾಮ) ಗ್ರಾಮ ಪಂಚಾಯತ್.

1. ಫಲಾನುಭವಿಯ ಹೆಸರು.
2. ವಯಸ್ಸು.
3. ವೈವಾಹಿಕ ಸ್ಥಿತಿ. ಎ). ವಿವಾಹಿತೆ, ಬಿ) ವಿಚ್ಛೇದಿತೆ. ಸಿ) ಅವಿವಾಹಿತೆ. ಡಿ) ವಿಧವೆ
4. ಪತಿಯ ವೃತ್ತಿ. (ಲಗ್ನವಾಗಿದ್ದರೆ.)
5. ತಂದೆಯ ವೃತ್ತಿ.
6. ತಾಯಿಯ ವೃತ್ತಿ.
7. ಸಹೋದರರ ಸಂಖ್ಯೆ. ಮತ್ತು ಅವರ ವೃತ್ತಿ.
8. ಅವಿವಾಹಿತ ಸಹೋದರಿಯರ ಸಂಖ್ಯೆ ಮತ್ತು ಅವರ ವೃತ್ತಿ.
9. ಧರ್ಮ–ಹಿಂದೂ, ಮುಸ್ಲಿಮ್, ಕ್ರಿಶ್ಚಿಯನ್, ಜೈನರು, ಬೌದ್ದರು,

10.ಉತ್ತರಿಸುವವರು ಸೇರಿರುವ ಪರಿಶಿಷ್ಠ ಪಂಗಡದ ಹೆಸರು.

11 ಉತ್ತರಿಸುವವರು ಉಪ ಪಂಗಡಕ್ಕೆ ಸೇರಿದ್ದರೆ, ಅದರ ಹೆಸರು.

12. ಉತ್ತರಿಸುವವರು ಪಡೆದಿರುವ ಅತಿ ಹೆಚ್ಚಿನ ಶಿಕ್ಷಣ.

ಏ.) ಅಕ್ಷರಸ್ಥೆ,

ಬಿ.) 8 ನೇ ತರಗತಿವರೆಗೆ ಓದಿದ್ದಾರೆ.

ಸಿ.) ಎಸ್.ಎಸ್.ಎಲ್,ಸಿ ವರೆಗೆ ಓದಿದ್ದಾರೆ.

ಡಿ.) ಪಿ.ಯು.ಸಿ ವರೆಗೆ ಓದಿದ್ದಾರೆ.

ಇ.) ಪದವಿ ಶಿಕ್ಷಣ ಮತ್ತು ಅದಕ್ಕೂ ಹೆಚ್ಚಿಗೆ ಓದಿದ್ದಾರೆ.

13. ಯಾವ ತರಹೆಯ ಕುಟುಂಬಕ್ಕೆ ಸೆರಿದ್ದಾರೆ.

ಅ. ಸಣ್ಣ ಕುಟುಂಬ.

ಆ. ಒಟ್ಟು ಕುಟುಂಬ. (ಅವಿಭಕ್ತ)

14. ಆರ್ಥಿಕ ಸ್ಥಿತಿ.

ಬಡತನ ರೇಖೆಗಿಂತ ಕೆಳಗೆ (ಬಿಪಿಎಲ್.) /ಬಡತನ ರೇಖೆಗಿಂತ ಮೇಲೆ.(ಏಪಿಎಲ್)

ಬಡತನ ರೇಖೆಗಿಂತ ಕೆಳಗೆ ಇದ್ದಲ್ಲಿ ಬಿಪಿಎಲ್ ಕಾರ್ಡ್ ಇದೆಯೇ ? ಹೌದು/ಇಲ್ಲ.

15. ನಿಮ್ಮ ಕುಟುಂಬದ ಮುಖ್ಯ ಮತ್ತು ಉಪ ಕಸಬುಗಳೇನು ಮತ್ತು ಸರಾಸರಿ ಆದಾಯ.

| ವೃತ್ತಿ (ಕಸಬು) | ಮುಖ್ಯ ಕಸಬು. | ಉಪ ಕಸಬು | ಸರಾಸರಿ ಆದಾಯ. |
|---|---|---|---|
| ವ್ಯವಸಾಯ | | | |
| ಕೂಲಿ ಕೆಲಸ | | | |
| ವ್ಯಾಪಾರ. | | | |
| ಸೇವೆ. | | | |
| ಇತರೆ. (ವಿವರಿಸಿ) | | | |

I. ಭೂಮಿ ಖರೀದಿ ಮತ್ತು ಭೂಮಿ ಹಂಚಿಕೆಯ ಕಾರ್ಯ ವಿಧಾನ.

1) ಖರೀದಿಗಾಗಿ ಮತ್ತು ಹಂಚಿಕೆಗಾಗಿ ಭೂಮಿಯನ್ನು ಯಾರು ಗುರುತಿಸಿದರು.

ಏ) ಸ್ವತಃ. (ಫಲಾನುಭವಿ) ಬಿ) ಗ್ರಾಮ ಪಂಚಾಯತಿ, ಸಿ) ನಿಗಮ, ಡಿ) ಭೂಮಿ ಮಾರುವವರು, ಇ) ಸ್ನೇಹಿತರು, ಸಂಬಂಧಿಗಳು.

2) ಹಂಚಿಕೆ ಮಾಡಿದ ಭೂಮಿಯ ತರಹೆ ಮತ್ತು ವಿಸ್ತೀರ್ಣ.

ಏ) ಎರಡು ಎಕರೆ ಖುಷ್ಕಿ, 1 ಎಕರೆ ನೀರಾವರಿ, 0.5 ಎಕರೆ ತೋಟದ ಜಮೀನು.

(ಹಣ್ಣಿನ ತೋಟ).

ಬಿ) ಸರ್ವೇ ನಂಬರು. ಬಿ) ಗ್ರಾಮದ ಹೆಸರು.

ಸಿ) ಹೋಬಳಿ ಹೆಸರು. ಡಿ) ಜಿಲ್ಲೆಯ ಹೆಸರು.

ಇ) ಭೂಮಿ ಹಂಚಿಕೆ ಮಾಡಿದ ವರ್ಷ.

3)ನಿಮಗೆ ಜಮೀನು ಪಡೆಯಲು ಯಾರಾದರೂ ಸಹಾಯ ಮಾಡಲು ಮುಂದೆ ಬಂದರೇನು? ಹೌದು/ಇಲ್ಲ.

4) ಹೌದಾದರೆ ಅವರು ಯಾರು.

5) ಆ ರೀತಿ ಮಾಡಲು ನಿಮ್ಮಿಂದ ಏನಾದರೂ ಸಹಾಯ, ಅನುಗ್ರಹ ಪಡೆದರೇ. ?.

6) ಅದೇನದು?

7) ಜಮೀನು ಖರೀದಿಸಲು ನೀವು ನಿಗಮದಿಂದ ಸಾಲ ಪಡೆದಿರೇನು ? ಹೌದು/ಇಲ್ಲ.

ಏ) ಹೌದಾದರೆ ಸಾಲದ ಮೊತ್ತದ ವಿವರಗಳು.

ಬಿ) ಬಡ್ಡಿ ದರ.

ಸಿ) ಮರು ಪಾವತಿಯ ಅವಧಿ.

ಡಿ) ಪೂರಕ ಭೂಮಿ ಹೊರತಾದ ಭದ್ರತೆ, ಜಾಮೀನು.

| |
|---|
| ಅರ್ಜಿ ಹಾಕಿದ ತರುವಾಯ ಜಮೀನು ಹಂಚಿಕೆ ಮಾಡಲು ತೆಗೆದುಕೊಂಡ ಸಮಯವೆಷ್ಟು ? ಕ ಮಾಹಿತಿಯನ್ನು ಮಾಹಿತಿ ಸಂಗ್ರಹಿಸುವವರು ಸಂಬಂಧಿಸಿದ ಕಡತಗಳಿಂದ ಪಡೆದುಕೊಳ್ಳುವರು (ಫಲಾನುಭವಿಯಿಂದಲ್ಲ) |
| ಏ) ಗ್ರಾಮ ಪಂಚಾಯತಿಯಿಂದ ಶಿಫಾರ್ಸ್ ಪಡೆಯಲು. |
| ಬಿ) ಹಕ್ಕು ಪತ್ರಗಳ ಪರಿಶೀಲನೆ. |
| ಸಿ) ಜಿಲ್ಲಾಧಿಕಾರಿಗಳಿಂದ ಅನುಮೋದನೆ. |
| ಡಿ) ವಾಸ್ತವವಾಗಿ ರಿಜಿಸ್ಟರ್ ಮಾಡಿಸಲು. |
| ಇ) ಜಮೀನಿನ ಸ್ವಾಧೀನತೆಯ ಹಸ್ತಾಂತರ. |

8) ರಿಜಿಸ್ಟ್ರೇಷನ್ ಆದ ಕೂಡಲೇ ಜಮೀನಿನ ಸ್ವಾಧೀನತೆ ತೆಗೆದುಕೊಂಡಿರಾ.? ಹೌದು/ಇಲ್ಲ.

ಇಲ್ಲವೆಂದಾದರೆ ಕಾರಣಗಳೇನು?

ಏ) ಭೂಮಿ ಹಂಚಿಕೆಯಾಯಿತು, ಆದರೆ ಗುರುತು ಮಾಡಲಿಲ್ಲ.

ಬಿ) ಭೂಮಿ ರಿಜಿಸ್ಟ್ರೇಷನ್ ಆಯಿತು, ಆದರೆ ನಿಗಮದಿಂದ ಹಸ್ತಾಂತರವಾಗಲಿಲ್ಲ.

ಸಿ) ಇತರ ಕಾರಣಗಳು (ವಿವರಿಸಿ).

II. ಜಮೀನಿನ ಗುಣ ಮತ್ತು ಸಾಮೀಪ್ಯ.

1) ನಿಮಗೆ ಹಂಚಿಕೆ ಮಾಡಲಾದ ಜಮೀನು ಸಾಗುವಳಿಗೆ ಯೋಗ್ಯವಾಗಿದೆಯೇ.

ಹೌದಾದರೆ ಯಾವ ತರಹದ ಬೆಳೆಗಳನ್ನು ಬೆಳೆಯಬಹುದು/ಬೆಳೆಯಲಾಗಿದೆ.

ಇಲ್ಲದಿದ್ದರೆ, ಭೂಮಿಯ ಫಲವತ್ತತೆಯನ್ನು ಹೆಚ್ಚಿಸಲು ನೀವು ಏನೇನು ಕ್ರಮ ಕೈಗೊಂಡಿರಿ?

2) ಭೂಮಿಯು ನಿಮ್ಮ ಮನೆಯಿಂದ ಎಷ್ಟು ದೂರದಲ್ಲಿದೆ.ಏ) 5 ಕಿ ಮೀ ಗಿಂತ ಕಡಿಮೆ. ಬಿ) 5 ಕಿ ಮೀ ಗಿಂತ ಹೆಚ್ಚು.

3) ಹಂಚಿಕೆಯಾಗುವ ಮೊದಲು ಜಮೀನನ್ನು ನಿಮಗೆ ತೋರಿಸಿದರೇ ? ಹೌದು/ಇಲ್ಲ.

ಹೌದೆಂದಾದರೆ, ಜಮೀನಿನ ಮಣ್ಣಿನ ತರಹೆ ಮತ್ತು ದೂರದ ಬಗ್ಗೆ ನಿಮಗೆ ತೃಪ್ತಿಯಾಯಿತೇ, ಹೌದು/ಇಲ್ಲ.

ಇಲ್ಲದಿದ್ದರೆ ಜಮೀನಿನ ಬಗ್ಗೆ ನಿಮ್ಮ ಅಭಿಪ್ರಾಯವನ್ನು ತಿಳಿಸಿದಿರೇನು. ಹೌದು/ಇಲ್ಲ.

4) ಭೂಮಿಯನ್ನು ನಿಮ್ಮ ಮೇಲೆ ಒತ್ತಾಯ ಪೂರ್ವಕ ಹಂಚಿಕೆ ಮಾಡಲಾಯಿತೆಂದು ಭಾವಿಸಿದ್ದೀರಾ? ಹೌದು/ಇಲ್ಲ.

ಏಕೆ ಹಾಗೆ.

5) ನೀವು ನಿಮಗೆ ಹಂಚಿಕೆಯಾದ ಜಮೀನಿನಲ್ಲಿ ಕೊಳವೆ ಭಾವಿ/ತೆರೆದ ಭಾವಿ ತೆಗೆಸಿದರೇನು? ಹೌದು/ಇಲ್ಲ.
ಹೌದಾದರೆ ಯಾರು ಹಣ ಖರ್ಚು ಮಾಡಿದರು ? ಎ)ಸ್ವಂತ, ಬಿ) ನಿಗಮ, ಸಿ) ಇತರೆ ವಿವರಿಸಿ.

6) ನಿಮಗೆ ಭೂಮಿ ಹಂಚಿಕೆಯಾಗುವ ಮೊದಲು ಆ ಭೂಮಿಯಲ್ಲಿ ಏನಾದರೂ ಭೂ ಅಭವೃದ್ಧಿ ಕಾರ್ಯಗಳನ್ನು ಮಾಡಲಾಗಿದೆಯೇ ? ಹೌದು/ಇಲ್ಲ.
ಇಲ್ಲದಿದ್ದರೆ ನೀವು ಭೂಮಿಯನ್ನು ಸ್ವಾಧೀನಕ್ಕೆ ಪಡೆದಮೇಲೆ ಏನಾದರೂ ಕೆಲಸಗಳನ್ನು ಮಾಡಿಸಿದಿರೇನು ? ಹೌದು/ಇಲ್ಲ.
ಮಾಡಿಸಿದ ಕೆಲಸಗಳಿಗೆ ತಗುಲಿದ ಖರ್ಚು. ರೂಪಾಯಿಗಳಲ್ಲಿ.

7) ನಿಮಗೆ ಭೂಮಿ ಹಂಚಿಕೆಯಾದ ವರ್ಷವೇ ಸಾಗುವಳಿ ಪ್ರಾರಂಭಿಸಿದಿರಾ. ಹೌದು/ಇಲ್ಲ.
ಇಲ್ಲದಿದ್ದರೆ ಏಕೆ.

8) ನಿಮಗೆ ಹಂಚಿಕೆ ಆದ ಜಮೀನನ್ನು ನೀವೇ ಸಾಗುವಳಿ ಮಾಡುತ್ತೀರಾ? ಹೌದು/ಇಲ್ಲ.
ಇಲ್ಲದಿದ್ದರೆ ಜಮೀನನ್ನು ಯಾವ ರೀತಿ ಉಪಯೋಗಿಸುತ್ತೀರಿ.

ಏ) ಕುಟುಂಬದ ಸದಸ್ಯರಿಗೆ ಅಥವಾ ಸಂಬಂಧೀಕರಿಗೆ ಗುತ್ತಿಗೆಗೆ ನೀಡುವುದು.

ಬಿ) ಕುಟುಂಬದ ಸದಸ್ಯರಲ್ಲದವರಿಗೆ ಅಥವಾ ಸಂಬಂಧೀಕರಲ್ಲದವರಿಗೆ ಗುತ್ತಿಗೆಗೆ ನೀಡುವುದು.

ಸಿ) ಗಂಡ ಬೇಸಾಯ ಮಾಡುವರು.

ಡಿ) ಹಂಚಿಕೆಯಾದ ಭೂಮಿ ಆಭಿವೃದ್ಧಿ ಪಡಿಸದೇ ಕೃಷಿಯೋಗ್ಯವಾಗಿಲ್ಲದಿರುವುದು, ಮತ್ತು ಭೂ ಅಭಿವೃದ್ಧಿಗೆ ಹೂಡಿಕೆ ಮಾಡಲು ಹಣವಿಲ್ಲದಿರುವುದು,

ಇ) ಬೆಳೆ ಬೆಳೆಯುವ ಖರ್ಚನ್ನು ಭರಿಸಲು ಸಾಧ್ಯವಿಲ್ಲದಿರುವುದು.(ಭೂ ಅಭಿವೃದ್ಧಿ ಹೊರತು)

9). ಒಂದು ವೇಳೆ ನಿಮ್ಮ ಜಮೀನನ್ನು ನೀವೇ ಸಾಗುವಳಿ ಮಾಡುತ್ತಿದ್ದರೆ, ಜಮೀನಿಗೆ ಬಂದು ಹೋಗಲು ಹೇಗೆ ಮಾಡುತ್ತೀರಿ, ಮತ್ತು ಎಷ್ಟು ದಿನಕ್ಕೊಮ್ಮೆ ಭೇಟಿ ನೀಡುತ್ತೀರಿ.

ವಾರದಲ್ಲಿ ------ದಿನಗಳು,

1) ನಡೆದುಕೊಂಡು ಹೋಗಿ ಬರುವುದು.

2) ಎತ್ತಿನ ಬಂಡಿ.

3) ದ್ವಿಚಕ್ರ ವಾಹನ.

4) ಟ್ರಾಕ್ಟರ್.

10) ಹಂಚಿಕೆಯಾದ ಜಮೀನಿಗೆ ಯಾವ ರೀತಿ ತಲುಪುವುದು ?

ಎ) ಪಕ್ಕಾ ರಸ್ತೆ. ಬಿ) ಕಚ್ಚಾ ರಸ್ತೆ, ಸಿ) ಕಾಲು ದಾರಿ. ಡಿ) ಬೇರೆ ಜಮೀನುಗಳ ಮೂಲಕ.

IV. **ಫಲಾನುಭವಿ ಅಥವಾ ಕುಟುಂಬದ ಸದಸ್ಯರು ಭೂಮಿ ಹಂಚಿಕೆ ಮಾಡುವ ಮೊದಲು ಭೂಮಿಯನ್ನು ಹೊಂದಿದ್ದರೇ/ಅಥವಾ ಪಿತ್ರಾರ್ಜಿತವಾಗಿ ಗಳಿಸಿದ್ದರೇ** ?.

1. ನೀವು ಅಥವಾ ನಿಮ್ಮ ಕುಟುಂಬದ ಸದಸ್ವರು ಎಲ್ಲಿಯಾದರೂ ಭೂಮಿಯನ್ನು ಹೊಂದಿದ್ದೀರಾ ? ಹೌದು/ಇಲ್ಲ.

   ಹೌದಾದರೆ ಯಾರ ಒಡೆತನದಲ್ಲಿದೆ. ತಂದೆ/ತಾಯಿ/ಪತಿ/ಮಗ/ಮಗಳು.

   ಎ) ಆ ಜಮೀನಿನ ಸರ್ವೇ ನಂಬರು. ಗ್ರಾಮ,

   ಬಿ) ವಿಸ್ತೀರ್ಣ. ಎಕರೆಗಳಲ್ಲಿ.

2 ಜಂಟೀ ಒಡೆತನದಲ್ಲಿದ್ದರೆ ನಿಮಗೆ ಆ ಜಮೀನಿನಿಂದ ಏನಾದರೂ ಆದಾಯ ಬರುತ್ತಿದೆಯೇ? ಹೌದು/ಇಲ್ಲ.

   ಹೌದಾದರೆ ವಾರ್ಷಿಕ ಆದಾಯ ಎಷ್ಟು.

3. ಸ್ವಂತವಿಲ್ಲದಿದ್ದರೆ ಯಾವುದಾದರೂ ಜಮೀನನ್ನು ವಾರ್ಷಿಕ/ ಬಹುವಾರ್ಷಿಕ ಗುತ್ತಿಗೆಗೆ ತೆಗದು ಕೊಂಡಿದ್ದೀರಾ ? ಹೌದು/ಇಲ್ಲ.

4.ನೀವೇನಾದ'ರೂ ಜಮೀನನ್ನು ಖರೀದಿಸಿದ್ದೀರಾ ನಿಮ್ಮ ಹೆಸರಿನಲ್ಲಿ ಅಥವಾ ನಿಮ್ಮ ಸಂಬಂಧೀಕರ ಹೆಸರಿನಲ್ಲಿ ಖರೀದಿಸಿದ್ದೀರಾ. ಹೌದು/ಇಲ್ಲ.

ಹೌದಾದರೆ ಯಾರ ಹೆಸರಿನಲ್ಲಿ ?

V. ಭೂಮಿ ಹಂಚಿಕೆ ಪಡೆದವರು ಫಸಲು ವಿಮೆ ಸೌಲಭ್ಯ ಪಡೆದಿದ್ದಾರೆಯೇ ? ಹೌದು/ಇಲ್ಲ.

ಇಲ್ಲದಿದ್ದರೆ ಏಕೆ.

VI. **ಭೂ ಹಂಚಿಕೆ ಯೋಜನೆಯ ಮಹತ್ತರ ಪರಿಣಾಮ.**

1) ಹಂಚಿಕೆಗೆ ಮೊದಲು ಸಂಪಾದಿಸುತ್ತಿದ್ದ ವಾರ್ಷಿಕ ಆದಾಯ.

ಎ)ಕೃಷಿ ಕೂಲಿಯಿಂದ.

ಬಿ) ವ್ಯಾಪಾರ ಮತ್ತು ವ್ಯವಹಾರದಿಂದ.

ಸಿ) ಕುಶಲಕರ್ಮಿ ಕೆಲಸಗಳಿಂದ.

2) ಭೂಮಿ ಹಂಚಿಕೆಯಾದ ಬಳಿಕ ಕೃಷಿಯಿಂದ ವಾರ್ಷಿಕ ಆದಾಯ.

3) ಭೂ ಹಂಚಿಕೆ ಯೋಜನೆಯಿಂದ ಮೇಲಾದಾಯ.

4) ಭೂಮಿ ಹಂಚಿಕೆಯಾದ ಬಳಿಕ ಉತ್ಪಾದಕ ಆಸ್ತಿಗಳನ್ನು ಮಾಡಿದ್ದು.

ಎ) ಚರ ಆಸ್ತಿಗಳು. ಬಿ) ಸ್ಥಿರ ಆಸ್ತಿಗಳು. ಸಿ). ಇತರೆ.

**VII. ಭೂಮಿ ಪಡೆದ ನಂತರ ಮಹಿಳೆಯರ ಪಾತ್ರದಲ್ಲಿ ಆದ ಬದಲಾವಣೆ. ಮತ್ತು ಅಂತಸ್ತು.**

1. ನಿಮ್ಮ ಕುಟುಂಬದ ಸ್ಥಾನ ಮಾನದಲ್ಲಿ. ಮತ್ತು ನಿಮ್ಮ ಪಾತ್ರದಲ್ಲಿ ಈ ಕೆಳಗಿನ ವಿಷಯಗಳಲ್ಲಿ ಏನಾದರೂ ಬದಲಾವಣೆ ಕಾಣುತ್ತಿದ್ದೀರಾ?

- ಭೂಮಿಗೆ ಸಂಬಂಧ ಪಟ್ಟಂತೆ,
- ಹಣಕಾಸಿನ ವಿಷಯದಲ್ಲಿ.
- ಶಿಕ್ಷಣ.
- ಮದುವೆ ಮುಂಜಿಗಳಲ್ಲಿ,
- ಖರ್ಚುಗಳ ವಿಚಾರದಲ್ಲಿ.
- ಇತರೆ ವಿವರಿಸಿ.

2. ಭೂಮಿಯ ಹಂಚಿಕೆ ಬಳಿಕ ನಿಮ್ಮ ಕುಟುಂಬದವರಲ್ಲಿ ನಿಮ್ಮ ಬಗ್ಗೆ ಧೋರಣೆಯಲ್ಲಿ ಬದಲಾವಣೆ ಆಗಿದೆಯೆಂದು ಭಾವಿಸುತ್ತೀರಾ? ಹೌದು/ಇಲ್ಲ.

ಹೌದಾದರೆ ಎಷ್ಟರ ಮಟ್ಟಿಗೆ, ಎ) ಮಹತ್ತರ. ಬಿ) ಸ್ವಲ್ಪ ಮಟ್ಟಿಗೆ ಸಿ) ಬಹಳ ಕಡಿಮೆ,(ನಿಕೃಷ್ಟ) ಡಿ) ಬದಲಾವಣೆಯಿಲ್ಲ.

3. ಭೂಮಿ ಹಂಚಿಕೆ ಬಳಿಕ ನಿಮ್ಮ ಕೌಟುಂಬಿಕ ಹಾಗೂ ಸಾಮಾಜಿಕ ವೃತ್ತದಲ್ಲಿ ನಿಮ್ಮ ಸ್ಥಾನ ಮಾನ ಹೆಚ್ಚಾಗಿದೆ ಮತ್ತು ನೀವು ಸಬಲೀಕರಣಗೊಂಡಿರೆಂದು ನಿಮಗನಿಸುತ್ತಿದೆಯೇ? ಹೌದು/ಇಲ್ಲ.

**VIII. ಫಲಾನುಭವಿಗಳಿಂದ ಸಾಲ ಮರುಪಾವತಿ ಸ್ಥಿತಿ.**

1. ನೀವು ನಿಗಮದಿಂದ ಪಡೆದ ಸಾಲವನ್ನು ಪೂರ್ತಿಯಾಗಿ ಮರುಪಾವತಿ ಮಾಡಿದ್ದೀರಾ.? ಹೌದು/ಇಲ್ಲ.

ಇಲ್ಲದಿದ್ದರೆ ಸಾಲ ಮರುಪಾವತಿಯಲ್ಲಿ ಸುಸ್ತಿದಾರರಾಗುವುದೇಕೆ.

ಏ) ಎಲ್ಲ ಮೂಲಗಳಿಂದ ಬರುವ ಆದಾಯ ಕಡಿಮೆ.

ಬಿ) ಅನಿರೀಕ್ಷಿತ ಕೌಟುಂಬಿಕ ವೆಚ್ಚಗಳು.

ಸಿ) ಮಕ್ಕಳ ವಿದ್ಯಾಭ್ಯಾಸ/ ಮದುವೆಗಳು.

ಡಿ) ಅನಿರೀಕ್ಷಿತ ವೈದ್ಯಕೀಯ ವೆಚ್ಚಗಳು.

ಇ) ಕೂಡಿಟ್ಟ ಹಣವನ್ನು ಭೋಗ ವಸ್ತುಗಳಿಗೆ ವ್ಯಯಿಸುವುದು.

ಎಫ್) ಚರ ಮತ್ತು ಸ್ಥಿರ ಆಸ್ತಿಗಳಿಗೆ ಆದಾಯವನ್ನು ವಿನಿಯೋಗಿಸುವುದು.

ಜಿ) ಇತರೆ (ವಿವರಿಸಿ)

ಎಚ್) ಸರ್ಕಾರದಿಂದ ಸಾಲ ಮನ್ನಾಕ್ಕಾಗಿ ಕಾಯುವುದು.

